ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 1 ಮಂಗಳವಾರ 2022

₹4

ಸಂಪುಟ: 43 | ಸಂಚಿಕೆ: 195 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ನಾಳೆ ಆಕಾಶವಾಣಿಯಲ್ಲಿ 'ಭಾರತೀಯ ಹಬ್ಬಗಳು' ಪ್ರಾಯೋಜಿತ ಕಾರ್ಯಕ್ರಮ



ಮೈಸೂರು: ಇನ್ಫೋಸಿಸ್ ಫೌಂಡೇಷನ್, ಬೆಂಗಳೂರು ಮತ್ತು ಭಾರತೀಯ ವಿದ್ಯಾ ಭವನ, ಬೆಂಗಳೂರು–ಮೈಸೂರು ಸಂಯುಕ್ತಾಶ್ರಯದಲ್ಲಿ ನ.4ರಿಂದ 10ರವರೆಗೆ ಏಳು ದಿನಗಳ ಕಾಲ ಹುಣಸೂರು ರಸ್ತೆಯ ಕಲಾ ಮಂದಿರದಲ್ಲಿ ಏರ್ಪಡಿಸಿರುವ ಸಾಂಸ್ಕೃತಿಕ ಉತ್ಸವ 'ಭಾರತೀಯ ಹಬ್ಬಗಳು' ಕುರಿತು ನ.2(ಬುಧವಾರ) ಬೆಳಗ್ಗೆ 8.30ಕ್ಕೆ ಮೈಸೂರು ಆಕಾಶವಾಣಿ ಕೇಂದ್ರದಲ್ಲಿ ಪೂರ್ವಾವಲೋಕನ ಕಾರ್ಯಕ್ರಮವಿದೆ. ಇದರಲ್ಲಿ ಭಾರತೀಯ ವಿದ್ಯಾಭವನ, ಮೈಸೂರು ಕೇಂದ್ರದ ವೈಸ್ ಛೇರ್ಮನ್ ಡಾ.ಸಿ.ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ ಮತ್ತು ಸದಸ್ಯ ಡಾ.ತುಳಸಿರಾಮ ಚಂದ್ರ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮ ಭಾರತೀಯ ವಿದ್ಯಾಭವನದ ಪ್ರಾಯೋಜಕತ್ವದಲ್ಲಿ ಪ್ರಸಾರವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.



ಪಡುವಾರಹಳ್ಳಿ (ವಿನಾಯಕನಗರ) ಸ್ನೇಹ ಬಳಗದಿಂದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಿ.ಮಾದೇಗೌಡ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು, ಸಿ.ಡಿ.ಕುಮಾರ್, ಕಿಟ್ಟಿ ಕೆ.ಎಂ.ಬಸವೇಗೌಡ, ಲೋಕೇಶ್ ಉಪಸ್ಥಿತರಿದ್ದರು.



ಇತ್ತೀಚೆಗೆ 50ನೇ ಹುಟ್ಟುಹಬ್ಬ ಆಚರಿಸಿಕೊಂಡ ಕರ್ನಾಟಕ ಕಾವಲು ಪಡೆಯ ರಾಜ್ಯಾಧ್ಯಕ್ಷ ಎಂ.ಮೋಹನ್‌ಕುಮಾರ್‌ಗೌಡ ಅವರನ್ನು ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಧರ್ಮದರ್ಶಿ ಎಂ.ದೇಶೀಗೌಡ, ಕರ್ನಾಟಕ ಕಾವಲು ಪಡೆಯ ಉಪಾಧ್ಯಕ್ಷ ಟಿ.ರವಿಗೌಡ, ರಾಜಣ್ಣ, ನಾರಾಯಣ, ಕೆ.ಕೆ.ಕುಮಾರ್, ಮಹದೇವು, ರಾಜ್‌ಕುಮಾರ್, ಕೃಷ್ಣ, ಚಂದ್ರು, ಶ್ರೀನಿವಾಸ್, ಪಾಪಣ್ಣ, ರಾಜು ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಕಬ್ಬಿಗೆ ಎಫ್‌ಆರ್‌ಪಿ ದರ ಹೆಚ್ಚಳಕ್ಕೆ ಆಗ್ರಹ

ಕಬ್ಬು ಬೆಳೆಗಾರರಿಂದ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನಾ ಧರಣಿ

ಮೈಸೂರು,ಅ.31(ಪಿಎಂ)– ಕಬ್ಬಿಗೆ ಎಫ್‌ಆರ್‌ಪಿ ದರ ಹೆಚ್ಚಳ ಮಾಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನಾ ಧರಣಿ ಆರಂಭಿಸಲಾಯಿತು.



ಮೈಸೂರಿನ ಗನ್‌ಹೌಸ್ ವೃತ್ತದಲ್ಲಿ ಜಮಾಯಿಸಿದ ರೈತರು, ಪ್ರತಿಭಟನಾ ಮೆರವಣಿಗೆ ಮೂಲಕ ಡಿಸಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿ, ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನಾ ಧರಣಿ ಆರಂಭಿಸಿದರು. ಸಂಜೆ ವೇಳೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಶಾಮಿಯಾನ ಹಾಕಿ, ಸ್ಥಳದಲ್ಲಿ ಅಡುಗೆ ತಯಾರಿಸಿ, ರಾತ್ರಿ ಊಟ ಮಾಡಿ ಹೋರಾಟ ಮುಂದುವರೆಸಿದ್ದಾರೆ. ಕೇಂದ್ರ ಸರ್ಕಾರ ಟನ್‌ಗೆ ಕಬ್ಬಿಗೆ ಎಫ್‌ಆರ್‌ಪಿ ದರವನ್ನು 3,050 ರೂ. (ಟನ್ ಕಬ್ಬಿಗೆ ಶೇ.10.25ರಷ್ಟು ಇಳುವರಿಗೆ) ನಿಗದಿ ಮಾಡಿದೆ. ಇದನ್ನು ಎಸ್‌ಎಪಿ ದರದ ಅಡಿ 3,500 ರೂ.ಗೆ ಹೆಚ್ಚಳ ಮಾಡಬೇಕು. ಈ ಸಂಬಂಧ ನಿರಂತರ ಹೋರಾಟ ನಡೆಸುತ್ತಿದ್ದರೂ ಸರ್ಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ. ದರ ಹೆಚ್ಚಳಕ್ಕೆ ಸರ್ಕಾರ ಯಾವುದೇ ಪ್ರಯತ್ನ ಮಾಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತರು ಮತ್ತು ಕಬ್ಬು ಕಾರ್ಖಾನೆ ನಡುವೆ ಜಾರಿಗೆ ತಂದಿರುವ ದ್ವಿಪಕ್ಷೀಯ ಒಪ್ಪಂದ ಪತ್ರ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು. ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಬೇಕು. ವಿದ್ಯುತ್ ಖಾಸಗೀಕರಣ ಪ್ರಸ್ತಾಪ ಕೈಬಿಡಬೇಕು. ಕೃಷಿ ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಸಬಾರದು ಎಂದು ಒತ್ತಾಯಿಸಿದರು. ಮಧ್ಯಾಹ್ನದ ವೇಳೆಗೆ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಜಿ.ವಿ. ರಾಜೇಂದ್ರ, ಕಬ್ಬಿನ ದರ ನಿಗದಿ ಸರ್ಕಾರದ ಹಂತದಲ್ಲಿ ಆಗಬೇಕಿರುವ ಹಿನ್ನೆಲೆಯಲ್ಲಿ ತಮ್ಮ ಮನವಿ ಪತ್ರವನ್ನು ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ತಿಳಿಸಿದರು.

ಬ್ಯಾಂಕುಗಳು ರೈತರಿಗೆ ಬರುವ ಪಿಎಂ ಕಿಸಾನ್, ವೃದ್ಧಾಪ್ಯ ವೇತನ, ಬೆಳೆ ನಷ್ಟ ಪರಿಹಾರ ಹಣವನ್ನು ಬ್ಯಾಂಕ್‌ಗಳು ರೈತರ ಸಾಲಕ್ಕೆ ಜಮಾ ಮಾಡಿಕೊಳ್ಳುತ್ತಿವೆ. ಇದಕ್ಕೆ ತಡೆಯೊಡ್ಡಬೇಕೆಂದು ಜಿಲ್ಲಾಧಿಕಾರಿಗಳನ್ನು ಇದೇ ವೇಳೆ ಪ್ರತಿಭಟನಾಕಾರರು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ರೈತರ ಖಾತೆಗೆ ಬಂದಿರುವ ಸರ್ಕಾರಿ ಯೋಜನೆಗಳ ಯಾವುದೇ ಹಣವನ್ನು ಸಾಲಕ್ಕೆ ವಜಾ ಮಾಡಿಕೊಳ್ಳದಂತೆ ಈಗಲೇ ಬ್ಯಾಂಕ್‌ಗಳಿಗೆ ಪತ್ರದ ಮುಖೇನ ಸೂಚನೆ ನೀಡುತ್ತೇನೆ ಎಂದು ಭರವಸೆ ನೀಡಿದರಲ್ಲದೆ, ಪ್ರತಿಭಟನೆ ಕೈಬಿಡುವಂತೆ ಕೋರಿದರು. ಇದಕ್ಕೆ ಒಪ್ಪದ ಪ್ರತಿಭಟನಾಕಾರರು, ಕೇಂದ್ರ ಸರ್ಕಾರ ಎಫ್‌ಆರ್‌ಪಿ ದರ ನಿಗದಿ ಮಾಡಿರುವುದು ಅವೈಜ್ಞಾನಿಕ. ಬೇಡಿಕೆ ಈಡೇರುವವರೆಗೂ ಹೋರಾಟ ಕೈಬಿಡಲು ಸಾಧ್ಯವಿಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಡಿಸಿ, ನನ್ನಿಂದ ಎಷ್ಟು ಸಾಧ್ಯವೋ ಅಷ್ಟು ಕ್ರಮ ಕೈಗೊಳ್ಳುತ್ತೇನೆ ಎಂದು ತಿಳಿಸಿ, ನಿರ್ಗಮಿಸಿದರು. ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾಧ್ಯಕ್ಷ ಸೋಮಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ್, ಮುಖಂಡರಾದ ಪರಶಿವಮೂರ್ತಿ, ರಾಜಣ್ಣ, ಸಿದ್ದೇಶ್, ಪ್ರಸಾದ್ ನಾಯಕ, ಶಂಕರ್, ಗೌರಿಶಂಕರ್, ಗುರುಸ್ವಾಮಿ, ಪ್ರದೀಪ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

ನಯನಗೆ ಪಿಹೆಚ್.ಡಿ ಪದವಿ




ಮೈಸೂರು,ಅ.31–ಡಾ.ಸವಿತಾ ತಿಮ್ಮಯ್ಯ ಅವರ ಮಾರ್ಗದರ್ಶನದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಮಹದೇವು ಪುತ್ರಿ ಎಂ. ನಯನ ಸಾದರ ಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಅರ್ಥಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಪೆಟ್ರೋಲ್, ಡೀಸೆಲ್ ದರ 40 ಪೈಸೆ ಇಳಿಕೆ

ಬೆಂಗಳೂರು: ಪೆಟ್ರೋಲ್, ಡೀಸೆಲ್ ದರ ಪ್ರತಿ ಲೀಟರ್‌ಗೆ 40 ಪೈಸೆ ಇಳಿಕೆ ಮಾಡಲಾಗಿದೆ. ನವದೆಹಲಿಯಲ್ಲಿ ಸೋಮವಾರ ಪೆಟ್ರೋಲ್ ಬೆಲೆ 96.72 ರೂ. ಇದ್ದರೆ ಮುಂಬೈನಲ್ಲಿ 106.31 ರೂ. ಕೋಲ್ಕತ್ತಾದಲ್ಲಿ 106.03 ರೂ., ಚೆನ್ನೈನಲ್ಲಿ 102.63 ರೂ. ಇತ್ತು.


ನಿಧನ

ಕೆ.ವಿ.ಗೋವಿಂದರಾಜು



ಮೈಸೂರು: ಮೈಸೂರಿನ ಕುವೆಂಪುನಗರದ ನಿವಾಸಿ 97 ವರ್ಷದ ಕೆ.ವಿ.ಗೋವಿಂದರಾಜು ಇಂದು ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಶ್ರೀಮತಿ ಇಂದಿರಮ್ಮ, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮೈಸೂರಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಯಾಶಂಕರ್ ರಾವ್ ಘನತೆ



ಮೈಸೂರಿನ ವಿವಿ ಮೊಹಲ್ಲಾ ನಿವಾಸಿ ದಯಾಶಂಕರ ರಾವ್ ಘನತೆ(80) ಅವರು ನಿಧನರಾದರು. ಮೃತರು ಪತ್ನಿ, ಪುತ್ರ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗೋಕುಲಂ ಚಿರಶಾಂತಿ ಧಾಮದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನ.25ರೊಳಗೆ ಬಾಕಿ ಉಳಿದಿರುವ ರಸ್ತೆ ಅಭಿವೃದ್ಧಿ ಕಾಮಗಾರಿ ಮುಗಿಸಿ

ನಗರಪಾಲಿಕೆ ಅಧಿಕಾರಿಗಳು, ಗುತ್ತಿಗೆದಾರರಿಗೆ ಮೇಯರ್ ಶಿವಕುಮಾರ್ ಸೂಚನೆ

ಮೈಸೂರು, ಅ.31(ಆರ್‌ಕೆ)– ನವೆಂಬರ್ 25 ರೊಳಗಾಗಿ ಮೈಸೂರಿನಲ್ಲಿ ಬಾಕಿ ಉಳಿದಿರುವ ರಸ್ತೆ ಡಾಂಬರೀಕರಣ, ಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಮೇಯರ್ ಶಿವಕುಮಾರ್ ತಾಕೀತು ಮಾಡಿದ್ದಾರೆ.



ಮೈಸೂರು ಮಹಾನಗರ ಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ರಸ್ತೆ ಕಾಮಗಾರಿ ಕುರಿತಂತೆ ಇಂದು ಸಭೆ ನಡೆಸಿದ ಅವರು, ದಸರಾ ಮಹೋತ್ಸವದೊಳಗಾಗಿ ರಸ್ತೆ ಗುಂಡಿ ಮುಚ್ಚುವುದು, ವೆಟ್ಲಿಂಗ್ ಮಾಡಿ ಡಾಂಬರೀಕರಣ, ಮಳೆ ನೀರು ಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ವರ್ಕ್ ಆರ್ಡರ್ ನೀಡಲಾಗಿತ್ತು. ಮಳೆ ಕಾರಣ ನೀಡಿದ್ದೀರಿ. ಇದೀಗ ಮಳೆ ನಿಂತು ಹಲವು ದಿನ ಕಳೆದರೂ ಕಾಮಗಾರಿ ಆರಂಭಿಸದಿರುವುದಕ್ಕೆ ಗರಂ ಆದರು.

ಕೆ.ಆರ್, ಚಾಮರಾಜ ಕ್ಷೇತ್ರದ ಶಾಸಕರು ತಂದಿರುವ ಅನುದಾನ, ಈ ಹಿಂದಿನ ಮೇಯರ್ ಸುನಂದ ಪಾಲನೇತ್ರ ಅವರು ಮಂಜೂರು ಮಾಡಿಸಿರುವ ಹಣದಿಂದ ರಸ್ತೆ ಕಾಮಗಾರಿಗಳಿಗೆ ಟೆಂಡರ್ ಮೂಲಕ ಕಾರ್ಯಾದೇಶ ನೀಡಲಾಗಿದೆ. ನಿಗದಿತ ಅವಧಿಯೊಳಗೆ ಕೆಲಸ ಮಾಡದೇ ಮಳೆ ನೆಪ ಹೇಳಿ ಸುಮ್ಮನಿದ್ದರೆ, ಗುಂಡಿಮಯವಾಗಿರುವ ರಸ್ತೆಗಳಲ್ಲಿ ಓಡಾಡಲಾರದೇ ಜನರು ಪಾಲಿಕೆಗೆ ಹಿಡಿಶಾಪ ಹಾಕುತ್ತಿದ್ದಾರೆ ಎಂದೂ ಮೇಯರ್ ತರಾಟೆಗೆ ತೆಗೆದುಕೊಂಡರು. ಇನ್ನೆರಡು ದಿನಗಳಲ್ಲಿ ಕಾಮಗಾರಿ ಪುನರಾರಂಭಿಸಿ ತ್ವರಿತವಾಗಿ ಗುಣಮಟ್ಟದ ಕೆಲಸ ಮಾಡಬೇಕು. ನ.25ರೊಳಗಾಗಿ ಮೈಸೂರಿನ ಎಲ್ಲಾ ರಸ್ತೆಗಳಿಗೂ ಡಾಂಬರೀಕರಣ ಮಾಡಿ ಮುಗಿಸಬೇಕು. ಅಧಿಕಾರಿಗಳು ಸ್ಥಳದಲ್ಲಿದ್ದು ಮೇಲ್ವಿಚಾರಣೆ ಮಾಡಿ ಗುಣಮಟ್ಟ ಹಾಳಾಗದಂತೆ ನೋಡಿಕೊಳ್ಳಬೇಕೆಂದೂ ತಿಳಿಸಿದರು. ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್‌ರೆಡ್ಡಿ, ಸೂಪರಿಂಟೆಂಡೆಂಟ್ ಇಂಜಿನಿಯರ್ ಮಹೇಶ್, ಎಲ್ಲಾ ವಲಯ ಕಚೇರಿ ಇಂಜಿನಿಯರ್‌ಗಳು, ಗುತ್ತಿಗೆದಾರರು ಸಭೆಯಲ್ಲಿ ಉಪಸ್ಥಿತರಿದ್ದರು.

ನವೆಂಬರ್ ಅಂತ್ಯದ ವೇಳೆ ರಿಂಗ್ ರಸ್ತೆಯಲ್ಲಿ ಎಲ್‌ಇಡಿ ದೀಪ ಬೆಳಗಲಿವೆ

ಮೈಸೂರು: ನವೆಂಬರ್ ಅಂತ್ಯದ ವೇಳೆಗೆ ಮೈಸೂರಿನ ರಿಂಗ್ ರಸ್ತೆಯಲ್ಲಿ ದೀಪಗಳು ಬೆಳಗಲಿವೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ್ ರೆಡ್ಡಿ ತಿಳಿಸಿದ್ದಾರೆ.

ರಿಂಗ್ ರಸ್ತೆಯಲ್ಲಿ ಎರಡೂ ಬದಿಯ ದೀಪಗಳಿಗೆ ಗುಂಡಿ ತೆಗೆದು ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಈಗಾಗಲೇ ಸುಮಾರು 50 ಕಿ.ಮೀ ಪೂರ್ಣಗೊಂಡಿದೆ. ಉಳಿದ 34 ಕಿ.ಮೀವರೆಗೆ ಬಾಕಿ ಇದೆ. ಪಾಲಿಕೆ ಎಲೆಕ್ಟ್ರಿಕಲ್ ವಿಭಾಗದ ಇಂಜಿನಿಯರ್‌ಗಳು ಕಾಮಗಾರಿ ಮೇಲ್ವಿಚಾರಣೆ ನಡೆಸುತ್ತಿದ್ದಾರೆ ಎಂದು ಅವರು ತಿಳಿಸಿದರು.

ಜೊತೆಯಲ್ಲೇ ಎಲ್‌ಇಡಿ ಬಲ್ಬ್ ಅಳವಡಿಸುವ ಕಾರ್ಯವೂ ನಡೆಯುತ್ತಿರುವುದರಿಂದ ನವೆಂಬರ್ ಅಂತ್ಯದೊಳಗಾಗಿ ರಿಂಗ್ ರಸ್ತೆಯ 42.5 ಕಿ.ಮೀ ಉದ್ದಕ್ಕೂ ದೀಪಗಳು ಬೆಳಗಲಿವೆ. ಗುತ್ತಿಗೆದಾರರಿಗೆ ತ್ವರಿತವಾಗಿ ಕೆಲಸ ಮಾಡುವಂತೆ ಸೂಚಿಸಲಾಗಿದೆ. ಮುಡಾದಿಂದ ಕೇಬಲ್ ಮತ್ತು ಬಲ್ಬ್ ಅಳವಡಿಸಲು ಅನುದಾನ ಮಂಜೂರಾಗಿದ್ದು, ದೀಪ ನಿರ್ವಹಣೆ ಮತ್ತು ಮಾಸಿಕ ವಿದ್ಯುತ್ ಬಿಲ್ ಪಾವತಿಸುವ ಜವಾಬ್ದಾರಿಯನ್ನು ಪಾಲಿಕೆ ವಹಿಸಿಕೊಂಡಿದೆ. ಇನ್ನು ಮುಂದೆ ರಿಂಗ್ ರಸ್ತೆಯಲ್ಲಿ ದೀಪಗಳು ಸದಾ ಬೆಳಗುವಂತೆ ಕ್ರಮ ವಹಿಸಲಾಗುವುದು ಎಂದು ಆಯುಕ್ತರು ತಿಳಿಸಿದರು. ಅದೇ ರೀತಿ ಮೈಸೂರು ನಗರದಾದ್ಯಂತ ಎಲ್ಲಾ ಪ್ರಮುಖ ರಸ್ತೆ, ವಸತಿ ಬಡಾವಣೆಗಳ ದೀಪಗಳಿಗೂ ಎಲ್‌ಇಡಿ ಬಲ್ಬ್ ಅಳವಡಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ಕಾಮಗಾರಿ ಮುಂದುವರಿದಿದೆ. ಅದರಿಂದ ಮಿತ ವಿದ್ಯುತ್ ಬಳಕೆಯಾಗಿ ಬಿಲ್ಲಿನ ಹಣವೂ ಕಡಿಮೆಯಾಗಲಿದೆ ಎಂದೂ ನುಡಿದರು.

ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ



ಮೈಸೂರು,ಅ.31–ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಕೋಟೆ ನ.1 ಮತ್ತು 2ರಂದು ಮೈಸೂರು ಜಿಲ್ಲಾ ಪ್ರವಾಸ ಹಮ್ಮಿಕೊಂಡಿದ್ದಾರೆ. ನಾಳೆ ಬೆಳಗ್ಗೆ 8.30 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಕನ್ನಡ ರಾಜ್ಯೋತ್ಸವದಲ್ಲಿ ಭಾಗವಹಿಸುವರು. ನ.2 ರಂದು ಬೆಳಗ್ಗೆ 9 ಗಂಟೆಗೆ ಜಲದರ್ಶಿನಿ ಅತಿಥಿಗೃಹದಲ್ಲಿ ಪೌರಕಾರ್ಮಿಕ ಮುಖಂಡರೊಂದಿಗೆ ಚರ್ಚೆ ನಡೆಸುವರು. ಬೆಳಗ್ಗೆ 11 ಗಂಟೆಗೆ ಕುದುರೆಮಾಳದಲ್ಲಿ ವಾಸವಿರುವ ಪೌರಕಾರ್ಮಿಕರ ಮಕ್ಕಳೊಂದಿಗೆ ಸಂವಾದ ನಡೆಸುವರು. ಮಧ್ಯಾಹ್ನ 3 ಗಂಟೆಗೆ ಕುದುರೆಮಾಳದಲ್ಲಿ ವಾಸವಾಗಿರುವ ಪೌರಕಾರ್ಮಿಕರ ವಸತಿಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳೊಡನೆ ಸಭೆ ನಡೆಸುವರು.

ವಿದ್ಯಾರ್ಥಿವೇತನ ಹಾಸ್ಟೆಲ್‌ಗಳಿಗೆ ತುಂಬುವ ಪದ್ಧತಿ ಅನುಸರಣೆ ಆಗಲಿ

ಮಾಜಿ ಮೇಯರ್ ಪುರುಷೋತ್ತಮ್ ಆಗ್ರಹ



ಮೈಸೂರು,ಅ.31(ಎಂಟಿವೈ)– ಮೈಸೂರು ವಿಶ್ವವಿದ್ಯಾಲಯ ಸೇರಿದಂತೆ ಬಹುತೇಕ ಶಾಲಾ–ಕಾಲೇಜುಗಳಲ್ಲಿ ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವಿದ್ಯಾರ್ಥಿಗಳಿಗೆ ಸರ್ಕಾರದ ವಿದ್ಯಾರ್ಥಿವೇತನ ಬಿಡುಗಡೆಯಾದ ಬಳಿಕವೇ ಶುಲ್ಕ ಪಾವತಿ ಮಾಡಿಸಿಕೊಳ್ಳುವ ಬಗ್ಗೆ ಸರ್ಕಾರ ನಿರ್ಧಾರ ಪ್ರಕಟಿಸದಿದ್ದರೆ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಎಚ್ಚರಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಹಿಂದೆ ಹಾಸ್ಟೆಲ್‌ಗಳ ಶುಲ್ಕದ ಹಣವನ್ನು ನೇರವಾಗಿ ಹಾಸ್ಟೆಲ್‌ಗಳಿಗೇ ಪಾವತಿಸಲಾಗುತ್ತಿತ್ತು. ಈಗ ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ಹಾಕಲಾಗುತ್ತಿದೆ. ಇದರಿಂದಾಗಿ ಹಲವಾರು ವಿದ್ಯಾರ್ಥಿಗಳು ಇತರೆ ಉದ್ದೇಶಕ್ಕೆ ಬಳಸಿಕೊಂಡ ಬಳಿಕ ಹಾಸ್ಟೆಲ್ ಶುಲ್ಕ ಪಾವತಿಸಲಾಗುತ್ತಿಲ್ಲ. ಈ ವೇಳೆ ಇವರಿಗೆ ಕ್ಲಿಯರೆನ್ಸ್ ಪತ್ರ ಸಿಗದ ಕಾರಣ ಹಲವಾರು ಮಂದಿ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ವಿದ್ಯಾರ್ಥಿಗಳ ಹಾಸ್ಟೆಲ್ ಹಣವನ್ನು ಸರ್ಕಾರ ನೇರವಾಗಿ ಮೊದಲಿನಂತೆ ಹಾಸ್ಟೆಲ್‌ಗಳಿಗೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಜವರಪ್ಪ, ವಿಷಕಂಠ, ಸಿದ್ದಸ್ವಾಮಿ ಇದ್ದರು.

ನಾಳೆ ಗಾನಾಮೃತ ಕಾರ್ಯಕ್ರಮ

ಮೈಸೂರು,ಅ.31(ಎಂಟಿವೈ)– ಕನ್ನಡ ರಾಜ್ಯೋತ್ಸವದ ಹಿನ್ನೆಲೆಯಲ್ಲಿ ನ.2ರಂದು ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಗಾನಾಮೃತ–2 ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ದಟ್ಟಗಳ್ಳಿಯ ಸ್ಟ್ಯಾನ್ಲಿ ಪಾರ್ಕರ್ ಸ್ಕೂಲ್ ಆಫ್ ಮ್ಯೂಸಿಕ್ ಸಂಸ್ಥೆ ಮುಖ್ಯಸ್ಥ ಸ್ಟ್ಯಾನ್ಲಿ ಪಾರ್ಕರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ರಾಜ್ಯೋತ್ಸವದ ಸಂಭ್ರಮದ ಹಿನ್ನೆಲೆಯಲ್ಲಿ ಮೈಸೂರಿನ ಜನತೆಗೆ ಸಂಗೀತದ ರಸದೌತಣ ಉಣಬಡಿಸುವ ನಿಟ್ಟಿನಲ್ಲಿ ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ನ.2ರಂದು ಸಂಜೆ 4 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞೆ ಡಾ.ರೇಖಾ ಅನೂಪ್, ಕಸಾಪ ಮಾಜಿ ಜಿಲ್ಲಾಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಚರ್ಮರೋಗ ತಜ್ಞ ಡಾ.ಸುರೇಂದ್ರನ್ ಮುಂತಾದವರು ಪಾಲ್ಗೊಳ್ಳಲಿದ್ದಾರೆ. ಸಂಸ್ಥೆಯಲ್ಲಿ ಗಾಯನ ಅಭ್ಯಾಸ ಮಾಡುತ್ತಿರುವ 30ಕ್ಕೂ ಹೆಚ್ಚು ಗಾಯಕರು ಸುಮಧುರವಾದ ಕನ್ನಡ ಹಳೆಯ ಮತ್ತು ಹೊಸ ಚಿತ್ರಗೀತೆಗಳನ್ನು ಹಾಡಲಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸದಸ್ಯ ಸಿ.ಜಿ.ಮೂರ್ತಿ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.11.2022 ಮಂಗಳವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ,
ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ : ಉಷಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ತರಳಬಾಳು ಶಿಕ್ಷಣ ಕೇಂದ್ರ:** 67ನೇ ಕನ್ನಡ ರಾಜ್ಯೋತ್ಸವ ಸಮಾರಂಭ, ಮುಖ್ಯ ಅತಿಥಿಗಳು : ನಿವೃತ್ತ ಪ್ರಾಂಶುಪಾಲ ಡಾ. ಕೆ.ಕಾಳಚನ್ನೇಗೌಡ, ಬಹುಮಾನ ವಿತರಣೆ : ತರಳಬಾಳು ಶಿಕ್ಷಣ ಕೇಂದ್ರ ಸ್ಥಳೀಯ ಸಲಹಾ ಸಮಿತಿ ಅಧ್ಯಕ್ಷ ಡಾ. ಜಿ.ಆರ್. ಶಿವಮೂರ್ತಿ, ಅಧ್ಯಕ್ಷತೆ : ತರಳಬಾಳು ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಿ. ನಾಗೇಂದ್ರ, ಸ್ಥಳ: ಶಾಲಾ ಆವರಣ, ಬೆಳಗ್ಗೆ 8.45ಕ್ಕೆ.



■ **ಜಿಲ್ಲಾಡಳಿತ :** ಕನ್ನಡ ರಾಜ್ಯೋತ್ಸವ ಆಚರಣೆ, ಬೆಳಗ್ಗೆ 8.30ಕ್ಕೆ ಅರಮನೆ ಆವರಣದಲ್ಲಿರುವ ಶ್ರೀ ಭುವನೇಶ್ವರಿ ದೇವಿಗೆ ಪೂಜೆ, ಬೆಳಗ್ಗೆ 9ಕ್ಕೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಆವರಣದಲ್ಲಿ ಧ್ವಜಾರೋಹಣ: ಸಚಿವ ಎಸ್.ಟಿ.ಸೋಮಶೇಖರ್, ಅಧ್ಯಕ್ಷತೆ: ಶಾಸಕ ಎಸ್.ಎ.ರಾಮದಾಸ್, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಆವರಣ

■ **ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ, ಕನ್ನಡ ಸಹೃದಯ ಬಳಗ :** ಕನ್ನಡ ರಾಜ್ಯೋತ್ಸವ ಆಚರಣೆ, ಧ್ವಜಾರೋಹಣ : ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್, ಉದ್ಘಾಟನೆ : ಹಿರಿಯ ಸಾಹಿತಿ ಪ್ರೊ. ಸಿ.ಪಿ.ಕೃಷ್ಣಕುಮಾರ್, ಅಧ್ಯಕ್ಷತೆ : ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್, ಸ್ಥಳ: ಚೆಲುವಾಂಬ ಅರಮನೆ, ಸಿಎಸ್‌ಐಆರ್–ಸಿಎಫ್‌ಟಿಆರ್‌ಐ, ಬೆಳಗ್ಗೆ 9ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಜೆಎಸ್‌ಎಸ್ ಪದವಿಪೂರ್ವ ಕಾಲೇಜು :** 67 ಕನ್ನಡ ರಾಜ್ಯೋತ್ಸವ ಆಚರಣೆ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಮುಖ್ಯ ಅತಿಥಿಗಳು: ಪ್ರಾಧ್ಯಾಪಕರಾದ ಪ್ರೊ. ಎಂ. ಶಂಕರ, ಪ್ರಾಂಶುಪಾಲರಾದ ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್, ಎಸ್. ಸೋಮಶೇಖರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ, ಉನ್ನತ ಶಿಕ್ಷಣ ಇಲಾಖೆ, ಶಿಕ್ಷಣ ಸಚಿವಾಲಯ:** 14ನೇ ಶಾಸ್ತ್ರೀಯ ಕನ್ನಡ ಮಾನ್ಯತಾ ದಿನಾಚರಣೆ ಹಾಗೂ 67ನೇ ರಾಜ್ಯೋತ್ಸವ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಡಾ.ಈಶ್ವರ ದೈತೋಟ, ಅಧ್ಯಕ್ಷತೆ: ಭಾರತೀಯ ಭಾಷಾ ಸಂಸ್ಥಾನ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಉಪಸ್ಥಿತರು: ಟಿ.ಎಸ್.ನಾಗಾಭರಣ, ಪ್ರೊ. ಎನ್.ಎಸ್.ರಂಗರಾಜು, ಪ್ರೊ. ಎನ್.ಎಂ.ತಳವಾರ್, ಪ್ರೊ. ಟಿ.ಎಸ್.ಸತ್ಯನಾಥ್, ಪ್ರೊ.ಬಸವರಾಜ ಕಲ್ಗುಡಿ, ಪ್ರೊ. ಆರ್ವಿಯಸ್ ಸುಂದರಂ, ಸ್ಥಳ: ಭಾರತೀಯ ಭಾಷಾ ಸಂಸ್ಥಾನದ ಆವರಣ, ಮಾನಸಗಂಗೋತ್ರಿ, ಬೆಳಗ್ಗೆ 10 ಗಂಟೆಯಿಂದ.

■ **ನಾಟ್ಯ ಪ್ರದರ್ಶಕ ಕಲೆಗಳ ಸಂಸ್ಥೆ :** 67ನೇ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಕನ್ನಡ ಕಾರಂಜಿ ಸಾಂಸ್ಕೃತಿಕ ಸ್ಪರ್ಧೆಗಳು, ಸ್ಥಳ: ಬಿ.ಎಂ. ಹ್ಯಾಬಿಟಾಟ್ ಮಾಲ್, ಬಿಎಂಎಚ್ ಆಸ್ಪತ್ರೆ ಹತ್ತಿರ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.10 ಗೀತಾರಾಧನ, 6.30 ಕವಿ ನುಡಿ ಸವಿನುಡಿ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ.ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಸಿ.ವಿಶ್ವನಾಥ್, ಕೆ.ಬಿ.ಸುನೀತಾ ಆಚಾರ್ಯ, ವ್ಯಾಖ್ಯಾನ–ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ–ಉಮೇಶ್.ಎಸ್., 8.30 "ಉಲಿ ಉಯ್ಯಾಲೆ" ಸರಣಿಯ ಮೊದಲ ಕಾರ್ಯಕ್ರಮ "ಪ್ರವೇಶ", ಲೇಖನ– ಡಾ. ಶಿವರಾಮಶೆಟ್ಟಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, ಪ್ರಾಯೋಜಕರು–ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ, ಮೈಸೂರು, 9.05 ಕರ್ನಾಟಕ ರಾಜ್ಯೋತ್ಸವ ಕುರಿತ ವಿಶೇಷ ಕಾರ್ಯಕ್ರಮ, 10.00 ವಿ.ಕೃಷ್ಣಮೂರ್ತಿ–ನಾದಸ್ವರ ವಾದನ, 10.30 ಪುನೀತ ಸಂವಾದ–ಪುನೀತ್ ರಾಜ್‌ಕುಮಾರ್ ಅವರೊಂದಿಗೆ ನಡೆಸಿದ್ದ ಸಂದರ್ಶನದ ಮರುಪ್ರಸಾರ ನಡೆಸಿಕೊಡುತ್ತಾರೆ–ಡಾ.ಮೈಸೂರು ಉಮೇಶ್ **ಮಧ್ಯಾಹ್ನ:** 12.05 ವನಿತಾವಿಹಾರ–ಚಾಮರಾಜ ನಗರದ ರಂಗಭೂಮಿ ಕಲಾವಿದೆ ಎಸ್.ಶಿಲ್ಪಾ ಅವರೊಂದಿಗೆ ಮಾತುಕತೆ, ಪ್ರಸ್ತುತಿ–ಅಬ್ದುಲ್ ರಶೀದ್, 12.30 ದೇವರನಾಮ–ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಸಂಗಡಿಗರು, 12.45 ಬಣ್ಣದ ಬದುಕು–ಪ್ರೊ.ಸಿ.ವಿ.ಶ್ರೀಧರಮೂರ್ತಿ ಅವರಿಂದ ವಿನೋದ ಭಾಷಣ, 1.20 ಭಾವಗೀತೆಗಳು–ರೇಖಾ ರವಿಶಂಕರ್, 3.00 ಡಿ.ಕೆ.ಪಟ್ಟಮ್ಮಾಳ್–ಹಾಡುಗಾರಿಕೆ, 4.00 ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ ನೀಡುತ್ತಿರುವ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದ ನೇರ ಪ್ರಸಾರ, 6.50 ಕೃಷಿರಂಗ–ಕಿಸಾನ್‌ವಾಣಿ– ಹೈನುರಾಸುಗಳಲ್ಲಿ ಕೆಚ್ಚಲ ಬಾವು ಮತ್ತು ನಿರ್ವಹಣೆ ಕುರಿತು ಡಾ.ಸವಿತಾ ಅವರೊಡನೆ ಸಂದರ್ಶನ, 9.30 ಜಿ.ಎನ್.ಬಾಲಸುಬ್ರಹ್ಮಣ್ಯಂ–ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ, ವಾಚನ– ಹೆಚ್.ಯಜ್ಞೇಶ್, ವ್ಯಾಖ್ಯಾನ–ಸರ್ಪಂಗಳ ಈಶ್ವರಭಟ್, 10.30 ಸವಿನೆನಪು

■ **ಬಸವ ಸಮಿತಿ:** ಶರಣ ಸಂಗಮ–275 ಮತ್ತು ರಾಜ್ಯೋತ್ಸವ, ಕನ್ನಡ ಗೀತೆಗಳ ಗಾಯನ, ಅಧ್ಯಕ್ಷತೆ: ಬಸವ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10ಕ್ಕೆ.

■ **ಮಹಾರಾಣಿ ಎನ್‌ಟಿಎಂ ಶಾಲೆ ಉಳಿಸಿ ಹೋರಾಟ ಒಕ್ಕೂಟ :** ಕನ್ನಡ ರಾಜ್ಯೋತ್ಸವ ಆಚರಣೆ, ಸ್ಥಳ: ಲಕ್ಷ್ಮೀ ಟಾಕೀಸ್ ಪಕ್ಕದಲ್ಲಿರುವ ಡಾ.ರಾಜ್‌ಕುಮಾರ್ ಪ್ರತಿಮೆ ಎದುರು, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಸೇನಾ ಪಡೆ :** ಕನ್ನಡ ರಾಜ್ಯೋತ್ಸವ ಆಚರಣೆ, ಸಾನ್ನಿಧ್ಯ : ಡಾ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಕನ್ನಡ ಬಾವುಟ ವಿತರಣೆ : ಶಾಸಕ ಸಿ.ಎನ್. ಮಂಜೇಗೌಡ, ಉಪಸ್ಥಿತರು : ಡಾ. ಬಿ.ಆರ್. ನಟರಾಜ್ ಜೋಯ್ಸ್, ಮಡ್ಡೀಕೆರೆ ಗೋಪಾಲ್, ಡಾ. ರಘುರಾಂ ವಾಜಪೇಯಿ, ನಂದೀಶ್ ಕುಮಾರ್, ಮರಿಸ್ವಾಮಿ, ಸಥಳ: ಅಗ್ರಹಾರ ವೃತ್ತ, ಬೆಳಗ್ಗೆ 11.30ಕ್ಕೆ.

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ.

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** 45ನೇ ವರ್ಷದ ಕಾರ್ತಿಕ ಮಾಸದ ಪೂಜಾ ಮಹೋತ್ಸವ, 24ನೇ ವರ್ಷದ ಮಹಾ ಕುಂಬಾಭಿಷೇಕ, 8ನೇ ವರ್ಷದ ಹಾಲರವಿ ಸೇವೆ, ಚಿನ್ಮಯಿ ಭಜನಾ ಮಂಡಳಿಯಿಂದ ಭಜನೆ, ಸ್ಥಳ: ದೇವಸ್ಥಾನದ ಆವರಣ, ಗರಡಿಕೇರಿ, ಸಂಜೆ 7 ಗಂಟೆಗೆ.

ಶ್ರೀ ಸುತ್ತೂರು ಕ್ಷೇತ್ರ

ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ


2.11.2022 ಬುಧವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ : ಧನಿಷ್ಠ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** 45ನೇ ವರ್ಷದ ಕಾರ್ತಿಕ ಮಾಸದ ಪೂಜಾ ಮಹೋತ್ಸವ, 24ನೇ ವರ್ಷದ ಮಹಾ ಕುಂಭಾಭಿಷೇಕ, 8ನೇ ವರ್ಷದ ಹಾಲರವಿ ಸೇವೆ, ವರಲಕ್ಷ್ಮಿ ಭಜನಾ ಮಂಡಳಿಯಿಂದ ಭಜನೆ, ಸ್ಥಳ: ದೇವಸ್ಥಾನದ ಆವರಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ, ಸಂಜೆ 7 ಗಂಟೆಗೆ.

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ.

■ **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಂಸ್ಥೆ, ಟೆಕ್ 4 ಫ್ಯುಯಲ್ಸ್, ಒಡಬ್ಲ್ಯುಐ ಸೈನ್ಸ್ ಫಾರ್ ಫ್ಯುಯಲ್ಸ್ :** ಸ್ವಚ್ಛ ಜೈವಿಕ ಇಂಧನ ಸಮಾವೇಶ, ಉದ್ಘಾಟನೆ : ಎನ್‌ಐಇ ಆಡಳಿತ ಮಂಡಳಿ ಅಧ್ಯಕ್ಷ ಡಾ. ಎಂ.ಎಸ್. ರಂಗನಾಥ್, ಉಪಸ್ಥಿತರು : ಸದಸ್ಯ ಎನ್. ಸತ್ಯಕುಮಾರ್, ಪ್ರಾಂಶುಪಾಲರಾದ ಪ್ರೊ. ರೋಹಿಣಿ ನಾಗಪದ್ಮ, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಕೆ.ಎಸ್. ಕಿರಣ್ ಕುಮಾರ್, ವೈ.ಬಿ. ರಾಮಕೃಷ್ಣ, ಡಾ. ಕ್ಲಾಸ್‌ಲುಕ್ಕ, ಸ್ಥಳ: ಸೈಲೆಂಟ್ ಶೋರ್ಸ್ ಸೆನೆಟ್ ಹಾಲ್, ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.10 ಗೀತಾರಾಧನ, 6.30ಕವಿ ನುಡಿ ಸವಿನುಡಿ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 6.35 ನಖ ಶಿಖಾಂತ, ಆರೋಗ್ಯ, ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ.ಕೇಶವ ಕೊರಸೆ, 6.40 ಅರಿವಿನ ಶಿಖರ– ಸದಾಶಿವ ಪಾಟೀಲ್, ವ್ಯಾಖ್ಯಾನ–ಡಾ.ಲತಾ ಮೈಸೂರು, 9.00 ಮನೋನಂದನ–ಪ್ರೇರಣಾ ಆಸ್ಪತ್ರೆ ಮೈಸೂರು ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, ವಿಷಯ–ಸಂತಾನ ಹೀನತೆಗೆ ಕಾರಣಗಳು ಮತ್ತು ಪರಿಹಾರ, ಭಾಗವಹಿಸುವವರು–ಡಾ.ಮಾಧುರಿ ಎನ್., 10.00 ನರಸಿಂಹಲು ವಾಡವಟ್ಟಿ–ಕ್ಲಾರಿಯೋನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಛತ್ರಿ", ರಚನೆ– ಯಮುನಾ ಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.00ಟಿ–20 ವಿಶ್ವಕಪ್ ಕ್ರಿಕೆಟ್ ಪಂದ್ಯದ ಅಂಗವಾಗಿ ಭಾರತ ಹಾಗೂ ಬಾಂಗ್ಲಾದೇಶ ತಂಡಗಳ ನಡುವೆ ಅಡಿಲೇಡ್‌ನಲ್ಲಿ ನಡೆಯಲಿರುವ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 5.30 ಸಿರಿ ತೋಟಗಾರಿಕೆ–ತೋಟಗಾರಿಕೆ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಹೈನುಗಾರಿಕೆಯಲ್ಲಿ ಕಂಡ ಯಶಸ್ಸು ಕುರಿತು ಎ.ಪ್ರಭಾಕರ್ ಹಾಗೂ ಮಹಾಲಕ್ಷ್ಮಿ ಅವರೊಡನೆ ಮಾತುಕತೆ, 10.00 ಹಳ್ಳಿಹಾಡು–ಶಂಕರೇಗೌಡ ಮತ್ತು ತಂಡ – ತತ್ವಪದಗಳು, 10.30 ಸವಿನೆನಪು

■ **ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆ :** ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಕುವೆಂಪುನಗರ, ಸಂಯ್ಯಾಜಿರಾವ್ ರಸ್ತೆಯ ಆಸ್ಪತ್ರೆ ಶಾಖೆಗಳು, ಬೆಳಗ್ಗೆ 10 ರಿಂದ.

ಶ್ರೀ ಸುತ್ತೂರು ಕ್ಷೇತ್ರ

ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 1 ಮಂಗಳವಾರ 2022

ಸಂಪುಟ: 43 | ಸಂಚಿಕೆ: 195 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕನ್ನಡ ರಾಜ್ಯೋತ್ಸವ ಅರ್ಥಪೂರ್ಣ ಆಚರಣೆ

ಇಂದು ಅಪ್ಪುಗೆ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ



ಬೆಂಗಳೂರು, ಅ. 31 (ಕೆಎಂಶಿ)–ಅರವತ್ತೇಳನೇ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಅರ್ಥಪೂರ್ಣವಾಗಿ ಆಚರಿಸುವ ಸಂಕಲ್ಪವನ್ನು ರಾಜ್ಯ ಸರ್ಕಾರ ಮಾಡಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕ ರಾಜ್ಯೋತ್ಸವ, ಕರ್ನಾಟಕ ರತ್ನ ಪ್ರಶಸ್ತಿ ಹಾಗೂ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಿದರು. ನಾಳೆ ನಾಡಿನಾದ್ಯಂತ ಗ್ರಾಮಗಳಲ್ಲಿ, ನಗರಗಳಲ್ಲಿ ಶಾಲೆ ಹಾಗೂ ಇತರೆ ಸಂಘ ಸಂಸ್ಥೆಗಳಲ್ಲಿ ಸರ್ಕಾರಿ ಕಚೇರಿಗಳಲ್ಲಿ ರಾಜ್ಯೋತ್ಸವ ಆಚರಿಸಬೇಕು, ಕನ್ನಡದ ಧ್ವಜಗಳನ್ನು ಹಾರಿಸಬೇಕು ಎಂದು ಕರೆ ನೀಡಿದರು.

ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ: ನಾಳೆ ಸಂಜೆ 4 ಗಂಟೆಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ಹಮ್ಮಿಕೊಳ್ಳಲಾಗಿದೆ. ದಿವಂಗತ ಡಾ. ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ ಈ ಪ್ರಶಸ್ತಿಯನ್ನು ಸರ್ಕಾರ ಕೊಡ ಮಾಡುತ್ತಿದ್ದು, ಅಭಿಮಾನಿ ಕನ್ನಡಿಗರು ಭಾಗವಹಿಸಬೇಕೆಂದು ಮುಖ್ಯಮಂತ್ರಿಗಳು ಕೋರಿದರು.



ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಎಲ್ಲಾ ಶ್ರೇಷ್ಠ ವ್ಯಕ್ತಿಗಳಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು. ನವೆಂಬರ್ 2, 3, 4 ರಂದು ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಜಗತ್ತಿನಾದ್ಯಂತ ಪ್ರಮುಖ ಉದ್ಯಮಿಗಳು, ಉದ್ದಿಮೆಯ ನಾಯಕರು ಈ ಸಮಾವೇಶದಲ್ಲಿ ಭಾಗವಹಿಸುತ್ತಿದ್ದು, ಜೊತೆಗೆ 5 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚಿನ ಬಂಡವಾಳ ಹೂಡಿಕೆಯಾಗುತ್ತದೆ.

ಈಗಾಗಲೇ ಬಹಳಷ್ಟು ಜನ ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಅವರ ಯೋಜನೆಗಳ ಅನುಮೋದನೆಯನ್ನೂ ಮಾಡಲಾಗಿದೆ. ಭರವಸೆ ಪತ್ರವನ್ನೂ ನಾಳೆ ವಿತರಿಸಲಿದ್ದು, ಮುಂದಿನ 3 ದಿನಗಳ ಕಾಲ ಹಲವಾರು ಕ್ಷೇತ್ರಗಳಲ್ಲಿ ಆಗುತ್ತಿರುವ ಪ್ರಗತಿ ಹಾಗೂ ನವೀಕರಿಸಬಹುದಾದ ಇಂಧನ, ಸೆಮಿಕಂಡಕ್ಟರ್, ಏರೋಸ್ಪೇಸ್, ರಕ್ಷಣಾ ಕ್ಷೇತ್ರ ಮುಂತಾದ ಪ್ರಮುಖ ಕ್ಷೇತ್ರಗಳ ಸವಾಲುಗಳು ಹಾಗೂ ಬೆಳವಣಿಗೆಯ ಬಗ್ಗೆ ಚರ್ಚಾಗೋಷ್ಠಿಗಳು ನಡೆಯಲಿವೆ. ದೇಶ ಹಾಗೂ ಅಂತರರಾಷ್ಟ್ರೀಯ ಮಟ್ಟದ ಎಲ್ಲಾ ಪರಿಣಿತರು ಗೋಷ್ಠಿಗಳಲ್ಲಿ ಭಾಗವಹಿಸಲಿದ್ದಾರೆ. ಮೂರು ದಿನಗಳ ಈ ಕಾರ್ಯಕ್ರಮ ರಾಜ್ಯದಲ್ಲಿ ಮುಂದಿನ 5 ವರ್ಷಗಳ ▶ 9ನೇ ಪುಟಕ್ಕೆ

ಶುಭಾಶಯಗಳು


ನಾಡಿನ ಸಮಸ್ತರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ಬಿಡುವು

ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 2.11.2022ರ ಬುಧವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಕೆಬಿಜಿಯವರ ಛೂಮಂತ್ರ... ಛೂಮಂತ್ರ...



ರಿಷಿ ಸುನಕ್ ಸುವರ್ಣ ಸಮಯ

ಇಂಗ್ಲೆಂಡ್ ತಕ್ಕ ಆಯ್ಕೆ ಮಾಡಿಕೊಂಡಿದೆ

■ ಪುಟ–4

ಭೂ ವಿವಾದಗಳ ಇತ್ಯರ್ಥಕ್ಕೆ ಇಲಾಖಾ ನ್ಯಾಯಾಲಯಗಳ

ಅಧಿಕಾರ ವಿಕೇಂದ್ರೀಕರಣ

● ಕಂದಾಯ ಸಚಿವ ಅಶೋಕ್ ಮಾಹಿತಿ ● ಡಿಸಿಯಿಂದ ಎಡಿಸಿ; ಎಸಿಯಿಂದ ಭೂಸ್ವಾಧೀನಾಧಿಕಾರಿ; ತಹಸೀಲ್ದಾರ್‌ರಿಂದ ಉಪತಹಸೀಲ್ದಾರ್‌ಗೆ ಅಧಿಕಾರ ● ಹೆಚ್ಚಿರುವ ವಿವಾದಗಳ ತ್ವರಿತ ವಿಲೇವಾರಿಗೆ ಈ ಕ್ರಮ

ಬೆಂಗಳೂರು, ಅ. 31 (ಕೆಎಂಶಿ)– ಭೂ ವಿವಾದಗಳು ಸೇರಿದಂತೆ ರಾಜ್ಯಾದ್ಯಂತ ಬಗೆಹರಿಯದೆ ಉಳಿದಿರುವ ಕಂದಾಯ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಸರ್ಕಾರ ಮುಂದಾಗಿದ್ದು, ಇಲಾಖಾ ನ್ಯಾಯಾಲಯಗಳ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಲಾಗುತ್ತಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಇಂದಿಲ್ಲಿ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಈ ವಿಷಯ ತಿಳಿಸಿದರಲ್ಲದೆ, ಕೋವಿಡ್ ಹಿನ್ನೆಲೆಯಲ್ಲಿ ಎರಡು ವರ್ಷಗಳ ಕಾಲ ಕಂದಾಯ ನ್ಯಾಯಾಲಯಗಳ ಕಲಾಪ ಸ್ಥಗಿತವಾಗಿತ್ತು. ಇದರಿಂದಾಗಿ ಒಂದು ಲಕ್ಷ ಸಮೀಪ ಪ್ರಕರಣಗಳು ವಿಲೇವಾರಿಯಾಗದೇ ಹಾಗೆಯೇ ಉಳಿದಿವೆ.

ಹಳೇ ಪ್ರಕರಣಗಳನ್ನು ಇಂತಿಷ್ಟು ಸಮಯದಲ್ಲಿ ತ್ವರಿತವಾಗಿ ಇತ್ಯರ್ಥಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಹೊರಡಿಸಲಾಗಿದೆ. ಕಂದಾಯ ಇಲಾಖೆ ವ್ಯಾಪ್ತಿಗೆ ಬರುವ ತಕರಾರುಗಳನ್ನು ಜಿಲ್ಲಾಧಿಕಾರಿಗಳ ನ್ಯಾಯಾಲಯ, ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಮತ್ತು ತಹಸೀಲ್ದಾರ್‌ಗಳ ನ್ಯಾಯಾಲಯ ವಿಚಾರಣೆ ಮಾಡಿ ಇತ್ಯರ್ಥಗೊಳಿಸುತ್ತದೆ. ತ್ವರಿತ ವಿಚಾರಣೆ ಕೈಗೊಳ್ಳುವ ಉದ್ದೇಶದಿಂದ ಇನ್ನು ಮುಂದೆ ಜಿಲ್ಲಾಧಿಕಾರಿಗಳ ನ್ಯಾಯಾಲಯ ಬಗೆಹರಿಸುತ್ತಿದ್ದ ಪ್ರಕರಣಗಳ ಕುರಿತು ಹೆಚ್ಚುವರಿ ಜಿಲ್ಲಾಧಿಕಾರಿಗಳು ವಿಚಾರಣೆ ನಡೆಸಿ ಇತ್ಯರ್ಥಗೊಳಿಸುತ್ತಾರೆ. ಹಾಗೆಯೇ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಇತ್ಯರ್ಥವಾಗುತ್ತಿದ್ದ ಪ್ರಕರಣಗಳ ವಿಚಾರಣೆಯನ್ನು ಭೂಸ್ವಾಧೀನಾಧಿಕಾರಿಗಳ ಮಟ್ಟದ ಅಧಿಕಾರಿಗಳು ನಡೆಸುತ್ತಾರೆ. ತಹಸೀಲ್ದಾರ್ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗುತ್ತಿದ್ದ ಪ್ರಕರಣಗಳ ವಿಚಾರಣೆಯನ್ನು ಉಪತಹಸೀಲ್ದಾರ್ ಕೂಡಾ ಇತ್ಯರ್ಥಪಡಿಸಲಿದ್ದಾರೆ ಎಂದು ವಿವರಿಸಿದರು. ಕಂದಾಯ ನ್ಯಾಯಾಲಯಗಳ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಿರುವ ಪರಿಣಾಮವಾಗಿ ಈಗ ಅವುಗಳ ಮುಂದಿರುವ ಲಕ್ಷಾಂತರ ಪ್ರಕರಣಗಳು ತ್ವರಿತವಾಗಿ ಇತ್ಯರ್ಥವಾಗಲಿವೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು. ಅಧಿಕಾರವನ್ನು ವಿಕೇಂದ್ರೀಕರಣಗೊಳಿಸುವ ಜತೆಗೆ ▶ 6ನೇ ಪುಟಕ್ಕೆ




ಇಂದಿನಿಂದ ಜೆಡಿಎಸ್ 'ಪಂಚರತ್ನ ರಥಯಾತ್ರೆ'

● ಮುಳಬಾಗಿಲು ತಾಲೂಕು ಕುರಡುಮಲೆಯಿಂದ ಯಾತ್ರೆ ಆರಂಭ ● ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವ ● ಈ ಹಿಂದೆ ದೇವೇಗೌಡರೂ ಇಲ್ಲಿಂದಲೇ ಯಾತ್ರೆ ಮಾಡಿ ಮುಖ್ಯಮಂತ್ರಿ ಆಗಿದ್ದರು

ಬೆಂಗಳೂರು, ಅ. 31(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲು ರಾಜಕೀಯ ಪಕ್ಷಗಳು ಯಾತ್ರೆಗಳ ಮೊರೆ ಹೋಗಿವೆ.

ಆಡಳಿತಾರೂಢ ಬಿಜೆಪಿ ಸಂಕಲ್ಪ ಯಾತ್ರೆ ನಡೆಸುತ್ತಿದ್ದರೆ, ಕಾಂಗ್ರೆಸ್ ರಾಹುಲ್‌ಗಾಂಧಿ ಅವರ ಭಾರತ್ ಜೋಡೋ ಯಾತ್ರೆ ಮುಗಿಸಿ, ಮತ್ತೊಂದು ಬೇರೆ ಯಾತ್ರೆಗೆ ರೂಪರೇಷೆ ಸಿದ್ಧಪಡಿಸಿದೆ. ಇದರ ನಡುವೆ ರಾಷ್ಟ್ರೀಯ ಪಕ್ಷಗಳಿಗಿಂತ ತಾವೇನು ಕಡಿಮೆ ಇಲ್ಲವೆಂಬಂತೆ ಜಾತ್ಯತೀತ ಜನತಾದಳ ನಾಳೆಯಿಂದ ಪಂಚರತ್ನ ಯಾತ್ರೆ ಆರಂಭಿಸುತ್ತಿದೆ. ವಿಧಾನಸಭೆ ಚುನಾವಣೆಯಲ್ಲಿ 123 ಸ್ಥಾನಗಳನ್ನು ಗೆಲ್ಲಬೇಕೆಂಬ ಗುರಿ ಹೊಂದಿರುವ ಜೆಡಿಎಸ್ ಸ್ವಂತ ಶಕ್ತಿಯ ಮೇಲೆ ಸರ್ಕಾರ ರಚಿಸಬೇಕೆಂಬ ಉದ್ದೇಶ ಹೊಂದಿದೆ. ಇದಕ್ಕಾಗಿ ಪಂಚರತ್ನ ಯಾತ್ರೆ ಹೆಸರಿನಲ್ಲಿ ಚುನಾವಣಾ ಪ್ರಚಾರವನ್ನು ಆರಂಭಿಸುತ್ತಿದೆ.



ನವ ಕರ್ನಾಟಕ ನಿರ್ಮಾಣಕ್ಕಾಗಿ ಮಹಾಯಾತ್ರೆ ಹೆಸರಿನಲ್ಲಿ ಈ ರಥಯಾತ್ರೆ ಕೈಗೊಳ್ಳಲಾಗುತ್ತಿದೆ. ಸಮಗ್ರ ಕರ್ನಾಟಕ ಅಭಿವೃದ್ಧಿಗೆ ಪಂಚರತ್ನ ಪರಿಪೂರ್ಣ ಪರಿಹಾರ ಎಂದು ಬಿಂಬಿಸಲಾಗುತ್ತಿದೆ. ನಾಳೆ ಬೆಳಗ್ಗೆ 9 ಗಂಟೆಗೆ ಮುಳಬಾಗಿಲು ತಾಲೂಕಿನ ಕುರುಡುಮಲೆ ಮಹಾಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಪಂಚರತ್ನ ಯಾತ್ರೆಗೆ ಅಧಿಕೃತ ಚಾಲನೆ ನೀಡಲಾಗುತ್ತದೆ. ಮಧ್ಯಾಹ್ನ ಮುಳಬಾಗಿಲಿನಲ್ಲಿ ಬೃಹತ್ ▶ 6ನೇ ಪುಟಕ್ಕೆ

ಚಿರತೆ ದಾಳಿಗೆ ಮೈಸೂರು ಮಹಾರಾಜ ಕಾಲೇಜು ವಿದ್ಯಾರ್ಥಿ ಬಲಿ



ತಿ.ನರಸೀಪುರ, ಅ.31– ತಾಲೂಕಿನ ಎಂ.ಎಲ್.ಹುಂಡಿ ಗ್ರಾಮದ ಬಳಿಯ ಮಲ್ಲಪ್ಪನ ಬೆಟ್ಟದಲ್ಲಿ ಸೋಮವಾರ ಮಧ್ಯಾಹ್ನ ಚಿರತೆ ದಾಳಿಗೆ ಯುವಕ ಬಲಿಯಾಗಿದ್ದಾನೆ.

ಎಂ.ಎಲ್.ಹುಂಡಿ ಗ್ರಾಮದ ನಿವಾಸಿ ಚೆನ್ನಮಲ್ಲದೇವರು ಎಂಬುವರ ಪುತ್ರ ಹಾಗೂ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಂತಿಮ ವರ್ಷದ ಪದವಿ ವಿದ್ಯಾರ್ಥಿ ಮಂಜುನಾಥ್(20) ಚಿರತೆ ದಾಳಿಗೆ ಬಲಿಯಾದ ಯುವಕ. ಕಾಲೇಜಿಗೆ ರಜೆ ಇದ್ದಿದ್ದರಿಂದ ಗ್ರಾಮಕ್ಕೆ ಆಗಮಿಸಿದ್ದ ಮಂಜುನಾಥ್, ಸ್ನೇಹಿತರೊಂದಿಗೆ ದನ ಮೇಯಿಸಲು ಮಲ್ಲಪ್ಪನ ಬೆಟ್ಟಕ್ಕೆ ಹೋಗಿದ್ದ ವೇಳೆ ಚಿರತೆ ದಾಳಿಗೆ ಬಲಿಯಾಗಿದ್ದಾನೆ.

ಮತ್ತೊಂದು ಮೂಲದ ಪ್ರಕಾರ ಕಾರ್ತಿಕ ಸೋಮವಾರದ ಹಿನ್ನೆಲೆಯಲ್ಲಿ ಸ್ನೇಹಿತರೊಂದಿಗೆ ಬೆಟ್ಟದಲ್ಲಿರುವ ದೇವಸ್ಥಾನಕ್ಕೆ ತೆರಳಿದ್ದ ಮಂಜುನಾಥ್, ದೇವರ ದರ್ಶನ ಪಡೆದು ಅಲ್ಲಿನ ಬಂಡೆಗಳ ಮೇಲೆ ಕುಳಿತಿದ್ದ. ಈ ವೇಳೆ ಚಿರತೆ ಅವನ ಮೇಲೆ ಏಕಾಏಕಿ ದಾಳಿ ನಡೆಸಿ, ಬಲಿ ಪಡೆದಿದೆ. ಈ ವೇಳೆ ಜೊತೆಗಿದ್ದ ಸ್ನೇಹಿತರು ಗ್ರಾಮಕ್ಕೆ ಬಂದು ವಿಷಯ ತಿಳಿಸಿದ್ದಾರೆ. ಹಲವಾರು ದಿನಗಳಿಂದ ಈ ಭಾಗದಲ್ಲಿ ಚಿರತೆ ಹಾವಳಿ ಜಾಸ್ತಿಯಾಗಿದ್ದು, ಈ ಬಗ್ಗೆ ಅರಣ್ಯ ಇಲಾಖೆ ಗಮನಕ್ಕೆ ತರಲಾಗಿತ್ತು. ಆದರೆ ಯಾವುದೇ ಪ್ರಯೋಜನವಾಗಿರಲಿಲ್ಲ. ▶ 9ನೇ ಪುಟಕ್ಕೆ

ಕರ್ನಾಟಕದಲ್ಲಿ ಕನ್ನಡ ಮಾತನಾಡಬೇಕಲ್ವಾ...!?



ಆಫ್ಘಾನಿಸ್ತಾನದ 'ಕನ್ನಡ ಬಾಯ್' ಮೊಹಮ್ಮದ್ ರೆಜಾ ಷರೀಫಿ ಸೀರಿಯಸ್ ಪ್ರಶ್ನೆ

ಮೈಸೂರು, ಅ.31(ಎಸ್‌ಬಿಡಿ)– ಕನ್ನಡ ಕಲಿತಿರುವುದರಿಂದ ಇಲ್ಲಿನ ಜನರ ಹೃದಯ ಸ್ಪರ್ಶಿಸಲು ಸಾಧ್ಯವಾಗಿದೆ. ಇದರಿಂದ ನಮಗೂ ಹೆಮ್ಮೆ ಎನಿಸಿದೆ. ಇದು ಮೈಸೂರಿನಲ್ಲಿ ಶಿಕ್ಷಣ ಪಡೆಯುತ್ತಿರುವ ಆಫ್ಘಾನಿಸ್ತಾನದ ಮೊಹಮ್ಮದ್ ರೆಜಾ ಷರೀಫಿ ಭಾವನಾತ್ಮಕ ನುಡಿ. ಕರ್ನಾಟಕದಲ್ಲಿ ಕನ್ನಡ ಮಾತನಾಡಬೇಕಲ್ವಾ? ಎಂದು ಪ್ರಶ್ನಿಸುವ ಮೂಲಕ ಕನ್ನಡಿಗರ ಹೃದಯ ತಟ್ಟಿರುವ ಇವರು, ಸ್ನೇಹಿತರು, ಉಪನ್ಯಾಸಕರು, ನೆರೆಹೊರೆಯವರು, ವ್ಯಾಪಾರಿಗಳು ಹೀಗೆ ಎಲ್ಲರೊಂದಿಗೆ ಕನ್ನಡದಲ್ಲೇ ಸಂವಹನ ಸಾಧಿಸುತ್ತಾರೆ. ದಿನೇ ದಿನೆ ಭಾಷಾ ಪ್ರಯೋಗದಲ್ಲಿ ಸುಧಾರಣೆ ಕಂಡುಕೊಂಡು ಎಲ್ಲರ ಅಚ್ಚುಮೆಚ್ಚಿನ ವಿದೇಶಿ ಕನ್ನಡಿಗರಾಗಿದ್ದಾರೆ. ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ ಕನ್ನಡವನ್ನು ಕೊಂಡಾಡಿದ್ದಾರೆ.


ನಾನು ಶಿಕ್ಷಣಕ್ಕಾಗಿ ಭಾರತಕ್ಕೆ 2016ರಲ್ಲಿ ಬಂದಿದ್ದೇನೆ. ಮೈಸೂರಿನ ವಿದ್ಯಾವಿಕಾಸ ಕಾಲೇಜಿನಲ್ಲಿ ಬಿಸಿಎ, ಮಾನಸಗಂಗೋತ್ರಿಯಲ್ಲಿ ▶ 9ನೇ ಪುಟಕ್ಕೆ

ಗುಜರಾತ್ ತೂಗು ಸೇತುವೆ ದುರಂತ: ಮೃತರ ಸಂಖ್ಯೆ 141ಕ್ಕೆ ಏರಿಕೆ

ಮೊರ್ಬಿ(ಗುಜರಾತ್): ಗುಜರಾತ್‌ನ ಮೊರ್ಬಿಯ ನವೀಕರಣಗೊಂಡ ಶತಮಾನಗಳಷ್ಟು ಹಳೆಯದಾದ ತೂಗು ಸೇತುವೆ ಕುಸಿದು ಬಿದ್ದ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 141ಕ್ಕೆ ಏರಿಕೆಯಾಗಿದ್ದು, ಈವರೆಗೂ 177ಕ್ಕೂ ಹೆಚ್ಚು ಜನರನ್ನು ರಕ್ಷಣೆ ಮಾಡಲಾಗಿದೆ.


ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸೇನೆ, ನೌಕಾಪಡೆ, ವಾಯುಪಡೆ, ಎನ್‌ಡಿಆರ್‌ಎಫ್, ಅಗ್ನಿಶಾಮಕ ದಳಗಳಿಂದ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ದುರಂತ ಕುರಿತು ಗುಜರಾತ್ ರಾಜ್ಯದ ಗೃಹ ಸಚಿವ ಹರ್ಷ್ ಸಂಘ್ವಿ ಮಾಹಿತಿ ನೀಡಿದ್ದು, ಘಟನೆಗೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಐಜಿಪಿ ನೇತೃತ್ವದಲ್ಲಿ ತನಿಖೆ ಆರಂಭವಾಗಿದೆ ನೌಕಾಪಡೆ, ಎನ್‌ಡಿಆರ್‌ಎಫ್ (ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ), ವಾಯುಪಡೆ ಮತ್ತು ಭೂಸೇನೆ ತ್ವರಿತವಾಗಿ ಸ್ಥಳಕ್ಕೆ ಆಗಮಿಸಿ ರಾತ್ರಿಯಿಡೀ ರಕ್ಷಣಾ ಕಾರ್ಯಾಚರಣೆ ನಡೆಸಿದರು ಎಂದು ಹೇಳಿದ್ದಾರೆ.

15–20 ಹುಡುಗರು ಸೇತುವೆ ಅಲುಗಾಡಿಸಿದ್ದೆ ದುರಂತಕ್ಕೆ ಕಾರಣ: ಸುಮಾರು 15–20 ಹುಡುಗರು ಉದ್ದೇಶಪೂರ್ವಕವಾಗಿ ಮೋರ್ಬಿ ತೂಗುಸೇತುವೆ ಅಲುಗಾಡಿಸಿದ್ದರಿಂದ ಅವಘಡ ಸಂಭವಿಸಿದೆ ಎಂದು ಘಟನೆಯಲ್ಲಿ ಬದುಕುಳಿದವರು ಆರೋಪಿಸಿದ್ದಾರೆ. ಸುಮಾರು 15–20 ಕಿಡಿಗೇಡಿಗಳು ಸೇತುವೆಯ ಹಗ್ಗಗಳನ್ನು ಉದ್ದೇಶಪೂರ್ವಕವಾಗಿ ಅಲುಗಾಡಿಸುತ್ತಿದ್ದರು. ಹೀಗಾಗಿ ಸೇತುವೆ ಕುಸಿಯುವ ಮುನ್ನ ಮೂರು ಬಾರಿ ಜೋರಾಗಿ ಶಬ್ದ ಕೇಳಿ ಬಂತು. ನಾನೂ ಕೆಳಗೆ ಬಿದ್ದೆ. ಆದರೆ ನಾನು ಬೀಳುವಾಗ ಸೇತುವೆಯ ಸುತ್ತಲೂ ಇದ್ದ ರೋಪ್ ಹಿಡಿದಿದ್ದೆ. ನನ್ನ ಜೊತೆಯಲ್ಲಿ ನನ್ನ ಸ್ನೇಹಿತನೂ ಇದ್ದ. ಸುಮಾರು ಏಳು ಜನ ರೋಪ್ ಅನ್ನು ಹಿಡಿದು ಮೇಲಕ್ಕೆ ಏರಲು ಆರಂಭಿಸಿದರು. ಘಟನೆ ವೇಳೆ ನನ್ನ ಕಾಲು ಮತ್ತು ಬೆನ್ನಿಗೆ ಗಾಯಗಳಾಗಿದ್ದು, ಇದೀಗ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ ಎಂದು ಅಶ್ವಿನ್ ಮೆಹ್ರಾ ಎಂಬವರು ಹೇಳಿದ್ದಾರೆ.



ರಾಜ್‌ಕೋಟ್ ಬಿಜೆಪಿ ಸಂಸದನ ಕುಟುಂಬದ 12 ಮಂದಿ ಸಾವು: ಗುಜರಾತ್‌ನ ಮೊರ್ಬಿಯ ನವೀಕರಣಗೊಂಡ ಶತಮಾನಗಳಷ್ಟು ಹಳೆಯದಾದ ಸೇತುವೆ ಕುಸಿದು ಬಿದ್ದ ದುರಂತದಲ್ಲಿ ರಾಜ್‌ಕೋಟ್‌ನ ಬಿಜೆಪಿ ಸಂಸದ ಮೋಹನ್‌ಭಾಯ್ ಕಲ್ಯಾಣ್‌ಜಿ ▶ 6ನೇ ಪುಟಕ್ಕೆ

ಇಂದು ಮೊರ್ಬಿಗೆ ಪ್ರಧಾನಿ ಭೇಟಿ



ಮೊರ್ಬಿ: 141 ಮಂದಿಯನ್ನು ಬಲಿ ಪಡೆದ ಗುಜರಾತ್‌ನ ಮೊರ್ಬಿಯ ಸೇತುವೆ ಕುಸಿದ ಸ್ಥಳಕ್ಕೆ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಮಧ್ಯಾಹ್ನ ಭೇಟಿ ನೀಡಲಿದ್ದಾರೆ ಎಂದು ಗುಜರಾತ್ ಮುಖ್ಯಮಂತ್ರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಸೇತುವೆ ನಿರ್ವಹಣಾ ಏಜೆನ್ಸಿ ವಿರುದ್ಧ ಎಫ್‌ಐಆರ್

ಮೊರ್ಬಿ: ಗುಜರಾತ್‌ನ ಮೊರ್ಬಿಯ ನವೀಕರಣಗೊಂಡ ಶತಮಾನಗಳಷ್ಟು ಹಳೆಯದಾದ ಸೇತುವೆ ಕುಸಿತ ಘಟನೆಗೆ ಸಂಬಂಧಿಸಿದಂತೆ ಸೇತುವೆಯನ್ನು ನಿರ್ವಹಣೆ ಮಾಡುತ್ತಿದ್ದ ಏಜೆನ್ಸಿ ವಿರುದ್ಧ ನರಹತ್ಯೆಗೆ ಯತ್ನ ಆರೋಪದಲ್ಲಿ ಗುಜರಾತ್ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಮೊರ್ಬಿ ಸೇತುವೆ ನಿರ್ವಹಣೆ ಮಾಡುತ್ತಿದ್ದ ಏಜೆನ್ಸಿ ವಿರುದ್ಧ ಐಪಿಸಿ ಸೆಕ್ಷನ್ 308(ನರಹತ್ಯೆಗೆ ಪ್ರಯತ್ನ) 304 ಮತ್ತು 114ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ▶ 6ನೇ ಪುಟಕ್ಕೆ

ಎಸ್‌ಸಿ–ಎಸ್‌ಟಿ ಮೀಸಲಾತಿ ಹೆಚ್ಚಳ ವಿಚಾರ; ವಾಸ್ತವವಾಗಿ ಬಿಜೆಪಿ ಮೀಸಲಾತಿ ವಿರೋಧಿ

ಕ್ರಾಂತಿಕಾರಕ ನಿರ್ಧಾರವೆಂದು ಬುರುಡೆ ಬಿಡಬೇಡಿ; ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸಿ

{ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

ಮೈಸೂರು,ಅ.31(ಪಿಎಂ)–ಮುಂಬರುವ ವಿಧಾನಸಭೆ ಚುನಾವಣೆ ದೃಷ್ಟಿಯಲ್ಲಿ ಎಸ್‌ಸಿ-ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿದ್ದು, ವಾಸ್ತವವಾಗಿ ಬಿಜೆಪಿಯವರು ಮೀಸಲಾತಿ ವಿರೋಧಿಗಳು ಎಂದು ದೂರಿದ ವಿಪಕ್ಷ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರದಲ್ಲೂ ಬಿಜೆಪಿಯದೇ ಸರ್ಕಾರ ಇದ್ದು, ಈ ಮೀಸಲಾತಿ ಹೆಚ್ಚಳಕ್ಕೆ ರಕ್ಷಣೆ ಕಲ್ಪಿಸುವ ನಿಟ್ಟಿನಲ್ಲಿ ಅದನ್ನು ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸುವ ಕೆಲಸ ಮಾಡಲಿ. ಅದು ಬಿಟ್ಟು ಬರೀ ಕ್ರಾಂತಿಕಾರಕ ನಿರ್ಧಾರ ಎಂದು ಬುರುಡೆ ಬಿಟ್ಟರೆ ಆಗಲ್ಲ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಮೈಸೂರಿನಲ್ಲಿ ಖಾಸಗಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಸೋಮವಾರ ಬೆಳಗ್ಗೆ ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ವಿಶೇಷ ವಿಮಾನದಲ್ಲಿ ಆಗಮಿಸಿದ ಅವರು, ಇದೇ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರದ ಅವಧಿಯಲ್ಲಿ ಎಸ್‌ಸಿ–ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಲು ನ್ಯಾ.ನಾಗಮೋಹನ್ ದಾಸ್ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಲಾಯಿತು. ಅಂದು ಪ್ರಿಯಾಂಕ್ ಖರ್ಗೆ ಸಮಾಜ ಕಲ್ಯಾಣ ಸಚಿವರಾಗಿದ್ದರು. ಆಯೋಗವು 2020ರ ಜು.7 ರಂದು ವರದಿ ನೀಡಿತು. ಈಗ 2 ವರ್ಷ ಮೂರು ತಿಂಗಳು ಆದ ಮೇಲೆ ಮೀಸಲಾತಿ ಹೆಚ್ಚಳದ ನಿರ್ಧಾರ ಕೈಗೊಂಡಿದ್ದಾರೆ. ವರದಿ ಕೊಟ್ಟಾಗಲೇ ಮಾಡಬಹುದಿತ್ತಲ್ಲವೇ? ಎಂದು ಪ್ರಶ್ನಿಸಿದರು.



ಮೀಸಲಾತಿ ಹೆಚ್ಚಳಕ್ಕಾಗಿ ಶ್ರೀ ಪ್ರಸನ್ನಾನಂದ ಸ್ವಾಮೀಜಿ 257 ದಿನಗಳು ಧರಣಿ ಮಾಡಬೇಕಾಯಿತು. ನಮ್ಮ ಪಕ್ಷದ ಎಸ್‌ಸಿ ಹಾಗೂ ಎಸ್‌ಟಿ ಶಾಸಕರು ಪ್ರತೀ ಬಾರಿ ಸದನ ಕರೆದಾಗ ಮೀಸಲಾತಿ ಹೆಚ್ಚಳದ ಪ್ರಸ್ತಾಪ ಮಾಡಿ, ಧರಣಿ ನಡೆಸಿದ್ದಾರೆ. ಇದಕ್ಕೆ ಬಿಜೆಪಿಯ ಒಬ್ಬ ▶ 9ನೇ ಪುಟಕ್ಕೆ

40 ಪರ್ಸೆಂಟ್ ಕಮಿಷನ್ ಹಣದಲ್ಲಿ ನಗದು ಸಹಿತ ಗಿಫ್ಟ್ ಬಾಕ್ಸ್: ನ್ಯಾಯಾಂಗ ತನಿಖೆಗೆ ಒತ್ತಾಯ

ಮೈಸೂರು,ಅ.31(ಪಿಎಂ)– ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಏನೂ ಬರೆಯಬಾರದೆಂದು 40 ಪರ್ಸೆಂಟ್ ಕಮಿಷನ್ ಹಣದಲ್ಲಿ ದೀಪಾವಳಿ ಉಡುಗೊರೆ ಗಿಫ್ಟ್ ಬಾಕ್ಸ್‌ನೊಂದಿಗೆ ಪತ್ರಕರ್ತರಿಗೆ ಹಣ ನೀಡಿದ್ದಾರೆಂದು ಆರೋಪಿಸಿದ ಮಾಜಿ ಸಿಎಂ ಸಿದ್ದರಾಮಯ್ಯ, ಈ ಸಂಬಂಧ ನ್ಯಾಯಾಂಗ ತನಿಖೆಯಾಗಬೇಕೆಂದು ಒತ್ತಾಯಿಸಿದರು. ಪತ್ರಕರ್ತರಿಗೆ ತಮ್ಮ ಭ್ರಷ್ಟಾಚಾರವನ್ನು ಬರೆಯದಿರಲೆಂದು ಲಕ್ಷ ಲಕ್ಷ ಹಣದ ಉಡುಗೊರೆ ನೀಡಿದ್ದಾರೆ. ತಮ್ಮ ಕಚೇರಿಯ ಯಾರೋ ಒಬ್ಬರು ಇದನ್ನು ಕೊಟ್ಟಿದ್ದಾರೆ ಎಂದು ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಅವರ ಗಮನಕ್ಕೆ ಬಾರದೆ ಈ ರೀತಿ ಯಾರೋ ಒಬ್ಬರು ಹಣ ಕೊಡೋಕೆ ಸಾಧ್ಯವೇ? ಎಂದು ಪ್ರಶ್ನಿಸಿದರು.

ಈ ರೀತಿ ಹಣ ಕೊಡುವ ಹಿಂದಿನ ಉದ್ದೇಶ ಏನು? ಸರ್ಕಾರದ ಮೇಲೆ ಯಾವುದೇ ಆರೋಪ ಮಾಡಬಾರದು, ಸರ್ಕಾರದ ವಿರುದ್ಧ ಏನೂ ಬರೆಯಬಾರದು ಎಂದಲ್ಲವೇ? ಈ ಹಣ ಯಾವುದು? ಎಲ್ಲಿಂದ ಬಂತು ಗೊತ್ತಾ? ಇದು 40 ಪರ್ಸೆಂಟ್ ಕಮಿಷನ್ ದುಡ್ಡು ಎಂದು ದೂರಿದರು.

ಈ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು. ಕೆಲವರು ಉಡುಗೊರೆ ಹಣವನ್ನು ವಾಪಸ್ಸು ಕೊಟ್ಟಿದ್ದಾರೆ. ಈ ಬಿಜೆಪಿಯವರು ಎಂಥಾ ಲಜ್ಜೆಗೆಟ್ಟವರು ಇರಬಹುದು? ಲಕ್ಷ ಹಣ ಕೊಟ್ಟು ಅದನ್ನು ಸಮರ್ಥನೆ ಮಾಡುತ್ತಾರಲ್ಲ ಎಂಥಾ ಭಂಡರು. ಬಿಜೆಪಿಯವರದ್ದು ಸುಳ್ಳಿನ ಕಾರ್ಖಾನೆಯೇ ಇದೆ. ಆರ್‌ಎಸ್‌ಎಸ್ ಒಂದು ಸುಳ್ಳಿನ ಕಾರ್ಖಾನೆ. ಸುಳ್ಳು ಸೃಷ್ಟಿಯೇ ▶ 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗಂಡ : (ರೇಗುತ್ತಾ) ನೀನು ಮಾಡೋ ಅಡುಗೆ
ನಮ್ಮ ತಾಯಿ ಮಾಡ್ತಿದ್ದ ಹಾಗಿಲ್ಲ

ಹೆಂಡತಿ : (ಸಿಟ್ಟಿನಿಂದ) ನೀವು ತರೋ ಸಂಬಳ
ನನ್ನ ತಂದೆ ತರ್ತಿದ್ದ ಹಾಗಿಲ್ಲ!

ಮೈಸೂರು ಮಿತ್ರ

ಮಂಗಳವಾರ, 1 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಏನನ್ನೇ ಆದರೂ ಸಂತೋಷವಾಗಿ ಅಭಿವ್ಯಕ್ತಿಗೊಳಿಸಿದರೆ ಅದು ಚೆನ್ನಾಗಿ ಬರೆದಂತೆಯೇ –ಮಾಂಟೆಗೊ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗುಡ್ಡಕ್ಕೆ ಕಲ್ಲು ಹೊತ್ತಂತೆ, ಸಮುದ್ರಕ್ಕೆ ನೀರು ಹೊತ್ತಂತೆ

ನಿಮ್ಮ ಪತ್ರಗಳು

ಆಟೋರಿಕ್ಷಾಗಳು ನ್ಯಾಯ ಸಮ್ಮತ ದರ ಪಡೆಯುವಂತೆ ಕ್ರಮ ಕೈಗೊಳ್ಳಲು ಮನವಿ

ಮಾನ್ಯರೆ,

ಮೈಸೂರಿನ ರಸ್ತೆಗಳು ಹಳ್ಳಕೊಳ್ಳಗಳಿಂದ ಕೂಡಿದ್ದು ಅಧೋಗತಿ ತಲುಪಿವೆ. ಅಲ್ಲದೆ ಮಳೆಯ ಆರ್ಭಟ, ಟ್ರಾಫಿಕ್ ಒತ್ತಡದ ನಡುವೆ ಹಿರಿಯ ನಾಗರಿಕರು ದ್ವಿಚಕ್ರ ವಾಹನ ಓಡಿಸಲು ತುಂಬಾ ತೊಂದರೆಯಾಗಿದೆ. ಅಲ್ಲದೆ ಬಸ್‌ನ ಮೆಟ್ಟಿಲನ್ನು ಏರಲು ಆಗದೆ ಕೊನೆಯದಾಗಿ ಆಟೋರಿಕ್ಷಾಗಳ ಮೊರೆ ಹೋಗಬೇಕಾದ ಪರಿಸ್ಥಿತಿ ಇದೆ. ಆಟೋರಿಕ್ಷಾ ಚಾಲಕರು ಮನಬಂದಂತೆ ದರ ಹೇಳುತ್ತಾರೆ. ಇದಕ್ಕೆ ಲೆಕ್ಕಾಚಾರವೇ ಇಲ್ಲ. ಆಟೋರಿಕ್ಷಾಗಳಿಗೆ ಮೀಟರ್ ಅಳವಡಿಕೆ ಮಾಡಿದ್ದರೂ ಯಾವ ಆಟೋರಿಕ್ಷಾದಲ್ಲೂ ಮೀಟರ್ ಚಾಲನೆಯಲ್ಲಿರುವುದಿಲ್ಲ. ಕೇಳಿದರೆ ಕೆಟ್ಟು ಹೋಗಿದೆ ಎಂದು ಹೇಳುತ್ತಾರೆ. ಸರ್ಕಾರ ಮೀಟರ್ ದರ ನಿಗದಿ ಮಾಡಿದ್ದರೂ ತಮಗೆ ಇಷ್ಟ ಬಂದ ಹಾಗೆ ದರ ಕೇಳುತ್ತಾರೆ. ಆಟೋಗಳಿಗೆ ಮೀಟರ್ ಅಳವಡಿಸಿರುವ ಉದ್ದೇಶವಾದರೂ ಏನು? ಈಗಂತು ಉಬರ್, ಓಲಾ, ಇತರೆ ವ್ಯವಸ್ಥೆ ಇದಕ್ಕಿಂತಲೂ ಹೆಚ್ಚು ದರೋಡೆ ತರಹವೇ ಕಾಣಿಸುತ್ತಿದೆ. ಹಿರಿಯ ನಾಗರಿಕರು ಈ ದರವನ್ನು ಕೊಟ್ಟು ಓಡಾಡಲು ಕಷ್ಟವಾಗುತ್ತಿದೆ. ನಲ್ಲಿ ಇದೆ ನೀರಿಲ್ಲ, ಬಲ್ಬ್ ಇದೆ ವಿದ್ಯುಚ್ಛಕ್ತಿ ಇಲ್ಲ, ಶೌಚಾಲಯ ಇದೆ ಅದರಲ್ಲಿ ನೀರೇ ಇಲ್ಲ, ಆಟೋರಿಕ್ಷಾದಲ್ಲಿ ಮೀಟರ್ ಇದೆ ಆದರೆ ಅದು ಕೆಲಸ ಮಾಡುತ್ತಿಲ್ಲ ಇತ್ಯಾದಿ ತೊಂದರೆಗಳು. ಆದ್ದರಿಂದ ಸರ್ಕಾರ ಹಿರಿಯ ನಾಗರಿಕರ ಸೌಕರ್ಯಕ್ಕಾಗಿ ನ್ಯಾಯ ಸಮ್ಮತ ದರ ಪಡೆಯುವಂತೆ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

–ಉಮಾಕಾಂತ್, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಸಂಘ, ಮೈಸೂರು.

ಕನ್ನಡ ಭಾಷಾ ಅಭಿವೃದ್ಧಿಗೆ ಇಚ್ಛಾಶಕ್ತಿ ಬಹಳ ಮುಖ್ಯ

ಮಾನ್ಯರೆ,

ಕನ್ನಡ ಸುಂದರ, ಚಂದದ ಅತ್ಯಂತ 3ನೇ ಪ್ರಾಚೀನ ಭಾಷೆ ಜೊತೆಗೆ ಎಲ್ಲಾ ಅರ್ಥದಲ್ಲಿ ಸಂಪನ್ನವಾದ ಭಾಷೆ, ಕನ್ನಡ ಕೃತಿಗಳು ಇಂಗ್ಲಿಷ್ ಸೇರಿದಂತೆ ಎಲ್ಲಾ ಭಾಷೆಗಳಿಗೆ ಭಾಷಾಂತರ ಆಗಬೇಕು, ಇದು ಭಾಷಾ ಬೆಳವಣಿಗೆಗೆ ಮುಖ್ಯ ಪಾತ್ರ ವಹಿಸುತ್ತದೆ, ನಾವು ಕೀಳರಿಮೆಯಿಂದ ಬಳಲಬೇಕಿಲ್ಲ, ಕನ್ನಡ ಭಾಷೆ ಬಳಸಿದಷ್ಟು ಬೆಳೆಯುವಂತಹ ಭಾಷೆ, ಹೊಟ್ಟೆಪಾಡಿಗಾಗಿ ಯಾವ ಭಾಷೆಯನ್ನಾದರೂ ಆಯ್ದುಕೊಳ್ಳಿ, ಆದರೆ ದಿನನಿತ್ಯದ ವ್ಯವಹಾರಗಳಲ್ಲಿ ಕನ್ನಡ ಭಾಷೆಯನ್ನು ಹೆಚ್ಚು ಬಳಸಿ, ಕನ್ನಡ ಎಲ್ಲಾ ಭಾರತೀಯ ಭಾಷೆಗಳೊಂದಿಗೆ ತಲೆಯೆತ್ತಿ ನಿಲ್ಲುವ ಸತ್ವ ಹಾಗೂ ಅರ್ಹತೆ ಹೊಂದಿದೆ, ಅದನ್ನ ನಾವು ಹೆಚ್ಚು ಪ್ರಚಾರ ಮತ್ತು ಬಳಸುತ್ತಿಲ್ಲ ಅಷ್ಟೇ, ಕುವೆಂಪು ಹೇಳಿದಂತೆ ಕನ್ನಡಕ್ಕೆ ಪ್ರಚಾರದ ಅಭಾವದಿಂದ ಆಗಿರುವಷ್ಟು ಅನ್ಯಾಯ ಬೇರೆ ಯಾವುದೇ ಭಾಷೆಗೆ ಆಗಿಲ್ಲ, ಹೀಗಾಗಿ ಪ್ರಚಾರ ಮತ್ತು ವಿಚಾರ ಎರಡು ಕನ್ನಡಕ್ಕೆ ಬೇಕು, ಹಿರಿಯ ಸಾಹಿತಿ ಡಾ. ಎಸ್ ಎಲ್ ಭೈರಪ್ಪ ಅವರ ಕಾದಂಬರಿಗಳು ಬಹುಪಾಲು ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ, ಆ ರೀತಿ ಇತರರ ಕನ್ನಡ ಕೃತಿಗಳು, ಕವನ ಸಂಕಲನಗಳು, ಕಾದಂಬರಿಗಳು ಅನುವಾದವಾಗಬೇಕು, ಆಗ ಕನ್ನಡದ ಸ್ಥಾನಮಾನ ಹೆಚ್ಚುತ್ತದೆ, ಕನ್ನಡ ಶಾಲೆಯ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡಬೇಕು, ತಮಿಳರು ತಮ್ಮಲ್ಲಿ ಇಲ್ಲದೇ ಇರುವ ವಿಚಾರ ಮತ್ತು ಸತ್ವವನ್ನು ಕಲ್ಪಿಸಿಕೊಂಡು ಪ್ರಚಾರ ಮಾಡುತ್ತಾರೆ. ಆದರೆ ನಾವು ಇರುವುದನ್ನು ಹೇಳಿಕೊಳ್ಳದೆ ಹಿಂದುಳಿಯುತ್ತಿದ್ದೇವೆ, ಕನ್ನಡ ಭಾಷೆ ಬೆಳೆಯುತ್ತಾ ಮುಖ ಮಾಡಬೇಕು, ಆ ರೀತಿಯ ಕನ್ನಡ ಮತ್ತು ಕರ್ನಾಟಕದ ಪ್ರಜ್ಞೆ ನಮ್ಮಲ್ಲಿ ಮೂಡಬೇಕು, ಆಗ ಮಾತ್ರ ಕನ್ನಡದ ಭಾಷೆಯು ಉಳಿಯಲು ಸಾಧ್ಯವಾಗುತ್ತದೆ. ಇವೆಲ್ಲವೂ ಆಗಬೇಕೆಂದರೆ ಕನ್ನಡಿಗರು ಮತ್ತು ಸರ್ಕಾರದ ಇಚ್ಛಾಶಕ್ತಿಯು ಮುಖ್ಯವಾಗಿರುತ್ತದೆ. ಕನ್ನಡಿಗರು ಕನ್ನಡದ ಬಗ್ಗೆ ಅಲಕ್ಷ್ಯ ಮಾಡಿದರೆ ಮುಂದೊಂದು ದಿನ ಅಪಾಯವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಈಗಲೇ ಎಚ್ಚೆತ್ತುಕೊಳ್ಳಬೇಕು.

–ಪರಶಿವಮೂರ್ತಿ ಎನ್.ಪಿ, ಸರಗೂರು ತಾ.



'ಮಿತ್ರ'ನ ವರದಿ ಫಲಶ್ರುತಿ

ಮಾನ್ಯರೆ,

ಮೈಸೂರು, ಕೆ.ಆರ್.ಎಸ್. ರಸ್ತೆಯಲ್ಲಿ ಸಿಇಜಿ ಆಸ್ಪತ್ರೆ ಮುಂದೆ ಒಣಗಿ, ಅಪಾಯಕಾರಿಯಾಗಿ ಪರಿಣಮಿಸಿದ್ದ ಮರವನ್ನು ತೆರವುಗೊಳಿಸಲಾಗಿದೆ. ಈ ಸಂಬಂಧ 'ಮೈಸೂರು ಮಿತ್ರ'ನಲ್ಲಿ ಅ. 25 ರಂದು ವರದಿ ಪ್ರಕಟವಾಗಿತ್ತು. ಅಂತೂ ಎಚ್ಚೆತ್ತ ಅರಣ್ಯ ಇಲಾಖೆ ಸಿಬ್ಬಂದಿ ಒಣಗಿ ನಿಂತ ಈ ಮರವನ್ನು ತೆರವುಗೊಳಿಸಿದ್ದಾರೆ.

ಮಂಡ್ಯ ಪೊಲೀಸರ ಕೆಲಸ ಶ್ಲಾಘನೀಯ


ಮಾನ್ಯರೆ,

ರಾಜ್ಯಾದ್ಯಂತ ಸಂಚಲನ ಮೂಡಿಸಿದ್ದ ಮಳವಳ್ಳಿಯ ಬಾಲಕಿಯೋರ್ವಳ ಮೇಲೆ ನಡೆಸಿದ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಮಂಡ್ಯ ಜಿಲ್ಲಾ ಪೊಲೀಸರು ಆರೋಪಿಯ ವಿರುದ್ಧ ಕೇವಲ 14 ದಿನಗಳ ಅವಧಿಯಲ್ಲಿ ಆರೋಪ ಪಟ್ಟಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುವುದು ಶ್ಲಾಘನೀಯವಾಗಿದೆ. ಈ ಹೀನ ಕೃತ್ಯವನ್ನು ಖಂಡಿಸಿ, ರಾಜ್ಯಾದ್ಯಂತ, ಹಲವಾರು ಮಹಿಳಾ ಹಾಗೂ ಇತರ ಸಂಘಟನೆಗಳು ತೀವ್ರ ರೀತಿಯ ಪ್ರತಿಭಟನೆಗಳನ್ನು ನಡೆಸಿ ಆರೋಪಿಗೆ ಮರಣ ದಂಡನೆ ವಿಧಿಸಬೇಕೆಂದು ಒಕ್ಕೊರಲಿನಿಂದ ರಾಜ್ಯ ಸರ್ಕಾರವನ್ನು ಆಗ್ರಹಪಡಿಸಿದ್ದವು.

ಸಾಮಾನ್ಯವಾಗಿ ಇಂತಹ ಕೃತ್ಯಗಳಲ್ಲಿ ಆರೋಪಿಯ ವಿಚಾರಣೆ ನಡೆಸಿ ಆರೋಪ ಪಟ್ಟಿ ಸಲ್ಲಿಸಲು ಪೊಲೀಸರು ದೀರ್ಘ ಸಮಯವನ್ನೇ ತೆಗೆದುಕೊಂಡು ಬಾಧಿತ ಕುಟುಂಬಗಳ ಸಹನೆ ಪರೀಕ್ಷಿಸುವುದುಂಟು. ಆದರೆ, ಈ ಪ್ರಕರಣದಲ್ಲಿ ವಿಚಾರಣೆ ಮುಗಿಸಿ, ಅತ್ಯಂತ ಕಡಿಮೆ ಅವಧಿಯಲ್ಲಿ ಆರೋಪಿಯ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿರುವ ಮಂಡ್ಯ ಜಿಲ್ಲಾ ಪೊಲೀಸರ ಕಾರ್ಯ ಮಾದರಿಯಾಗಿದೆ.ಇವರಿಗೆ ಸೂಕ್ತ ಮಾರ್ಗದರ್ಶನ ನೀಡಿದ ರಾಜ್ಯದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ಅಲೋಕ್ ಕುಮಾರ್ ಸಹ ಅಭಿನಂದನಾರ್ಹರು.

ದೇಶಾದ್ಯಂತ ಇಂತಹ ಹೀನ ಕೃತ್ಯಗಳು ನಡೆಯುತ್ತಲೇ ಇರುತ್ತವೆ. ಇಂತಹ ಕೃತ್ಯಗಳಲ್ಲಿ ಸೂಕ್ತ ಸಾಕ್ಷಿ ಮತ್ತು ಪುರಾವೆಗಳನ್ನು ಸಂಗ್ರಹಿಸುವುದು ಪೊಲೀಸರಿಗೆ ಸವಾಲಿನ ಕೆಲಸವಾಗಿರುತ್ತದೆ. ಆದರೆ ಪೊಲೀಸ್ ವಿಚಾರಣೆ, ಆರೋಪ ಪಟ್ಟಿ ಸಲ್ಲಿಕೆ ಇತ್ಯಾದಿ ಮುಗಿಯುವ ಹೊತ್ತಿಗೆ ವರ್ಷಗಳೇ ಉರುಳಿರುತ್ತವೆ. ಒಂದು ವೇಳೆ ಆರೋಪಿ ಪ್ರಭಾವಶಾಲಿಯಾದರೆ, ಆತ ಪೊಲೀಸ್ ವಿಚಾರಣೆಯಲ್ಲಿ ಹಸ್ತಕ್ಷೇಪ ಮಾಡಿ ಇಡೀ ಪ್ರಕರಣವನ್ನೇ ಬುಡಮೇಲು ಮಾಡುವ ಸಾಧ್ಯತೆಗಳು ಇರುತ್ತವೆ. ಅನೇಕ ವೇಳೆ ಇವರಿಗೆ ನ್ಯಾಯಾಲಯದಿಂದ ಜಾಮೀನು ಸಹ ಲಭಿಸುತ್ತದೆ. ಆರೋಪಿಗಳಿಗೆ ಶಿಕ್ಷೆ ಆಗುವ ಹೊತ್ತಿಗೆ ಈ ಪ್ರಕರಣ ಜನರ ಸ್ಮರಣೆಯಿಂದ ಮರೆಯಾಗಿರುತ್ತದೆ. ಆದ್ದರಿಂದ ಮುಂದೆ ಸಂಭವಿಸಬಹುದಾದ ಇಂತಹ ಎಲ್ಲಾ ಪ್ರಕರಣಗಳನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ವಿಚಾರಣೆ ನಡೆಸಿ, ಆರೋಪಿಗಳಿಗೆ ಕಡಿಮೆ ಅವಧಿಯಲ್ಲಿ ಗರಿಷ್ಠ ಶಿಕ್ಷೆ ನೀಡಬೇಕಾದ್ದು ನ್ಯಾಯಾಲಯದ ಕೆಲಸವಾದರೂ, ರಾಜ್ಯ ಸರ್ಕಾರ ಅದಕ್ಕೆ ಪೂರಕ ವಾತಾವರಣ ಕಲ್ಪಿಸಬೇಕು. ಇದಕ್ಕಾಗಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿದರೆ ಇನ್ನೂ ಒಳ್ಳೆಯದು. ಒಟ್ಟಿನಲ್ಲಿ ಯಾವುದೇ ಕಾರಣಕ್ಕೂ ಆರೋಪಿಗಳು ಕಾನೂನಿನ ಕಬಂಧಬಾಹುಗಳಿಂದ ತಪ್ಪಿಸಿಕೊಳ್ಳಲು ಬಿಡಬಾರದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ರಿಷಿ ಸುನಕ್ ಸುವರ್ಣ ಸಮಯ

ಇಂಗ್ಲೆಂಡ್ ತಕ್ಕ ಆಯ್ಕೆ ಮಾಡಿಕೊಂಡಿದೆ




ರಿಷಿ ಸುನಕ್



ಒಬಾಮ



ಚಾರ್ಲ್ಸ್–III



ಚರ್ಚಿಲ್



ನಾರಾಯಣಮೂರ್ತಿ



ಡಾ. ಸುಧಾಮೂರ್ತಿ



ಅಕ್ಷತಾಮೂರ್ತಿ

> **"ಈಗ ನಿಶ್ಚಯವಾಗಿ, ಬಿಳಿಯ ಬ್ರಿಟನ್ ಪ್ರಜೆಗಳ ನಾಯಕರಾಗಿ ಒಬ್ಬ ಕಂದು ಬಣ್ಣದ ಸಾಹೇಬ ಬಂದಿದ್ದಾನೆ. ಒಮ್ಮೆ ಅವರು ನಮ್ಮನ್ನು ಅವಹೇಳನ ಮಾಡುವ ರೀತಿಯಲ್ಲಿ ಕಪ್ಪು ಮುಖಭಾವದ ಸ್ಥಳೀಯರು ಎಂದು ಕುಚೋದ್ಯ ಮಾಡಿದ್ದರು. ಬ್ರಿಟಿಷರ ಆಡಳಿತದ ಸಮಯದಲ್ಲಿ, ಇಂಗ್ಲೆಂಡ್‌ನಲ್ಲಿರುವ ಹೋಟೆಲ್ಲುಗಳ ಮುಂದೆ "ನಾಯಿಗಳು ಮತ್ತು ಭಾರತೀಯರಿಗೆ ಪ್ರವೇಶವಿಲ್ಲ" ಎಂಬ ಫಲಕಗಳನ್ನು ಹಾಕುತ್ತಿದ್ದರು. ಪ್ರಖ್ಯಾತ ಕೈಗಾರಿಕೋದ್ಯಮಿ ಜೆಮ್‌ಶೇಟ್‌ಜೀ ಟಾಟಾರವರು ಬಾಂಬೆಯಲ್ಲಿ ಪ್ರಸಿದ್ಧ "ತಾಜ್ ಮಹಲ್ ಹೋಟೆಲ್" ಅನ್ನು ಪ್ರಾರಂಭಿಸಿದಾಗ, "ಮುಯ್ಯಿಗೆ ಮುಯ್ಯಿ" ಎಂಬಂತೆ "ನಾಯಿಗಳು ಹಾಗೂ ಬಿಳಿಯರಿಗೆ" ಪ್ರವೇಶವಿಲ್ಲ ಎಂಬ ಫಲಕವನ್ನು ಪರಿಹಾಸ್ಯವಾಗಿ ಹಾಕಿದ್ದರು. ರಿಷಿ ಸುನಕ್ ಸಾಧನೆಗಳು "ಪ್ರತಿಯೊಂದು ನಾಯಿಗೂ ತನ್ನದೇ ಆದ ದಿನ ಬರುತ್ತದೆ" ಎಂಬ ಗಾದೆ ಮಾತನ್ನು ಸಮರ್ಥಿಸುವಂತೆ ತೋರುತ್ತದೆ."**

ನನಗೆ ಶೇ. 100ರಷ್ಟು ಖಾತರಿಯಿದೆ. ಪ್ರಪಂಚದ ಎರಡನೇ ಮಹಾಯುದ್ಧದ ಹೀರೋ ಹಾಗೂ ಬ್ರಿಟಿಷ್ ಪ್ರಧಾನಮಂತ್ರಿ ದಿವಂಗತ ವಿನ್ಸ್ಟನ್ ಚರ್ಚಿಲ್ (ಸರ್ ವಿನ್ಸ್ಟನ್ ಲಿಯನಾರ್ಡೋ ಸ್ಪೆನ್ಸರ್ ಚರ್ಚಿಲ್) ತಾವು ಜನಿಸಿದ ಬ್ಲೇನ್ಹೇಮ್ ಅರಮನೆಗೆ, ಅದಕ್ಕೆ ಹೊಂದಿಕೊಂಡಂತೆ ಇರುವ ಪ್ಯಾರಿಶ್ ಚರ್ಚಿನ ಸಮಾಧಿಯಿಂದ ತಿರುಗಿ ಬಂದಿರಬಹುದೆಂದು ಭಾವಿಸುತ್ತೇನೆ.

ನಾನೇಕೆ ಇದನ್ನು ಹೇಳಬೇಕು? ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಭಾರತದಲ್ಲಿ ಕೆಲಕಾಲ ಸೇವೆ ಸಲ್ಲಿಸಿದ್ದರೂ ಸಹ, ತಮ್ಮ ಜೀವನಪೂರ್ತಿ ಭಾರತ ವಿರೋಧಿಯಾಗಿದ್ದ ಚರ್ಚಿಲ್, ನಮ್ಮದೇ ಆದ ಬೆಂಗಳೂರು ಮತ್ತು ದೇಶದ ವಾಯುವ್ಯ ಗಡಿಭಾಗದಲ್ಲಿ (ಆಗ ಅದು ಬ್ರಿಟಿಷ್ ಇಂಡಿಯಾ ಸಾಮ್ರಾಜ್ಯಕ್ಕೆ ಸೇರಿತ್ತು) ಸೇವೆ ಸಲ್ಲಿಸಿದ್ದರು. ಅವರು ಇಂದು ತುಂಬಾ ಅಸಂತುಷ್ಟ ವ್ಯಕ್ತಿಯಾಗಿರಬಹುದು. ಏಕೆಂದರೆ, ನಾವು ನೋಡುತ್ತಿರುವಂತೆ ಭಾರತೀಯ ಮೂಲದ ಹಿಂದೂ ಒಬ್ಬರನ್ನು ಕನ್ಸರ್ವೇಟಿವ್ ಪಕ್ಷ, ಅದರ ನಾಯಕನಾಗಿ ಆಯ್ಕೆ ಮಾಡಿದ್ದು, ಬ್ರಿಟನ್ನಿನ ದೊರೆ ಚಾರ್ಲ್ಸ್–3 ಅವರು ಅಕ್ಟೋಬರ್ 25 ರಂದು ರಿಷಿ ಸುನಕ್, ಬ್ರಿಟನ್ ಪ್ರಧಾನಮಂತ್ರಿಯಾಗಿ ನೇಮಕಗೊಂಡ ಆದೇಶ ಪತ್ರವನ್ನು ನೀಡಿದ್ದಕ್ಕಾಗಿ.

ಈ ನೇಮಕ ಸಿಡಿಲಿನಂತೆ, ಚರ್ಚಿಲ್‌ರವರ ಮೇಲೆರಗಿರಬಹುದು. ಏಕೆಂದರೆ ಅವರು 1900 ರಲ್ಲಿ ಕನ್ಸರ್ವೇಟಿವ್ ಪಕ್ಷದ ಸಂಸದನಾಗಿ ಬ್ರಿಟಿಷ್ ಸಂಸತ್ತನ್ನು ಪ್ರವೇಶಿಸಿದವರು. ಆದರೆ, ಭಾರತದ ಇಂದಿನ ರಾಜಕಾರಣಿಗಳ ಹಾಗೆ ಪಕ್ಷ ನಿಷ್ಠೆ ಬದಲಾಯಿಸುವ ಬಗ್ಗೆ ಅವರಿಗೆ ಏನೂ ನಾಚಿಕೆ ಆಗಲೀ, ಹೆದರಿಕೆ ಆಗಲೀ ಇರಲಿಲ್ಲ. ಅದು ಹಾಗಿರಲಿ.

ರಿಷಿ ಸುನಕ್ ಅವರ ನೇಮಕವು ವಿಶ್ವದಾದ್ಯಂತ ಇರುವ ಹಿಂದೂಗಳಿಗೆ ದೀಪಾವಳಿಯ ಉಡುಗೊರೆಯಂತೆ ಕಂಡು ಬಂತು. ಇದು ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆಯ ಹಿಂದೂ ಇಂಡಿಯಾ (ಭಾರತ) **ವಿಶ್ವಗುರುವಾಗಿ** ಪರಿಣಮಿಸಲಿರುವ ಮುನ್ಸೂಚನೆಯೇ? ಕಾಲವೇ ಇದನ್ನು ಹೇಳಬಲ್ಲದು. ಏನೇ ಆದರೂ, ಇಂದು ವಿಶ್ವದಲ್ಲಿನ ಕೆಲವು ಹಿಂದೂಗಳು ಹಂತ ಹಂತವಾಗಿ ಆಯಾ ದೇಶಗಳ ಸರ್ಕಾರಗಳಲ್ಲಿ ಗಮನಾರ್ಹ ಪಾತ್ರ ವಹಿಸುತ್ತಿರುವುದನ್ನು ಕಾಣಬಹುದು. ತನ್ಮೂಲಕ, ಭಾರತದ ರಾಜಕೀಯ, ಆಧ್ಯಾತ್ಮಿಕ ಹಾಗೂ ಬೌದ್ಧಿಕ ಪರಿಮಳವನ್ನು ಹರಡುತ್ತಿರುವುದನ್ನು ಕಾಣಬಹುದು.

ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಅಡೆತಡೆಗಳನ್ನು ಮೀರಿ ಎಲ್ಲಾ ಭಾರತೀಯರು, ಭಾರತೀಯ ಮೂಲದ ವ್ಯಕ್ತಿಯೊಬ್ಬರು ಬ್ರಿಟನ್ನಿನ ಪ್ರಧಾನಮಂತ್ರಿಯಾಗಿರುವುದಕ್ಕೆ ಸಂತೋಷಪಡಬೇಕೆಂಬುದು ನನ್ನ ಭಾವನೆ. ಬ್ರಿಟನ್ ದೇಶವು 200 ವರ್ಷಗಳಷ್ಟು ಸುದೀರ್ಘ ಕಾಲ ನಮ್ಮ ದೇಶವನ್ನು ವಸಾಹತುಶಾಹಿಯನ್ನಾಗಿ ಮಾಡಿಕೊಂಡಿತ್ತು. ಆದಾಗ್ಯೂ, ಪ್ರಸಕ್ತ ವಿದ್ಯಮಾನದಿಂದಾಗಿ ಅತ್ಯಂತ ಸಂತೋಷಗೊಂಡಿರುವವರ ಪೈಕಿ **ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಮತ್ತು ಅವರ ಪತ್ನಿ ಡಾ.ಸುಧಾಮೂರ್ತಿ ದಂಪತಿ ಕೂಡ ಒಬ್ಬರಾಗಿದ್ದಾರೆ**. ಕಾರಣ, ಡಾ.ಸುಧಾಮೂರ್ತಿಯವರ ಪುತ್ರಿ **ಅಕ್ಷತಾ ಮೂರ್ತಿ**ಯವರನ್ನು ರಿಷಿ ಸುನಕ್ ಅವರಿಗೆ ಕೊಟ್ಟು ವಿವಾಹ ಮಾಡಲಾಗಿದೆ. ಇಂಗ್ಲೆಂಡ್‌ನ ಪ್ರಧಾನಿ ಈಗ ಭಾರತದ ಅಳಿಯ!

ರಿಷಿ ಸುನಕ್, 45 ದಿನಗಳ ಹಿಂದೆ ಲೀಸ್ ಟ್ರೂಸ್ ಅವರಿಂದಾಗಿ ಬ್ರಿಟನ್ ಪ್ರಧಾನಮಂತ್ರಿ ಆಗುವ ಅವಕಾಶ ವಂಚಿತರಾಗಿದ್ದರು. ಆದರೆ ಎರಡನೇ ಬಾರಿಗೆ ಅವರಿಗೆ ಅದೃಷ್ಟ ಒಲಿಯಿತು.

ರಿಷಿ ಸುನಕ್, ಯಾವ ರೀತಿಯ ಯುವಕನಾಗಿರಬೇಕು? ಹೌದು ನಮಗೆಲ್ಲರಿಗೂ ಅವರ ಉನ್ನತವಾದ ಶೈಕ್ಷಣಿಕ ವಿದ್ಯಾರ್ಹತೆಗಳು ಹಾಗೂ ಅಪಾರ ಸಂಪತ್ತು ಗೊತ್ತಿದೆ. ಅವರು ಇಂಗ್ಲೆಂಡ್ ದೇಶದ ಅತ್ಯಂತ ಶ್ರೀಮಂತರ ಕೂಟದ ಸದಸ್ಯರಾಗಿ, ತಮಗೆ ಪ್ರಧಾನ ಮಂತ್ರಿ ಹುದ್ದೆ ನೀಡಿದ ಬ್ರಿಟನ್ನಿನ ಸಾಂವಿಧಾನಿಕ ಮುಖ್ಯಸ್ಥರಾದ ದೊರೆ ಚಾರ್ಲ್ಸ್–3 ಅವರನ್ನು ಸಹ ಮೀರಿಸಿದ್ದಾರೆ !. ಆದರೆ ಈ ಎಲ್ಲವನ್ನೂ ಕೇವಲ 42ನೇ ವಯಸ್ಸಿನಲ್ಲೇ ಸಾಧಿಸಿರುವುದು? ಅದೃಷ್ಟವೇ ಸರಿ! ಚಿರ ಯುವಕನಾಗಿ, ನೀಳಕಾಯ, ಎತ್ತರ, ಸುಂದರ ಹಾಗೂ ವಿಶಿಷ್ಟವಾದ ನಾಸಿಕವುಳ್ಳ, ಆತ್ಮವಿಶ್ವಾಸವನ್ನು ಹೊಂದಿದ, ನಾದ ಗುಣವುಳ್ಳ ಧ್ವನಿ, ನಿರರ್ಗಳ ವಾಕ್ ಸಾಮರ್ಥ್ಯ ಮತ್ತು ವರ್ತನೆಯಲ್ಲಿ ಮೃದುತ್ವ ಹೊಂದಿರುವುದು. ಇವುಗಳೆಲ್ಲಾ ಅದೃಷ್ಟವಲ್ಲದೆ ಮತ್ತಿನ್ನೇನು!! ತುಂಬಾ ಲವಲವಿಕೆಯ, ಪ್ರತಿಕ್ರಿಯೆಯಲ್ಲಿ ಜಾಗರೂಕತೆ, ವರ್ಚಸ್ವಿ ವ್ಯಕ್ತಿತ್ವದ ಅಕ್ಷಯ ಪಾತ್ರೆಯಾಗಿದ್ದಾರೆ ಬ್ರಿಟನ್ ನೂತನ ಪ್ರಧಾನಿ ರಿಷಿ ಸುನಕ್.

ಈಗ ನಿಶ್ಚಯವಾಗಿ, ಬಿಳಿಯ ಬ್ರಿಟನ್ ಪ್ರಜೆಗಳ ನಾಯಕರಾಗಿ ಒಬ್ಬ ಕಂದು ಬಣ್ಣದ ಸಾಹೇಬ ಬಂದಿದ್ದಾನೆ. ಒಮ್ಮೆ ಅವರು ನಮ್ಮನ್ನು ಅವಹೇಳನ ಮಾಡುವ ರೀತಿಯಲ್ಲಿ ಕಪ್ಪು ಮುಖಭಾವದ ಸ್ಥಳೀಯರು ಎಂದು ಕುಚೋದ್ಯ ಮಾಡಿದ್ದರು. ಬ್ರಿಟಿಷರ ಆಡಳಿತದ ಸಮಯದಲ್ಲಿ, ಇಂಗ್ಲೆಂಡ್‌ನಲ್ಲಿರುವ ಹೋಟೆಲ್ಲುಗಳ ಮುಂದೆ "ನಾಯಿಗಳು ಮತ್ತು ಭಾರತೀಯರಿಗೆ ಪ್ರವೇಶವಿಲ್ಲ" ಎಂಬ ಫಲಕಗಳನ್ನು ಹಾಕುತ್ತಿದ್ದರು. ಪ್ರಖ್ಯಾತ ಕೈಗಾರಿಕೋದ್ಯಮಿ ಜೆಮ್‌ಶೇಟ್‌ಜೀ ಟಾಟಾರವರು ಬಾಂಬೆಯಲ್ಲಿ ಪ್ರಸಿದ್ಧ "ತಾಜ್ ಮಹಲ್ ಹೋಟೆಲ್" ಅನ್ನು ಪ್ರಾರಂಭಿಸಿದಾಗ, "ಮುಯ್ಯಿಗೆ ಮುಯ್ಯಿ" ಎಂಬಂತೆ "ನಾಯಿಗಳು ಹಾಗೂ ಬಿಳಿಯರಿಗೆ" ಪ್ರವೇಶವಿಲ್ಲ ಎಂಬ ಫಲಕವನ್ನು ಪರಿಹಾಸ್ಯವಾಗಿ ಹಾಕಿದ್ದರು. ರಿಷಿ ಸುನಕ್ ಸಾಧನೆಗಳು "ಪ್ರತಿಯೊಂದು ನಾಯಿಗೂ ತನ್ನದೇ ಆದ ದಿನ ಬರುತ್ತದೆ" ಎಂಬ ಗಾದೆ ಮಾತನ್ನು ಸಮರ್ಥಿಸುವಂತೆ ತೋರುತ್ತದೆ.

ರಿಷಿ ಸುನಕ್, ವಿದೇಶಿ ಮೂಲದ ಪ್ರಥಮ ಬ್ರಿಟನ್ ಪ್ರಧಾನಮಂತ್ರಿಯಾಗುವ ಮೂಲಕ ಇಂಗ್ಲಿಷ್ ಜನರಿಗೆ ಜಯಕಾರ ಲಭಿಸಿದೆ. ಈ ಸಂದರ್ಭದಲ್ಲಿ ಅಮೆರಿಕಾದ ಅಧ್ಯಕ್ಷರಾಗಿದ್ದ ಬರಾಕ್ ಒಬಾಮಾ ಅವರನ್ನು ನಾನು ಇಲ್ಲಿ ನೆನೆಸಿಕೊಳ್ಳುತ್ತೇನೆ. ಅವರೂ ಸಹ 40ರ ವಯೋಮಾನದ ಯುವಕರಾಗಿದ್ದರು. ಕೆಲವರು ಅವರನ್ನು ಅಮೇರಿಕ ದೇಶದ ಪ್ರಥಮ "ಕರಿಯ ಅಧ್ಯಕ್ಷ" ಎಂದು ಕರೆದರು. ಆದರೆ, ಆಫ್ರಿಕಾದ ಕೆಲವು ಪ್ರದೇಶಗಳಲ್ಲಿ ಕಾಣಸಿಗುವಷ್ಟು ಕರಿಯ ಅವರಾಗಿರಲಿಲ್ಲ. ಉದಾಹರಣೆಗೆ ಕೀನ್ಯಾ ಮತ್ತು ಘಾನಾ ದೇಶಗಳು. ಒಬಾಮ ಅವರು ಮಿಶ್ರ ಕಪ್ಪು ಮತ್ತು ಬಿಳಿ ಸಂತತಿಯ ವ್ಯಕ್ತಿ– ಹೇಗೆಂದರೆ, ಅವರ ತಾಯಿ ಬಿಳಿಯ ಅಮೇರಿಕನ್ ಪ್ರಜೆ ಹಾಗೂ ತಂದೆ ಕಪ್ಪು ವರ್ಣದ ಕೀನ್ಯಾ ಮೂಲದವರು. ಅವರನ್ನೂ ವಿದೇಶಿ ಮೂಲದವರು ಎಂದು ಕರೆಯಬಹುದೇ? ಹಾಗಾದರೆ ವಲಸಿಗರ ದೇಶವಾಗಿರುವ ಅಮೇರಿಕಾದ ಎಲ್ಲಾ ಹಿಂದಿನ ಅಧ್ಯಕ್ಷರು ವಿದೇಶಿ ಮೂಲದವರೇ ಆಗಿರಬೇಕು! ಈಗ ವಿಷಯಕ್ಕೆ ಬರುತ್ತೇನೆ. ಅಮೇರಿಕಾಗೆ ಬರಾಕ್ ಒಬಾಮಾ ಹೇಗೋ ಹಾಗೆಯೇ ಇಂಗ್ಲೆಂಡಿಗೆ ರಿಷಿ ಸುನಕ್.

ರಿಷಿ ಸುನಕ್, ಬ್ರಿಟನ್ ಪ್ರಧಾನ ಮಂತ್ರಿಯಾಗುವ ಮೂಲಕ ಭಾರತ ತನ್ನನ್ನು ಎರಡು ಶತಮಾನಗಳ ದಾಸ್ಯದ ಸಂಕೋಲೆಯಲ್ಲಿ ಬಿಗಿದಿದ್ದ ಬ್ರಿಟಿಷರ ವಿರುದ್ಧ ಸೇಡು ತೀರಿಸಿಕೊಂಡ ಪ್ರತಿಸ್ವರೂಪದ ಸಂತೋಷವನ್ನು ಅನುಭವಿಸುತ್ತಿದೆ ಎಂದು ತೋರುತ್ತದೆ. ಭಾರತದಿಂದ ವಿಭಜಿತಗೊಂಡ ಪಾಕಿಸ್ತಾನ ಸಹ ಇದೇ ರೀತಿಯ ಸೇಡನ್ನು ಸಣ್ಣ ಪ್ರಮಾಣದಲ್ಲಿ ತೀರಿಸಿಕೊಂಡಿತ್ತು. ಆ ಸಂದರ್ಭದಲ್ಲಿ ಪಾಕಿಸ್ತಾನಿ ಮೂಲದ ಸಾಧಿಕ್ ಖಾನ್ ಎಂಬ ವ್ಯಕ್ತಿ, ಲಂಡನ್ ಮಹಾನಗರದ ಲಾರ್ಡ್ ಮೇಯರ್ ಆಗಿ ಆಯ್ಕೆಗೊಂಡಿದ್ದರು. ಶತಮಾನಗಳ ಕಾಲ ವಸಾಹತುಶಾಹಿ ನೀತಿಯ ಪಾಪ ಕಾರ್ಯಗಳಿಗಾಗಿ ಇಂಗ್ಲೆಂಡಿಗೆ ಕಾಲ ಗರ್ಭದಲ್ಲಿ ಏನು ಹುದಿಗಿದೆಯೋ ಯಾರು ಬಲ್ಲರು? ಇತಿಹಾಸಕಾರರು, ಇಂಗ್ಲೆಂಡ್ ದೇಶವನ್ನು ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಬಣ್ಣಿಸಿದ್ದರು. ಈಗ ಇಂಗ್ಲೆಂಡ್ ಮೇಲೆಯೇ ಸೂರ್ಯಾಸ್ತವಾಗಿದೆಯೆಂದು ತೋರುತ್ತದೆ !

ನಾನು ಟಿವಿಯಲ್ಲಿ ರಿಷಿ ಸುನಕ್ ಜಯಭೇರಿಗೆ ಸಂಬಂಧಿಸಿದ ದೃಶ್ಯಗಳು ಹಾಗೂ ವಿಮರ್ಶೆಗಳನ್ನು ನೋಡುತ್ತಿದ್ದಾಗ, ನಾನೂ ಸಹ ಅವರ ಬಗ್ಗೆ ಅಸೂಯೆಪಟ್ಟೆ, ನನ್ನನ್ನು ನಾನೇ ಪ್ರಶ್ನಿಸಿಕೊಂಡೆ ಕೂಡ. 42 ವರ್ಷದವನಿದ್ದಾಗ ನಾನೇನು ಮಾಡುತ್ತಿದ್ದೆ? ಹೌದು, ಜೀವನ ಸಾಗಿಸಲು ನಾನು ಆಗ ಲೇಖನಿ ಹಿಡಿದಿದ್ದೆ. **ಆಗ ನಾನು ದೈಹಿಕ ಶಕ್ತಿಗಿಂತ ಮೆದುಳಿನ ಶಕ್ತಿಯ ಹಿರಿಮೆಯನ್ನು ಅರ್ಥ ಮಾಡಿಕೊಂಡೆ** ಆದ್ದರಿಂದಲೇ ಅಮೇರಿಕಾ ಸ್ವಾತಂತ್ರ್ಯ ಘೋಷಣೆಯನ್ನು ಸಿದ್ಧಪಡಿಸಿದ ಅಮೆರಿಕದ ಮೂರನೇ ರಾಷ್ಟ್ರಾಧ್ಯಕ್ಷ ಥಾಮಸ್ ಜೆಫರ್ಸನ್ ಅವರ ವಾದವನ್ನು ನಾನು ಒಪ್ಪುವುದಿಲ್ಲ. ಸ್ವಾತಂತ್ರ್ಯ ಘೋಷಣೆಯ ಪ್ರಾರಂಭಿಕ ವಾಕ್ಯದಲ್ಲಿ ಅವರು ಈ ರೀತಿ ನಮೂದಿಸಿದ್ದರು. "ನಾವು ಈ ಸತ್ಯಗಳನ್ನು ಸ್ವಯಂ ವೇದ್ಯವೆಂದು ಪರಿಗಣಿಸಿದ್ದೇವೆ. ಎಲ್ಲಾ ಮನುಷ್ಯರು ಸೃಷ್ಟಿಯಲ್ಲಿ ಸಮಾನರು...". ಎಲ್ಲಾ ಮನುಷ್ಯರು ಸೃಷ್ಟಿಯಲ್ಲಿ ಸಮಾನರು? ಇಲ್ಲ. ಆದ್ದರಿಂದಲೇ, ರಿಷಿ ಸುನಕ್ ಇಂಗ್ಲೆಂಡ್‌ನಲ್ಲಿ ಬೇರೆಯವರಿಗಿಂತ ಭಿನ್ನವಾಗಿದ್ದಾರೆ. ಅದೇ ರೀತಿಯಲ್ಲಿ ಎಲ್ಲಾ ಮಹಾನ್ ಸಾಧಕರು – ವಿಜ್ಞಾನಿಗಳು, ವೈದ್ಯರು, ಇಂಜಿನಿಯರ್‌ಗಳು, ಕಲಾವಿದರು, ಸೇನೆಯ ಮಹಾದಂಡ ನಾಯಕರು ಅಥವಾ ಪ್ರಧಾನ ಮಂತ್ರಿಯಾಗಿರಬಹುದು– ಇವರೆಲ್ಲಾ ಒಬ್ಬರಿಗಿಂತ ಒಬ್ಬರು ಭಿನ್ನರಾಗಿದ್ದಾರೆ. ಈ ಜ್ಞಾನೋದಯವಾದಾಗ ನಾನು ಟಿವಿ ಕಾರ್ಯಕ್ರಮವನ್ನು ಯಾವುದೇ ಅಸೂಯೆ ಇಲ್ಲದೆ ಶಾಂತ ಚಿತ್ತತೆಯಿಂದ ನೋಡಿದೆ. **ನಾನು, ಇಂತಹ ಮಹಾನ್ ಸಾಧಕರಿಗಿಂತ ಭಿನ್ನವಾಗಿ ದೇವರಿಂದ ಅಥವಾ ನಿಸರ್ಗದಿಂದ ಸೃಷ್ಟಿಸಲ್ಪಟ್ಟ ಜೀವಿಯೆಂಬುದನ್ನು ಅರ್ಥ ಮಾಡಿಕೊಂಡೆ**

ಕೊನೆಯಲ್ಲಿ, ಒಂದು ಸತ್ಯವನ್ನು ನಾನು ಕಂಡುಕೊಂಡೆ : ಹೆಸರಾಂತ ಆಂಗ್ಲ ಕವಿ ಜಾನ್ ಮಿಲ್ಟನ್ ಅವರು ಒಮ್ಮೆ ರಾಷ್ಟ್ರೀಯ ಅಭಿಮಾನದ ಭಾವೋದ್ವೇಗದಲ್ಲಿ **"ದೇವರು ಕೆಲವು ಕಠಿಣವಾದಂತಹ ಕೆಲಸಗಳನ್ನು ಮಾಡಬೇಕೆಂದಾಗ, ತನ್ನ ಇಂಗ್ಲಿಷ್ ಮನುಷ್ಯನನ್ನು ಕಳುಹಿಸುತ್ತಾನೆ"** ಎಂದು ಹೇಳಿದ್ದರು.

ದುಃಖಕರ ಸಂಗತಿ ಎಂದರೆ, ಅದೇ ದೇವರು ಈಗ ತನ್ನ ಕಠಿಣವಾದಂತಹ ಕೆಲಸಗಳನ್ನು ಮಾಡಲು ಒಬ್ಬ ಹಿಂದೂ ಮನುಷ್ಯನನ್ನು ಕಳುಹಿಸಿದ್ದಾನೆ.

ಅದೇ ಮಾನವ ಕುಲ ಕೋಟಿಯ ವಿಪರ್ಯಾಸವಲ್ಲವೇ?

voice@ starofmysore.com

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪೌರಕಾರ್ಮಿಕ ಮಹಿಳೆ ಮಲ್ಲಮ್ಮನ ಅಭಿನಂದಿಸಿದ ಸಫಾಯಿ ಕರ್ಮಚಾರಿ ಅಧ್ಯಕ್ಷ ಶಿವಣ್ಣ


ವಿಜಯನಗರ, ಅ.31– ಮೂರು ದಶಕಗಳ ವೃತ್ತಿ ಜೀವನದಲ್ಲಿ ರಜೆ ಪಡೆಯದೆ ಸ್ವಚ್ಛತಾ ಸೇವೆ ಸಲ್ಲಿಸುವ ಮೂಲಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನವಾಗಿರುವ ನಿವೃತ್ತ ಪೌರಕಾರ್ಮಿಕ ಮಹಿಳೆ ಮಲ್ಲಮ್ಮ ಅವರನ್ನು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರಾದ ಎಂ.ಶಿವಣ್ಣ ಅಭಿನಂದಿಸಿದರು.



ಈ ವೇಳೆ ಮಾತನಾಡಿದ ಅವರು, ವಿಜಯನಗರ ಜಿಲ್ಲೆ ಹೂವಿನಹಡಗಲಿಯ ಪುರಸಭೆಯಲ್ಲಿ ಸ್ವಚ್ಛತಾ ಪೌರಕಾರ್ಮಿಕರಾಗಿರುವ ಶ್ರೀಮತಿ ಮಲ್ಲಮ್ಮನವರು 30 ವರ್ಷಗಳ ವೃತ್ತಿ ಜೀವನದಲ್ಲಿ ಒಂದು ದಿನವೂ ವಿರಮಿಸದೆ ಸೇವೆ ಸಲ್ಲಿಸಿ, ಎರಡು ವರ್ಷದ ಹಿಂದೆ ನಿವೃತ್ತರಾಗಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರ, ಮಲ್ಲಮ್ಮ ಅವರ ಅವಿರತ ಸೇವೆಯನ್ನು ಗುರುತಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಿ, ಗೌರವಿಸಿರುವುದು ಸಂತಸದ ಸಂಗತಿ. ಇದಕ್ಕಾಗಿ ಮುಖ್ಯಮಂತ್ರಿಗಳಿಗೆ ಧನ್ಯವಾದ ತಿಳಿಸುತ್ತೇನೆ. ಮಲ್ಲಮ್ಮನವರು ಎಂದೂ ಪ್ರಶಸ್ತಿ ನಿರೀಕ್ಷಿಸಿರಲಿಲ್ಲ. ಆದರೂ ಇವರ ಸೇವೆಯನ್ನು ಸರ್ಕಾರವೇ ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಆದರ್ಶನೀಯ ಎಂದು ಬಣ್ಣಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಹನುಮಂತಪ್ಪ, ಸ್ಥಳೀಯ ಮುಖಂಡರು, ತಾಲೂಕು ಹಂತದ ಅಧಿಕಾರಿಗಳು ಉಪಸ್ಥಿತರಿದ್ದರು.

ಗ್ರೇಟ್ ಬಾಂಬೆ ಸರ್ಕಸ್ ನ.7ಕ್ಕೆ ಕೊನೆ

ಮೈಸೂರು, ಅ.31– ಮೈಸೂರಲ್ಲಿ ಪ್ರದರ್ಶಿತಗೊಳ್ಳುತ್ತಿರುವ ಗ್ರೇಟ್ ಬಾಂಬೆ ಸರ್ಕಸ್ ನ.7ರವರೆಗೆ ಪ್ರದರ್ಶಿತಗೊಳ್ಳಲಿದೆ.




ಏಷ್ಯಾದ ಅತೀ ದೊಡ್ಡ ಸರ್ಕಸ್ ಕಂಪನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ಸರ್ಕಸ್ ಇಥಿಯೋಪಿಯಾ ಮತ್ತು ರಷ್ಯನ್ ಸಾಹಸ ಪ್ರದರ್ಶನ, ಮನರಂಜನೆ ಭರಪೂರವಿದೆ. ಪ್ರತಿನಿತ್ಯ ಮೂರು ಪ್ರದರ್ಶನವಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು


ನಾಡಿನ ಸಮಸ್ತ ಜನತೆಗೆ
67ನೇ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ನವೆಂಬರ್ 1, 2022

ದಿನಾಂಕ: 01.11.2022, ಮಂಗಳವಾರ

ಧ್ವಜಾರೋಹಣ ಹಾಗೂ ರಾಜ್ಯೋತ್ಸವ ಸಂದೇಶ

ಸಮಯ: ಬೆಳಿಗ್ಗೆ 9.00 ಗಂಟೆಗೆ
ಸ್ಥಳ: ಶ್ರೀ ಕಂಠೀರವ ಕ್ರೀಡಾಂಗಣ, ಬೆಂಗಳೂರು



ದಿ|| ಡಾ. ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ

ಸಮಯ: ಸಂಜೆ 4.00 ಗಂಟೆಗೆ
ಸ್ಥಳ: ವಿಧಾನಸೌಧದ ಮುಂಭಾಗ, ಬೆಂಗಳೂರು

ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ

ಸಮಯ: ಸಂಜೆ 6.30 ಗಂಟೆಗೆ
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಂಗಳೂರು

67ನೇ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಸಾಹಿತ್ಯ, ಶಿಕ್ಷಣ, ಕಲೆ, ಸಂಸ್ಕೃತಿ, ಪರಂಪರೆ, ಇತ್ಯಾದಿ ಕ್ಷೇತ್ರಗಳಲ್ಲಿ ಕನ್ನಡದ ಮತ್ತು ಕನ್ನಡಿಗರ ಸಾಧನೆಯನ್ನು ಸ್ಮರಿಸುವುದು ಅತ್ಯಂತ ಅರ್ಥಪೂರ್ಣವಾಗಿದೆ.

ಕನ್ನಡ ಭಾಷೆ, ನಾಡು, ನುಡಿಗಳ ಅಭಿವೃದ್ಧಿಗಾಗಿ ಶ್ರಮಿಸಿದ ಎಲ್ಲಾ ಮಹನೀಯರನ್ನು ಸ್ಮರಿಸೋಣ.

ನಮ್ಮ ಭವ್ಯ ಪರಂಪರೆಯ ರಕ್ಷಣೆಗಾಗಿ ಜೊತೆಯಾಗಿ ಶ್ರಮಿಸೋಣ ಮತ್ತು ಎಲ್ಲಾ ವ್ಯವಹಾರಗಳಲ್ಲಿಯೂ ಕನ್ನಡವನ್ನು ಕಡ್ಡಾಯವಾಗಿ ಬಳಸಲು ಸಂಕಲ್ಪ ಮಾಡೋಣ.

– ಬಸವರಾಜ ಎಸ್ ಬೊಮ್ಮಾಯಿ



ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು...

– ಕುವೆಂಪು

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಮೂರನೇ ಪುಟದಿಂದ

ಮೃತರ ಸಂಖ್ಯೆ 141ಕ್ಕೆ ಏರಿಕೆ

ಕುಂದರಿಯಾ ಅವರ ಕುಟುಂಬದ 12 ಸದಸ್ಯರು ಸಾವನ್ನಪ್ಪಿದ್ದಾರೆಂದು ತಿಳಿದುಬಂದಿದೆ. ಸುದ್ದಿಗಾರರೊಂದಿಗೆ ಮಾತನಾಡಿರುವ ಮೋಹನಭಾಯ್ ಕಲ್ಯಾಣಜಿ ಕುಂದರಿಯಾ ಅವರು, "ನಾನು ಈ ದುರ್ಘಟನೆಯಲ್ಲಿ ಐದು ಮಕ್ಕಳು ಸೇರಿದಂತೆ ನನ್ನ ಕುಟುಂಬದ 12 ಸದಸ್ಯರನ್ನು ಕಳೆದುಕೊಂಡಿದ್ದೇನೆ. ನನ್ನ ಸಹೋದರಿಯ ಕುಟುಂಬ ಸದಸ್ಯರನ್ನು ಕಳೆದುಕೊಂಡಿದ್ದೇನೆ ಎಂದು ಹೇಳಿದ್ದಾರೆ. **9 ಮಂದಿಯ ಬಂಧನ** ಗುಜರಾತ್‌ನ ಮೋರ್ಬಿ ತೂಗು ಸೇತುವೆ ದುರಂತಕ್ಕೆ ಸಂಬಂಧಿಸಿದಂತೆ ಪೊಲೀಸರು ಸೋಮವಾರ ಒಂಬತ್ತು ಜನರನ್ನು ಬಂಧಿಸಿದ್ದಾರೆ. ಸೇತುವೆಯನ್ನು ನವೀಕರಿಸಿದ್ದ 'ಒರೇವಾ' ಕಂಪನಿಯ ವ್ಯವಸ್ಥಾಪಕರು, ಟಿಕೆಟ್ ಕಲೆಕ್ಟರ್‌ಗಳು, ಸೇತುವೆ ದುರಸ್ತಿ ಗುತ್ತಿಗೆದಾರರು ಮತ್ತು ಜನಸಂದಣಿ ನಿಯಂತ್ರಿಸುವ ಹೊಣೆ ಹೊತ್ತಿದ್ದ ಮೂವರು ಭದ್ರತಾ ಸಿಬ್ಬಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಏಜೆನ್ಸಿ ವಿರುದ್ಧ ಎಫ್‌ಐಆರ್

ಮೋರ್ಬಿ ವಿಭಾಗದ ಪೊಲೀಸ್ ಇನ್ಸ್‌ಪೆಕ್ಟರ್ ಪ್ರಕಾಶ್ ಬಾಯಿ ದೇಕಾವಾಡಿಯಾ ತಿಳಿಸಿದ್ದಾರೆ. ಏಜೆನ್ಸಿ ಸೇತುವೆ ಬಗ್ಗೆ ನಿಗಾ ವಹಿಸಿರಲಿಲ್ಲ. ಅದರ ಗುಣಮಟ್ಟವನ್ನು ಪರೀಕ್ಷಿಸದೆ ಅಕ್ಟೋಬರ್ 26 ರಂದು ಸಾರ್ವಜನಿಕರಿಗೆ ಮುಕ್ತಗೊಳಿಸಲಾಗಿತ್ತು. ನಿರ್ವಹಣೆಯಲ್ಲಿ ತೀವ್ರ ನಿರ್ಲಕ್ಷ್ಯ ಕಂಡುಬಂದಿದೆ. ವರದಿಗಳ ಪ್ರಕಾರ ನವೀಕರಣಕ್ಕಾಗಿ 8 ತಿಂಗಳ ಕಾಲ ಸೇತುವೆಯನ್ನು ಮುಚ್ಚಲಾಗಿತ್ತು. ಖಾಸಗಿ ಏಜೆನ್ಸಿಯಿಂದ ನವೀಕರಣ ಮಾಡಲಾಗಿತ್ತು ಎಂದು ಅವರು ಮಾಹಿತಿ ನೀಡಿದ್ದಾರೆ. ಸರಿಯಾದ ರೀತಿಯಲ್ಲಿ ನವೀಕರಣ, ನಿರ್ವಹಣೆ ಮಾಡದೆ, ತೀವ್ರ ನಿರ್ಲಕ್ಷ್ಯದಿಂದ ಕೇವಲ ಸೇತುವೆಯನ್ನು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಗಿತ್ತು. ಹೀಗಾಗಿ ವಿವಿಧ ಸೆಕ್ಷನ್‌ಗಳಡಿ ನಿರ್ವಹಣಾ ಏಜೆನ್ಸಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸ್ ಇನ್ಸ್‌ಪೆಕ್ಟರ್ ದೇಕಾವಾಡಿಯಾ ತಿಳಿಸಿದ್ದಾರೆ.

ಅಧಿಕಾರ ವಿಕೇಂದ್ರೀಕರಣ

ಪ್ರತಿ ತಿಂಗಳು ನಿರ್ದಿಷ್ಟ ಸಂಖ್ಯೆಯ ಪ್ರಕರಣಗಳನ್ನು ಇತ್ಯರ್ಥಪಡಿಸಲೇಬೇಕು ಎಂದು ನಿಗದಿ ಮಾಡುತ್ತಿದ್ದೇವೆ. ಹೀಗಾಗಿ ಕಂದಾಯ ನ್ಯಾಯಾಲಯಗಳ ಮುಂದಿರುವ ಕೇಸ್‌ಗಳ ಪರಿಹಾರ ಕಾರ್ಯ ತ್ವರಿತವಾಗಿ ನಡೆಯಲಿದೆ ಎಂದರು. ಈ ಮಧ್ಯೆ ಭೂ ವಿವಾದಗಳೂ ಸೇರಿದಂತೆ ತಮ್ಮ ಮುಂದಿರುವ ಕೆಲ ಪ್ರಕರಣಗಳ ವಿಚಾರಣೆ ನಡೆಸಿದರೂ ಅಂತಿಮ ತೀರ್ಪು ಪ್ರಕಟಿಸದೆ ವಿಳಂಬ ಧೋರಣೆ ಮಾಡುತ್ತಿರುವುದು ಲೋಕಾಯುಕ್ತ ತನಿಖೆಯ ಸಂದರ್ಭದಲ್ಲಿ ಬೆಳಕಿಗೆ ಬಂದಿರುವ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಇಂತಹ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವುದಾಗಿ ಸ್ಪಷ್ಟಪಡಿಸಿದರು. ಯಾವುದೇ ಪ್ರಕರಣದ ವಿಚಾರಣೆ ಪೂರ್ಣಗೊಂಡರೆ ನಿರ್ದಿಷ್ಟ ಕಾಲಾವಧಿಯೊಳಗಾಗಿ ಅಂತಿಮ ತೀರ್ಪು ನೀಡಲೇಬೇಕು ಎಂದು ಗಡುವು ವಿಧಿಸಲಾಗುವುದು ಎಂದರು. ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮತ್ತು ಆ ಗ್ರಾಮಗಳಿಗೆ ಹೆಸರು ಕೊಡುವ ಕಾರ್ಯ ನವೆಂಬರ್ ಅಂತ್ಯ ಇಲ್ಲವೇ ಡಿಸೆಂಬರ್ ಮೊದಲ ವಾರ ಯಾದಗಿರಿಯಲ್ಲಿ ನಡೆಯಲಿದೆ ಎಂದರು. ಮೊದಲ ಹಂತದಲ್ಲಿ ರಾಜ್ಯದ ಐದು ಜಿಲ್ಲೆಗಳ ವ್ಯಾಪ್ತಿಯಲ್ಲಿ ಈ ಕಾರ್ಯ ನಡೆಯಲಿದೆ ಎಂದ ಅವರು, ರಾಜ್ಯದಲ್ಲಿ ಒಟ್ಟು ಆರು ಲಕ್ಷ ಲಂಬಾಣಿ ಕುಟುಂಬಗಳಿದ್ದು ಅವರಿಗೆ ಜಾಗ,ಗುರುತು ನೀಡುವ ಕೆಲಸ ಮಾಡುತ್ತಿದ್ದೇವೆ ಎಂದರು. ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿ,ಅವುಗಳಿಗೆ ಹೆಸರು ನೀಡಿ,ಫಲಾನುಭವಿಗಳಿಗೆ ಜಾಗದ ಕ್ರಯ ಪತ್ರ ನೀಡುವ ಸರ್ಕಾರದ ಕ್ರಮ ಸುಮಾರು ಎರಡು ಸಾವಿರ ಕೋಟಿ ರೂಪಾಯಿ ಮೌಲ್ಯದ ಆಸ್ತಿಯನ್ನು ವರ್ಗಾಯಿಸುವುದೇ ಆಗಿದೆ ಎಂದರು.

ಜೆಡಿಎಸ್ 'ಪಂಚರತ್ನ ರಥಯಾತ್ರೆ'

ಸುಮಾರೆಸಿ ಹಿಮ್ಮ ಕೊಳ್ಳಬಾಗಿದೆ ನಾಡು ಗಣಿ ಗಣಪತಿ ಶ್ರೀ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪಂಚರತ್ನ ರಥಕ್ಕೆ ಸಾಂಕೇತಿಕವಾಗಿ ಚಾಲನೆ ನೀಡಿದ್ದಾರೆ. ಮುಂಬರುವ ಚುನಾವಣೆಯ ಪ್ರಣಾಳಿಕೆ ಅಂಶಗಳನ್ನು ಈ ರಥಯಾತ್ರೆ ಸಂದರ್ಭದಲ್ಲಿ ಜನರ ಮುಂದಿಟ್ಟು ಜನಾಭಿಪ್ರಾಯವನ್ನು ಸಂಗ್ರಹಿಸಲಾಗುತ್ತದೆ. ಮೊದಲ ಹಂತದಲ್ಲಿ ನ.1ರಿಂದ ಡಿ. 6ರ ವರೆಗೂ ಈ ಯಾತ್ರೆ ಸಾಗಲಿದೆ. 1994ರಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಸಹ ಕುರುಡುಮಲೆಯಿಂದಲೇ ಚುನಾವಣಾ ಪ್ರಚಾರವನ್ನು ಪ್ರಾರಂಭಿಸಿ ಸ್ವಂತ ಶಕ್ತಿಯ ಮೇಲೆ ಅಧಿಕಾರಕ್ಕೆ ಬಂದಿದ್ದರು. ಹೀಗಾಗಿ ಜೆಡಿಎಸ್ ಕೂಡ ಕುರುಡುಮಲೆಯಿಂದಲೇ ಚುನಾವಣಾ ಪ್ರಚಾರವನ್ನು ಕೈಗೊಳ್ಳುತ್ತಿದೆ. ರಥ ಯಾತ್ರೆಯ ಉಸ್ತುವಾರಿಯನ್ನು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಣಕ್ಕಿಳಿಸಲಿರುವ ಸಂಭವನೀಯ ಅಭ್ಯರ್ಥಿಗಳಿಗೆ ವಹಿಸಲಾಗಿದೆ. ಮೊದಲ ಹಂತದಲ್ಲಿ ಕೋಲಾರ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ, ಹಾಸನ ಜಿಲ್ಲೆಯ ಬಹುತೇಕ ಕ್ಷೇತ್ರಗಳಲ್ಲಿ ಯಾತ್ರೆ ಸಂಚರಿಸಲಿದೆ. ಕುಮಾರಸ್ವಾಮಿಯವರ ಜೊತೆ ಕೆಲವೆಡೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ. ದೇವೇಗೌಡ ಭಾಗವಹಿಸಲಿದ್ದಾರೆ.

ಸ್ತನ ಕ್ಯಾನ್ಸರ್‌ಗೆ ಸುಧಾರಿತ ಖಾತರಿ ಶಸ್ತ್ರಚಿಕಿತ್ಸೆ

ಭಾರತ್ ಕ್ಯಾನ್ಸರ್ ಆಸ್ಪತ್ರೆಯ ವೈದ್ಯ ತಂಡದ ವಿಶ್ವಾಸ



ಮೈಸೂರು,ಅ.31(ಎಸ್‌ಬಿಡಿ)–ವಿನೂತನ ಬ್ರೆಸ್ಟ್ ಕನ್ಸರ್ವೇಟೀವ್ ಸರ್ಜರಿ(ಬಿಸಿಎಸ್)ಯಿಂದ ರೋಗಿಗಳು ಉತ್ತಮ ಜೀವನ ನಡೆಸಬಹುದಾಗಿದೆ ಎಂದು ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆ ಮತ್ತು ಆಂಕೊಲಾಜಿ(ಗ್ರಂಥಿ) ಸಂಸ್ಥೆಯ ವೈದ್ಯಕೀಯ ಅಧೀಕ್ಷಕಿ, ಹಿರಿಯ ವಿಕಿರಣ ಆಂಕೊಲಾಜಿಸ್ಟ್ ಡಾ.ವೈ.ಎಸ್.ಮಾಧವಿ ತಿಳಿಸಿದರು.

ಆಸ್ಪತ್ರೆ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬ್ರೆಸ್ಟ್ ಕನ್ಸರ್ವೇಟೀವ್ ಸರ್ಜರಿ ವಿಧಾನ ರಾಡಿಕಲ್ ಸರ್ಜರಿಗೆ ಉತ್ತಮ ಪರ್ಯಾಯವಾಗಿದೆ. ರೋಗಿಗಳು ಉತ್ತಮ ಜೀವನ ನಡೆಸಲು ವಿನೂತನ ಸರ್ಜರಿ ಸಹಾಯಕವಾಗಿದೆ. ಇದು ಕನಿಷ್ಠ ಅಡ್ಡ ಪರಿಣಾಮ ಹೊಂದಿದ್ದು, ನೈಸರ್ಗಿಕ ಸ್ತನ ಅಂಗಾಂಶವನ್ನು ಸಂರಕ್ಷಿಸುತ್ತದೆ. ದೊಡ್ಡ ಗೆಡ್ಡೆಯನ್ನು ತೆಗೆದ ನಂತರ ಸ್ತನದಲ್ಲಿ ಉಂಟಾಗುವ ಟೊಳ್ಳನ್ನು ತುಂಬಲಾಗುತ್ತದೆ. ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ವಾರ್ಷಿಕ ನೂರಾರು ಆಂಕೊಪ್ಲಾಸ್ಟಿಕ್ ಸರ್ಜರಿ ನಡೆಸಲಾಗುತ್ತಿದ್ದು, ಆ ವೇಳೆ ಬ್ರೆಸ್ಟ್ ಕನ್ಸರ್ವೇಟಿವ್ ಸರ್ಜರಿ ಬಗ್ಗೆ ರೋಗಿಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಕನ್ಸಲ್ಟೆಂಟ್ ಸರ್ಜಿಕಲ್ ಆಂಕೊಲಾಜಿಸ್ಟ್ ಡಾ.ರಕ್ಷಿತ್ ಶೃಂಗೇರಿ ಮಾತನಾಡಿ, ಭಾರತದಲ್ಲಿ ಸ್ತನ ಕ್ಯಾನ್ಸರ್ ಹರಡುವಿಕೆಯು ಸ್ಥಿರವಾಗಿ ಹೆಚ್ಚುತ್ತಿದ್ದು, ಪ್ರಸ್ತುತ ಮಹಿಳೆಯರಲ್ಲಿ ಇದು ಸಾಮಾನ್ಯ ಎನ್ನುವಂತಾಗಿದೆ. ಶೇ.14ರಷ್ಟು ಪ್ರಕರಣಗಳು ಅಂತಿಮ ಹಂತದಲ್ಲಿ ಪತ್ತೆಯಾಗುತ್ತಿವೆ. ಭಾರತದಲ್ಲಿ ರೋಗಿಗಳ ಸ್ತನ ತೆಗೆಯುವಿಕೆಯನ್ನು ವ್ಯಾಪಕವಾಗಿ ನಡೆಸಲಾಗುತ್ತದೆ. ಪರಿಣಾಮ ರೋಗಿಯ ದೇಹದ ಅಸಮತೆ, ಭಂಗಿಯ ಅಸ್ಥಿರತೆ, ಖಿನ್ನತೆ ಹೀಗೆ ದೈಹಿಕ ಹಾಗೂ ಮಾನಸಿಕವಾಗಿ ಸಾಕಷ್ಟು ಅಡ್ಡಪರಿಣಾಮಗಳಾಗುತ್ತಿವೆ. ಹಾಗಾಗಿ ಸಾಂಪ್ರದಾಯಿಕ ಬಿಸಿಎಸ್ ವಿಧಾನಕ್ಕೆ ಆದ್ಯತೆ ನೀಡಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಆಸ್ಪತ್ರೆ ದಿಟ್ಟ ಹೆಜ್ಜೆ ಇಟ್ಟಿದೆ ಎಂದರು.

ಭಾರತ್ ಕ್ಯಾನ್ಸರ್ ಆಸ್ಪತ್ರೆ ಹಾಗೂ ಗ್ರಂಥಿ ಸಂಸ್ಥೆಯಲ್ಲಿ 2021ರ ಜನವರಿಯಿಂದ ಹಿಂದಿನ ಆಗಸ್ಟ್‌ವರೆಗೆ 400ಕ್ಕೂ ಹೆಚ್ಚು ರೋಗಿಗಳು ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಎಲ್ಲಾ ಆರಂಭಿಕ, ಶಸ್ತ್ರಚಿಕಿತ್ಸೆ ಅಗತ್ಯವಾದ ಹಂತ, ಸುಧಾರಿತ ಸ್ತನ ಕ್ಯಾನ್ಸರ್ ರೋಗಿಗಳು ಹಾಗೂ ನಿಯೋಡ್ಜುವಂಟ್ ಕಿಮೋಥೆರಪಿ ನಂತರ ತಮ್ಮ ಸ್ತನ ಸಂರಕ್ಷಿಸಿಕೊಳ್ಳಲು ಬಯಸುವವರಿಗೆ ನೂತನ ಬ್ರೆಸ್ಟ್ ಕನ್ಸರ್ವೇಟಿವ್ ಸರ್ಜರಿ ನಡೆಸಲಾಗಿದೆ. ದೇಶದ ಪ್ರಮುಖ ನಗರಗಳಲ್ಲಿ ಈ ಮಾದರಿ ಸರ್ಜರಿ ದರ ಹೆಚ್ಚಾಗುತ್ತಿದೆ. ಆದರೆ ನಮ್ಮ ಆಸ್ಪತ್ರೆಯಲ್ಲಿ ದರ ಸ್ಥಿರತೆಯೊಂದಿಗೆ ಉತ್ತಮ ಸೇವೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮತ್ತೋರ್ವ ಕನ್ಸಲ್ಟೆಂಟ್ ಸರ್ಜಿಕಲ್ ಆಂಕೊಲಾಜಿಸ್ಟ್ ಡಾ.ಎಂ.ವಿಜಯ್‌ಕುಮಾರ್ ಮಾತನಾಡಿ, ಆಂಕೋಪ್ಲಾಸ್ಟಿಕ್ ಸರ್ಜರಿ ಆಯ್ಕೆ ಮಾಡಿಕೊಳ್ಳುವ ರೋಗಿಗಳಲ್ಲಿ ಖಿನ್ನತೆ ಕಡಿಮೆಯಾಗಿದೆ. ಜೊತೆಗೆ ಸೌಂದರ್ಯ ಹಾಗೂ ಸುರಕ್ಷತೆಯ ಭಾವನೆ ಹೆಚ್ಚುತ್ತದೆ. ಸರ್ಜರಿಗೆ ಒಳಗಾದವರು ಕಡಿಮೆ ಸಮಯದಲ್ಲಿ ಚೇತರಿಸಿಕೊಳ್ಳುತ್ತಾರೆ. ಸ್ತನ ಕ್ಯಾನ್ಸರ್‌ಗೆ ಒಳಗಾದವರ ಸಂಪೂರ್ಣ ಸ್ತನವನ್ನು ತೆಗೆಯುವ ಪರಿಕಲ್ಪನೆ ಬದಲಾಗುತ್ತಿದೆ. ನಿಖರ ರೇಡಿಯೊ ಥೆರಪಿಯೊಂದಿಗೆ ಸುಧಾರಿತ ಶಸ್ತ್ರಚಿಕಿತ್ಸಾ ವಿಧಾನಗಳನ್ನು ಭಾರತ್ ಕ್ಯಾನ್ಸರ್ ಆಸ್ಪತ್ರೆ ಒಳಗೊಂಡಿದ್ದು, ಈ ನಿಟ್ಟಿನಲ್ಲಿ ಬ್ರೆಸ್ಟ್ ಕನ್ಸರ್ವೇಟಿವ್ ಸರ್ಜರಿಯೂ ಸೂಕ್ತ ವಿಧಾನವಾಗಿದೆ. 'ಸ್ತನ ಕ್ಯಾನ್ಸರ್ ಕ್ಲಿನಿಕ್' ಸೇವೆ ಈಗ ಪ್ರತಿದಿನ ಲಭ್ಯವಿದ್ದು, ರೋಗಿಗಳು ಸದುಪಯೋಗಪಡಿಸಿಕೊಳ್ಳಬಹುದು ಎಂದು ಮಾಹಿತಿ ನೀಡಿದರು. ರೇಡಿಯೇಶನ್ ಆಂಕೊಲಾಜಿಸ್ಟ್ ಡಾ.ವಿನಯ್ ಕುಮಾರ್, ಮೆಡಿಕಲ್ ಆಂಕೊಲಾಜಿಸ್ಟ್ ಡಾ.ಅಭಿಲಾಷ್, ಆಂಕೊ ಪೆಥಾಲಜಿಸ್ಟ್ ಡಾ.ಕವಿತಾ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಉಚಿತ ತಪಾಸಣೆ ವಿಸ್ತರಣೆ

ತಿಂಗಳ ಸ್ತನ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮದ ಭಾಗವಾಗಿ ನಗರದಾದ್ಯಂತದ ಪ್ರಮುಖ ಉದ್ಯಾನವನಗಳಲ್ಲಿ ಶಿಬಿರ ಆಯೋಜಿಸಿ ಉಚಿತ ಸ್ಕ್ರೀನಿಂಗ್ ಪರೀಕ್ಷೆ ಮತ್ತು ಮ್ಯಾಮೊಗ್ರಫಿ ಪರೀಕ್ಷೆಯಲ್ಲಿ ಶೇ.50ರಷ್ಟು ರಿಯಾಯಿತಿಯೊಂದಿಗೆ ಜನರಲ್ಲಿ ಜಾಗೃತಿ ಮೂಡಿಸಲಾಗಿದ್ದು, ಈ ಸೇವೆಯನ್ನು ನವೆಂಬರ್ ತಿಂಗಳಾಂತ್ಯದವರೆಗೂ ವಿಸ್ತರಣೆ ಮಾಡಲಾಗಿದೆ. ಪ್ರತಿ ಶನಿವಾರ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಶಿಬಿರ ನಡೆಸಲಿದ್ದು, ನೋಂದಣಿ ಮತ್ತು ವಿವರಗಳಿಗೆ ಮೊ.9945433300 ಅನ್ನು ಸಂಪರ್ಕಿಸಬಹುದು ಎಂದು ಭಾರತ್ ಕ್ಯಾನ್ಸರ್ ಆಸ್ಪತ್ರೆ ಹಾಗೂ ಗ್ರಂಥಿ ಕೇಂದ್ರ ತಿಳಿಸಿದೆ.

ಬಿಎಸ್‌ವೈ ವಿರುದ್ಧ ತನಿಖೆ
ತಡೆಯಾಜ್ಞೆ ವಿಸ್ತರಣೆ

ನವದೆಹಲಿ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವಸತಿ ಯೋಜನೆಯೊಂದರ ಕಾಮಗಾರಿ ಗುತ್ತಿಗೆ ನೀಡಲು ಗುತ್ತಿಗೆದಾರರಿಂದ ಲಂಚ ಪಡೆದ ಆರೋಪದ ಮೇಲೆ ಬಿ.ಎಸ್.ಯಡಿಯೂರಪ್ಪ ವಿರುದ್ಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ನ ತನಿಖೆಗೆ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂಕೋರ್ಟ್ ವಿಸ್ತರಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಹಾಗೂ ಹಿಮಾ ಕೊಹ್ಲಿ ಅವರನ್ನು ಒಳಗೊಂಡ ಪೀಠವು ಬಿಜೆಪಿ ಹಿರಿಯ ನಾಯಕನ ಮನವಿಯ ಮೇರೆಗೆ ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತು.

ಯಡಿಯೂರಪ್ಪ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಸಿದ್ಧಾರ್ಥ ದವೆ, ಈ ಪ್ರಕರಣದಲ್ಲಿ ಕರ್ನಾಟಕ ಸರ್ಕಾರವು ಪ್ರತಿವಾದಿಯಲ್ಲ ಎಂದು ಗಮನ ಸೆಳೆದರು. ಆಗ ನ್ಯಾಯಪೀಠವು, ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಾಹಂ ಅವರ ಖಾಸಗಿ ದೂರಿನ ಪ್ರಕರಣ ಇದಾಗಿದ್ದರೂ ನಾವು ರಾಜ್ಯ ಸರ್ಕಾರದ ಸಹಾಯ ಪಡೆಯಬಹುದು ಎಂದಿತು. ಯಡಿಯೂರಪ್ಪ ವಿರುದ್ಧದ ತನಿಖೆಗೆ ಸೆ.23 ರಂದು ನೀಡಿದ್ದ ತಡೆಯಾಜ್ಞೆ ಮುಂದಿನ ಆದೇಶದವರೆಗೆ ಮುಂದುವರಿಯಲಿದೆ ಎಂದು ಪೀಠ ಹೇಳಿತು. ಲಂಚ ಪಡೆದ ಆರೋಪದ ಮೇಲೆ ಸಚಿವ ಎಸ್.ಟಿ.ಸೋಮಶೇಖರ್, ಯಡಿಯೂರಪ್ಪ, ಅವರ ಮಗ ಹಾಗೂ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ 9 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಲು ಹೈಕೋರ್ಟ್ ಸೂಚಿಸಿತ್ತು. ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ನ್ಯೂಜಿಲೆಂಡ್, ಬಾಂಗ್ಲಾ ಸರಣಿಗೆ ಟೀಂ ಇಂಡಿಯಾ ಪ್ರಕಟ

ನವದೆಹಲಿ, ಅ.31– ಮುಂಬರುವ ನ್ಯೂಜಿಲೆಂಡ್ ಮತ್ತು ಬಾಂಗ್ಲಾದೇಶ ವಿರುದ್ಧದ ಸರಣಿಗಳಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಸೋಮವಾರ ಭಾರತ ತಂಡವನ್ನು ಪ್ರಕಟಿಸಿದೆ.

ನ್ಯೂಜಿಲೆಂಡ್ ವಿರುದ್ಧದ ಟಿ 20 ಸರಣಿಗೆ ಹಾರ್ದಿಕ್ ಪಾಂಡ್ಯ ನಾಯಕರಾಗಿದ್ದರೆ, ರಿಷಬ್ ಪಂತ್ ಉಪನಾಯಕರಾಗಿದ್ದಾರೆ. ಈ ತಂಡದಿಂದ ದಿನೇಶ್ ಕಾರ್ತಿಕ್ ಮತ್ತು ಆರ್.ಅಶ್ವಿನ್ ಅವರನ್ನು ಕೈಬಿಡಲಾಗಿದೆ. ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಯನ್ನು ಶಿಖರ್ ಧವನ್ ಮುನ್ನಡೆಸಲಿದ್ದು, ರಿಷಭ್ ಪಂತ್ ಉಪ ನಾಯಕರಾಗಿರಲಿದ್ದಾರೆ. ಸ್ಟಾರ್ ಆಟಗಾರರಾದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿಗೆ ವಿಶ್ರಾಂತಿ ನೀಡಲಾಗಿದೆ.

ಬಾಂಗ್ಲಾ ವಿರುದದ್ಧದ ಏಕದಿನ ಮತ್ತು ಟೆಸ್ಟ್ ಸರಣಿಯನ್ನು ರೋಹಿತ್ ಶರ್ಮಾ ಮುನ್ನಡೆಸಲಿದ್ದು, ಈ ತಂಡಕ್ಕೆ ವಿರಾಟ್ ಕೊಹ್ಲಿ, ಕೆ.ಎಲ್.ರಾಹುಲ್ ಸೇರ್ಪಡೆಯಾಗಿದ್ದಾರೆ.

ನ್ಯೂಜಿಲೆಂಡ್ ವಿರುದ್ಧದ ಟಿ20 ತಂಡ: ಹಾರ್ದಿಕ್ ಪಾಂಡ್ಯ (ನಾಯಕ), ರಿಷಬ್ ಪಂತ್, ಶುಭಮನ್ ಗಿಲ್, ಇಶಾನ್ ಕಿಶನ್, ದೀಪಕ್ ಹೂಡಾ, ಸೂರ್ಯ ಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಹರ್ಷಲ್ ಪಟೇಲ್, ಮೊಹಮದ್ ಸಿರಾಜ್, ಭುವನೇಶ್ವರ್ ಕುಮಾರ್, ಉಮ್ರಾನ್ ಮಲಿಕ್.

ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿ: ಶಿಖರ್ ಧವನ್ (ನಾಯಕ), ರಿಷಭ್ ಪಂತ್, ಶುಭಮನ್ ಗಿಲ್, ದೀಪಕ್ ಹೂಡಾ, ಸೂರ್ಯ ಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ಶಾಹಬಾಜ್ ಅಹ್ಮದ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ದೀಪಕ್ ಚಹಾರ್, ಕುಲದೀಪ್ ಸೇನ್, ಉಮ್ರಾನ್ ಮಲಿಕ್.

ಬಾಂಗ್ಲಾದೇಶ ವಿರುದ್ಧದ ಏಕದಿನ ತಂಡ: ರೋಹಿತ್ ಶರ್ಮಾ (ನಾಯಕ), ಕೆ.ಎಲ್.ರಾಹುಲ್, ಶಿಖರ್ ಧವನ್, ವಿರಾಟ್ ಕೊಹ್ಲಿ, ರಜತ್ ಪಾಟಿದಾರ್, ಶ್ರೇಯಸ್ ಅಯ್ಯರ್, ರಾಹುಲ್ ತ್ರಿಪಾಠಿ, ರಿಷಭ್ ಪಂತ್, ಇಶಾನ್ ಕಿಶನ್ (ವಿಕೆಟ್ ಕೀಪರ್), ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ದೀಪಕ್ ಚಹಾರ್, ಯಶ್ ದಯಾಳ್

ಬಾಂಗ್ಲಾದೇಶ ವಿರುದ್ಧದ ಟೆಸ್ಟ್ ತಂಡ: ರೋಹಿತ್ ಶರ್ಮಾ (ನಾಯಕ), ಕೆ.ಎಲ್.ರಾಹುಲ್, ಶುಭಮನ್ ಗಿಲ್, ಚೇತೇಶ್ವರ ಪೂಜಾರ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ರಿಷಭ್ ಪಂತ್, ಕೆಎಸ್ ಭರತ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಶಾರ್ದೂಲ್ ಠಾಕೂರ್, ಮೊಹಮದ್ ಶಮಿ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್.

ಕ್ಲಬ್‌ನಲ್ಲಿ ಇಸ್ಪೀಟ್ ಆಡುತ್ತಿದ್ದಾಗಲೇ ವ್ಯಕ್ತಿ ಹೃದಯಾಘಾತದಿಂದ ಸಾವು

ಮೈಸೂರು, ಅ. 31(ಆರ್‌ಕೆ)– ಕ್ಲಬ್‌ನಲ್ಲಿ ಇಸ್ಪೀಟ್ ಆಡುತ್ತಿದ್ದಾಗಲೇ ತೀವ್ರ ಹೃದಯಾಘಾತಕ್ಕೊಳಗಾಗಿ ವ್ಯಕ್ತಿ ಸಾವನ್ನಪ್ಪಿರುವ ಘಟನೆ ಮೈಸೂರಿನಲ್ಲಿ ಭಾನುವಾರ ರಾತ್ರಿ ಸಂಭವಿಸಿದೆ.




ಮೈಸೂರಿನ ಮಂಡಿ ಮೊಹಲ್ಲಾದ ಕಾಮಾಟಗೇರಿ ನಿವಾಸಿ ಅಶ್ವಥ(ಚಿಯಾ) ಎಂಬ 55 ವರ್ಷದ ವ್ಯಕ್ತಿ ಸಾವನ್ನಪ್ಪಿದವರು. ಲಷ್ಕರ್ ಮೊಹಲ್ಲಾದ ಕ್ಲಬ್‌ವೊಂದರಲ್ಲಿ ಸ್ನೇಹಿತರೊಂದಿಗೆ ಇಸ್ಪೀಟ್ ಆಡುತ್ತಿದ್ದ ಅವರಿಗೆ ಭಾನುವಾರ ರಾತ್ರಿ ಸುಮಾರು 9 ಗಂಟೆ ವೇಳೆಗೆ ಎದೆನೋವು ಕಾಣಿಸಿಕೊಂಡು ಕುರ್ಚಿಯಲ್ಲಿ ಕುಳಿತಲ್ಲೇ ತೀವ್ರ ಅಸ್ವಸ್ಥರಾಗಿದ್ದಾರೆ. ತಕ್ಷಣ ಸ್ಥಳದಲ್ಲಿದ್ದವರು ಆಸ್ಪತ್ರೆಗೆ ಕರೆದೊಯ್ಯಲು ಯತ್ನಿಸಿದರಾದರೂ, ಅಷ್ಟರಲ್ಲೇ ಅಶ್ವಥ ಕೊನೆಯುಸಿರೆಳೆದಿದ್ದು, ಈ ದೃಶ್ಯದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಜೆಡಿಎಸ್ ಕಾರ್ಯಕರ್ತರಾಗಿದ್ದ ಅವರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇಂದು ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಸಂತಾಪ: ಕಾರ್ಪೊರೇಟರ್‌ಗಳಾದ ಎಂ.ಡಿ.ನಾಗರಾಜ್, ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ಮಾಜಿ ಶಾಸಕ ವಾಸು, ಮಾಜಿ ಮೇಯರ್ ಆರ್.ಲಿಂಗಪ್ಪ ಸೇರಿದಂತೆ ಅನೇಕ ಗಣ್ಯರು ಅಶ್ವಥ ಅವರ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿದ್ದಾರೆ.

ನಾಗಮಂಗಲ ಪುರಸಭೆ ಉಪಚುನಾವಣೆ
ಜೆಡಿಎಸ್ ಅಭ್ಯರ್ಥಿ ಜಯಭೇರಿ

ನಾಗಮಂಗಲ,ಅ.31– ನಾಗಮಂಗಲ ಪುರಸಭೆಯ ಹಿಂದುಳಿದ ವರ್ಗ ಎಗೆ ಮೀಸಲಾಗಿದ್ದ 3ನೇ ವಾರ್ಡ್‌ಗೆ ನಡೆದಿದ್ದ ಉಪ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಜೆಡಿಎಸ್ ಜಯಭೇರಿ ಬಾರಿಸಿದೆ.



ಭಾರೀ ಜಿದ್ದಾಜಿದ್ದಿನಿಂದ ಕೂಡಿದ್ದ ನಾಗಮಂಗಲ ಪುರಸಭೆಯ 3ನೇ ವಾರ್ಡ್‌ನ ಉಪಚುನಾವಣೆಯನ್ನು ಜೆಡಿಎಸ್ ಹಾಗೂ ಕಾಂಗ್ರೆಸ್‌ಎರಡು ಪಕ್ಷಗಳು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದವು. ಅದರಲ್ಲೂ ಜೆಡಿಎಸ್ ಶಾಸಕ ಕೆ.ಸುರೇಶ್‌ಗೌಡ ಮತ್ತು ಕಾಂಗ್ರೆಸ್‌ನ ಮಾಜಿ ಸಚಿವ ಎನ್. ಚಲುವರಾಯಸ್ವಾಮಿ ನಡುವೆ ತೀವ್ರ ಜಿದ್ದಾಜಿದ್ದಿ ಏರ್ಪಟ್ಟಿತ್ತು. ಕೊನೆಗೆ ವಿಜಯಲಕ್ಷ್ಮಿ ಜೆಡಿಎಸ್‌ಗೆ ಒಲಿದಿದ್ದಾಳೆ.

ನಾಗಮಂಗಲ ಪಟ್ಟಣದ ತಾಲೂಕು ಪಂಚಾಯತ್ ಕಚೇರಿಯಲ್ಲಿ ನಡೆದ ಮತ ಎಣಿಕೆ ಬೆಳಗ್ಗೆ 8 ಗಂಟೆಗೆ ಆರಂಭವಾಯಿತು. ಒಟ್ಟು 515 ಮತದಾರರ ಸಂಖ್ಯೆಯಲ್ಲಿ 459 ಮತಗಳು ಚಲಾವಣೆಯಾಗಿದ್ದವು. ಈ ಪೈಕಿ ಜೆಡಿಎಸ್‌ನ ಸೌಮ್ಯ ತಿರುಮಲಯ್ಯಗೆ 243 ಮತ ಸಿಕ್ಕರೆ, ಕಾಂಗ್ರೆಸ್‌ನ ಲಕ್ಷ್ಮಿರಂಗಪ್ಪ ಪರ 209 ಮತಗಳು ಚಲಾವಣೆಯಾಗಿದ್ದವು. ಇನ್ನು ಬಿಜೆಪಿ ಅಭ್ಯರ್ಥಿ ಶಶಿಕಲಾಗೆ ಕೇವಲ 5 ಮತ ಬಿದ್ದರೆ, 2 ನೋಟಾಗೆ ಚಲಾವಣೆಯಾಗಿತ್ತು.

ಸುರೇಶ್‌ಗೌಡಗೆ ಮೇಲುಗೈ: ಈ ಹಿಂದಿನಿಂದಲೂ ನಾಗಮಂಗಲ ಕ್ಷೇತ್ರ ಜೆಡಿಎಸ್‌ನ ಭದ್ರಕೋಟೆಯಾಗಿದ್ದು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಚಲುವರಾಯಸ್ವಾಮಿ ವಿರುದ್ಧ ಜೆಡಿಎಸ್‌ನ ಸುರೇಶ್‌ಗೌಡ 47 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ 8 ವಿಧಾನ ಸಭಾ ಕ್ಷೇತ್ರಗಳ ಪೈಕಿ 7ರಲ್ಲಿ ಸುಮಲತಾ ಮುನ್ನಡೆ ಸಾಧಿಸಿದ್ದರೆ, ನಾಗಮಂಗಲದಲ್ಲಿ ಮಾತ್ರ ಸುಮಲತಾಗಿಂತ ನಿಖಿಲ್ 7 ಸಾವಿರ ಮತಗಳನ್ನು ಹೆಚ್ಚು ಪಡೆದಿದ್ದರು.

ಮೇಲ್ನೋಟಕ್ಕೆ ನಾಗಮಂಗಲ ಜೆಡಿಎಸ್‌ನ ಭದ್ರಕೋಟೆ ಎಂಬುದು ಸಾಬೀತಾಗಿತ್ತು. ಇದೀಗ ಪುರಸಭೆ ಉಪಚುನಾವಣೆಯಲ್ಲೂ ಜೆಡಿಎಸ್ ಗೆಲುವು ಸಾಧಿಸುವ ಮೂಲಕ ತನ್ನ ಪಾರುಪತ್ಯ ಮೆರೆದಿದೆ. ವಿಧಾನಸಭಾ ಚುನಾವಣೆಗೂ ಮುನ್ನ ನಾಗಮಂಗಲದಲ್ಲಿ ಸೆಮಿಫೈನಲ್ ಪಂದ್ಯದಂತೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಗೆಲುವು ಸಾಧಿಸಿದೆ.

ಈ ಚುನಾವಣೆಯನ್ನು ಜೆಡಿಎಸ್‌ಗಿಂತ ಕಾಂಗ್ರೆಸ್ ಬಹಳ ಪ್ರತಿಷ್ಠೆಯಾಗಿ ತೆಗೆದುಕೊಂಡಿತ್ತು. ಚಲುವರಾಯಸ್ವಾಮಿ ತಮ್ಮ ನಾಯಕತ್ವದಲ್ಲಿ ಎರಡು ಪರಿಷತ್ ಚುನಾವಣೆಯಲ್ಲಿ ಮಂಡ್ಯದಲ್ಲಿ ಕಾಂಗ್ರೆಸ್‌ನ್ನು ಗೆಲ್ಲಿಸಿ ತಾಕತ್ತು ತೋರಿಸಿದ್ದರು. ಆದರೆ ಈ ಉಪಚುನಾವಣೆಯಲ್ಲಿ ಸೋಲುವ ಮೂಲಕ ಮುಂದಿನ ವಿಧಾನಸಭಾ ಚುನಾವಣೆಗೆ ಸಂಘಟನೆ, ಜೊತೆಗೆ ಪಕ್ಷವನ್ನು ಬಲಿಷ್ಠಗೊಳಿಸುವ ಹೊಣೆ ಚಲುವರಾಯಸ್ವಾಮಿ ಮೇಲೆ ಬಿದ್ದಿದೆ.

ಬಿಜೆಪಿ ಸ್ಥಿತಿ ಶೋಚನೀಯ: ಇನ್ನು ಕ್ಷೇತ್ರದಲ್ಲಿ ಬಿಜೆಪಿ ಪಕ್ಷಕ್ಕೆ ಸಂಘಟನೆಯೂ ಇಲ್ಲ. ಅಭ್ಯರ್ಥಿಯೂ ಇಲ್ಲವಾದ್ದರಿಂದ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ ಕಾಟಾಚಾರಕ್ಕೆ ಅಭ್ಯರ್ಥಿ ಹಾಕಿದ್ದರಿಂದ ಠೇವಣಿ ಇರಲಿ ಎರಡಂಕಿಯನ್ನೂ ದಾಟಲಿಲ್ಲ.

15 ಮಂದಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ

ಮಂಡ್ಯ,ಅ.31– ಮೂವರು ಪತ್ರಕರ್ತರು ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 15 ಮಂದಿ ಸಾಧಕರಿಗೆ ಮಂಡ್ಯ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಜಿಲ್ಲಾಡಳಿತ ಘೋಷಿಸಿದ್ದು, ಎರಡು ಸಮಾಜ ಸೇವಾ ಸಂಸ್ಥೆಗಳಿಗೂ ಸಹ ಪ್ರಶಸ್ತಿ ಒಲಿದಿದೆ.

ಸಮುದಾಯ ಆರೋಗ್ಯ ಸೇವಾ– ನಾಗಮಂಗಲದ ಆದಿಚುಂಚನಗಿರಿ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಹಾಗೂ ಅದೇ ನಾಗಮಂಗಲ ತಾಲೂಕಿನ ಕನ್ನಡ ಸಂಘಕ್ಕೂ ಸಹ ರಾಜ್ಯೋತ್ಸವ ಪ್ರಶಸ್ತಿ ಒಲಿದಿದೆ.

ಇನ್ನು ರಂಗಭೂಮಿ ಕ್ಷೇತ್ರದಿಂದ ಮದ್ದೂರಿನ ಆಬಲವಾಡಿಯ ಸಚ್ಚಿದಾನಂದಮೂರ್ತಿ, ಜನಪದ ಕಲೆ ಕ್ಷೇತ್ರದಿಂದ ಪಾಂಡವಪುರದ ಲಕ್ಷ್ಮಿಸಾಗರ ಗ್ರಾಮದ ಎಲ್.ಕೆ.ಕೆಂಪೇಗೌಡ, ಸಹಕಾರ–ಮದ್ದೂರಿನ ಗೆಜ್ಜಲಗೆರೆಯ ಜಿ.ಟಿ.ಪುಟ್ಟಸ್ವಾಮಿ, ಕೋಲಾಟ–ಮಳವಳ್ಳಿ ತಾಲೂಕಿನ ತಳಗವಾದಿ ಗ್ರಾಮದ ಹೊನ್ನಯ್ಯ, ಸುಗಮ ಸಂಗೀತ– ಕೆ.ಆರ್.ಪೇಟೆಯ ಹೇಮಾವತಿ ಬಡಾವಣೆಯ ಜಯಲಕ್ಷ್ಮಿದೇವಿ ಚೆಮಲ್, ಸಮಾಜ ಸೇವೆ– ಶ್ರೀರಂಗಪಟ್ಟಣದ ಆಶಾಲತಾ, ವಿಶೇಷ ಚೇತನ ಕ್ರೀಡಾಕ್ಷೇತ್ರದಿಂದ ಮದ್ದೂರು ತಾಲೂಕಿನ ಕಪರೆಕೊಪ್ಪಲು ಗ್ರಾಮದ ಶಿವಲಿಂಗಯ್ಯ, ರಾಷ್ಟ್ರೀಯ ಸೇವಾ ಯೋಜನೆ ಕ್ಷೇತ್ರದಿಂದ ಮಂಡ್ಯ ನಗರದ ಪ್ರೊ.ವೈ.ಕೆ.ಭಾಗ್ಯ, ಶಿಕ್ಷಣ–ಶ್ರೀರಂಗಪಟ್ಟಣದ ಬೆಳವಾಡಿಯ ಡಾ.ಮುರುಳಿ, ಸಂಗೀತ– ಮಂಡ್ಯದ ಕಾರಸವಾಡಿಯ ಡಾ.ಮಾದೇಶ್, ಸಂಕೀರ್ಣಕ್ಷೇತ್ರದಿಂದ ನಾಗಮಂಗಲದ ಆಣೆ ಚೆನ್ನಾಪುರಗ್ರಾಮದ ಸಿ.ಎನ್.ಮಂಜೇಶ್, ರಂಗಭೂಮಿ – ಮಂಡ್ಯದ ಕಾರಸವಾಡಿಯ ಸುರೇಶ್, ಮಾಧ್ಯಮ – ಪಾಂಡವಪುರದ ರಾಗಿಮುದ್ದನಹಳ್ಳಿ ಗ್ರಾಮದ ನಾಗೇಶ್, ಮಂಡ್ಯ ನಗರದ ಎಂ.ಎಸ್.ಶಿವಪ್ರಕಾಶ್, ದೃಶ್ಯ ಮಾಧ್ಯಮ –ಮದ್ದೂರಿನ ಎಚ್.ಎಸ್.ಗುರುರಾಜ್ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಗೋಪಾಲಕೃಷ್ಣ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ,ಅ.31– ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆನ್‌ಲೈನ್ ಮೂಲಕ 11 ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಎಚ್.ಓ) ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗಾಗಿ ದೂ.ಸಂ.08232–224027 ಅಥವಾ ವೆಬ್‌ಸೈಟ್http://karanadu.karnataka.gov.in/hfw ಸಂಪರ್ಕಿಸಬಹುದು.



ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ರವೀಂದ್ರ ಶ್ರೀಕಂಠಯ್ಯ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷ ನವೀನ್, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಗ್ರಾಮದ ಮುಖಂಡರಾದ ಪೈಲ್ವಾನ್ ಮುಕುಂದ, ರಮೇಶ್ ಬಾಬು, ಪಿ.ಎಚ್.ನಾಗರಾಜು, ಪಿ.ಎಂ. ಪ್ರಭಾಕರ್, ಸುಖೇಶ್ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಇಂದು ಮನೆಗಳ ಮೇಲೆ ಕನ್ನಡ ಬಾವುಟ ಹಾರಿಸಲು ತಮ್ಮಣ್ಣ ಕರೆ

ಭಾರತೀನಗರ.ಅ.31–ನ.1 ರಂದು ಮನೆಮನೆಗಳ ಮೇಲೆ ಕನ್ನಡ ಬಾವುಟ ಹಾರಿಸಬೇಕೆಂದು ಶಾಸಕ ಡಿ.ಸಿ.ತಮ್ಮಣ್ಣ ಭಾರತೀನಗರದಲ್ಲಿ ಜನತೆಗೆ ಕರೆಕೊಟ್ಟರು.

ಭಾರತೀನಗರದಲ್ಲಿ ಮಾತನಾಡಿದ ಅವರು, ಜೆಡಿಎಸ್ ಪಕ್ಷದ ವರಿಷ್ಠ ಎಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ನ.1 ರಂದು ಮನೆಮನೆಗಳ ಮೇಲೆ ಕನ್ನಡ ಬಾವುಟ ಹಾರಿಸಬೇಕೆಂದು ಕರೆ ನೀಡಿದ್ದಾರೆ. ನಮ್ಮ ನಾಡಿನ ಜನರು ಕನ್ನಡ ಬಾವುಟವನ್ನು ಹಾರಿಸುವ ಮೂಲಕ ಸ್ವಾಭಿಮಾನ ಮೆರೆಯಬೇಕು. ನಾವು ಹುಟ್ಟುತ್ತಲೇ ಮಾತನಾಡುವುದು ಮಾತೃಭಾಷೆ ಕನ್ನಡ. ಹಾಗಾಗಿ ಕನ್ನಡಿಗರಾಗಿ ನಾವು ರಾಜ್ಯದಲ್ಲಿರುವ ಪ್ರತೀ ಮನೆಗಳು ಮತ್ತು ಕಚೇರಿಗಳ ಮೇಲೆ ಕನ್ನಡ ಬಾವುಟ ಹಾರಿಸಿ ಅಭಿಮಾನವನ್ನು ಮೆರೆಯಬೇಕೆಂದರು. ಇದೇ ವೇಳೆ ಆಸರೆ ಸೇವಾಟ್ರಸ್ಟ್ ಅಧ್ಯಕ್ಷ ರಘು, ಗುರುದೇವರಹಳ್ಳಿ ನವೀನ್, ಅಣ್ಣೂರು ಯೋಗೇಂದ್ರ, ಗುಡಿಗೆರೆ ಬಸವರಾಜು, ಕಾಂತರಾಜು, ಸಿ.ಎ.ಕೆರೆ ಮೂರ್ತಿ, ಗುರುದೇವರಹಳ್ಳಿ ಸಿದ್ದರಾಜು ಸೇರಿದಂತೆ ಹಲವರಿದ್ದರು.



ಭಾರತೀನಗರ ಸಮೀಪದ ಮುಟ್ಟನಹಳ್ಳಿ ಗ್ರಾಮದಲ್ಲಿ ಪುನೀತ್ ರಾಜ್‌ಕುಮಾರ್ ಪ್ರಥಮ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಇದೇ ವೇಳೆ ಬೆಂಗಳೂರು ಬಿಜಿಎಸ್ ಆಸ್ಪತ್ರೆಯ ಮುಖ್ಯಸ್ಥ ಡಾ.ಮೋಹನ್‌ಕುಮಾರ್, ಚರ್ಮವೈದ್ಯ ಎಂ.ಕೆ.ನಾಗರಾಜು, ನಿರ್ಮಿತ ಅಧ್ಯಕ್ಷ ಮುಖ್ಯಸ್ಥ ಜನಸ್ನೇಹಿ ಯೋಗೇಶ್ ಅವರನ್ನು ಗೌರವಿಸಲಾಯಿತು.

ಸುಂಕಾತೊಣ್ಣೂರು ಬಳಿ ಮಾದೇಶ್ವರ ಜಾತ್ರೆ



ಪಾಂಡವಪುರ, ಅ.31– ತಾಲೂಕಿನ ಸುಂಕಾತೊಣ್ಣೂರು ಗ್ರಾಮದ ಹೊರವಲಯದಲ್ಲಿರುವ ಕೆಂಗಲ್ ಮಾದೇಶ್ವರಸ್ವಾಮಿ ದೇವಸ್ಥಾನದಲ್ಲಿ ರಥೋತ್ಸವಕ್ಕೆ ಬೇಬಿ ಮಠದ ಪೀಠಾಧ್ಯಕ್ಷ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮಿ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸುವ ಮುಖಾಂತರ ಚಾಲನೆ ನೀಡಿದರು.

ಶ್ರೀ ಮಠದಿಂದ ಸುಮಾರು ಹತ್ತು ವರ್ಷಗಳಿಂದ ನಿರಂತರವಾಗಿ ವಿಜೃಂಭಣೆಯಿಂದ ಮಾದೇಶ್ವರ ಸ್ವಾಮಿಗೆ ಎಣ್ಣೆಮಜ್ಜನ, ಹಾಲುಹರವಿ, ಹುಲಿವಾಹನ ಹಾಗೂ ನಿತ್ಯ ಸಂಕಲ್ಪ, ಅರ್ಚನೆ, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಪೂಜೆಗಳನ್ನು ನಡೆಸಿಕೊಂಡು ಬರುತ್ತಿದೆ. ಇದರ ಸದುಪಯೋಗವನ್ನು ಸುತ್ತಮುತ್ತಲ ಗ್ರಾಮಸ್ಥರು ಶ್ರೀ ಮಾದೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾಗುತ್ತಿದ್ದಾರೆ. ನಂತರ ತ್ರಿನೇತ್ರ ಸ್ವಾಮಿ ಮಾತನಾಡಿ, ರಾಜ್ಯ ಮತ್ತು ನಮ್ಮ ದೇಶದ ಜನಕ್ಕೆ ಸರಿಯಾದ ಸಮಯಕ್ಕೆ ಮಳೆ ಬೆಳೆಯಾಗಿ ಸಮೃದ್ಧಿಯಿಂದ ಯಾವುದೇ ರೋಗ ರುಜಿನಗಳಿಲ್ಲದೆ ಬದುಕುವಂತೆ ಮಾದೇಶ್ವರರಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇನೆ ಎಂದು ತಿಳಿಸಿದರು. ಪ್ರತಿ ವರ್ಷದಂತೆ ಈ ಬಾರಿಯೂ ಶಾಂತಿ ಸಮಾಧಾನದಿಂದ ಸಾವಿರಾರು ಸಂಖ್ಯೆಯಲ್ಲಿ ಸೇರಿರುವ ಭಕ್ತರು ರಥವನ್ನು ಎಳೆದಿದ್ದಾರೆ ಎಂದು ತಿಳಿಸಿದರು.

ಪಾಂಡವಪುರ ತಾಲೂಕಿನ ಸುಂಕಾತೊಣ್ಣೂರು ಗ್ರಾಮದ ಹೊರವಲಯದಲ್ಲಿರುವ ಕೆಂಗಲ್ ಮಹದೇಶ್ವರ ಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಈ ವೇಳೆ ಬೇಬಿ ಮಠದ ತ್ರಿನೇತ್ರ ಮಹಂತ ಶಿವಯೋಗಿಸ್ವಾಮೀಜಿ, ಚಂದ್ರವನದ ಕಾರ್ಯದರ್ಶಿ ಟಿ.ಪಿ.ಶಿವಕುಮಾರ್, ಬಿ.ಜೆ.ಪಿ.ಮುಖಂಡ ಎಂ.ರಾಜ್‌ಕುಮಾರ್, ಭಕ್ತಾರಾದ ಚುಂಚನಹಳ್ಳಿ ನಾಗೇಂದ್ರ ಮೂರ್ತಿ, ಗ್ರಾಮದ ಯಜಮಾನರಾದ ಲಿಂಗರಾಜು, ಮಾದೇವಣ್ಣ, ಸ್ವಾಮಿಗೌಡ, ಅರ್ಚಕರಾದ ಮಾದೇವಸ್ವಾಮಿ, ಇದ್ದರು.

ಖರ್ಗೆ ಅಭಿನಂದನಾ ಕಾರ್ಯಕ್ರಮಕ್ಕೆ ಹೆಚ್ಚಿನ ಕಾರ್ಯಕರ್ತರು ಭಾಗವಹಿಸಲು ಮನವಿ

ಮಂಡ್ಯ,ಅ.31– ನ.6ರಂದು ಬೆಂಗಳೂರಿನಲ್ಲಿ ನಡೆಯಲಿರುವ ಎಐಸಿಸಿ ನೂತನ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಅಭಿನಂದನಾ ಕಾರ್ಯಕ್ರಮಕ್ಕೆ ಮಂಡ್ಯ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಬೇಕೆಂದು ಕೆ.ಆರ್.ಪೇಟೆ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಬೂಕನಕೆರೆ ವಿಜಯ್‌ರಾಮೇಗೌಡ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕನ್ನಡಿಗ ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾಗಿರುವುದು ಖುಷಿಯ ವಿಚಾರ. ಈ ನಿಟ್ಟಿನಲ್ಲಿ ಕೆ.ಆರ್.ಪೇಟೆ ತಾಲೂಕು ಸೇರಿದಂತೆ ಮಂಡ್ಯ ಜಿಲ್ಲೆಯಿಂದ ಸಾವಿರಾರು ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಕೆ.ಆರ್.ಪೇಟೆ ಬಳಿ ಟಾಟಾ ಏಸ್ ಮಗುಚಿ ಮಹಿಳೆ ಸಾವು

ಕೆ.ಆರ್.ಪೇಟೆ,ಅ.31–ಟಾಟಾ ಏಸ್ ಮಗುಚಿ ಬಿದ್ದು ಓರ್ವ ಗರ್ಭಿಣಿ ಸೇರಿದಂತೆ 10ಕ್ಕೂ ಹೆಚ್ಚು ಮಂದಿಗೆ ಗಂಭೀರ ಗಾಯಗಳಾಗಿದ್ದು, ಓರ್ವ ಮಹಿಳೆ ಸಾವನ್ನಪ್ಪಿರುವ ಘಟನೆ ತಾಲೂಕಿನ ಬೂಕನಕೆರೆ ಹೋಬಳಿಯ ರಾಜೇನಹಳ್ಳಿ ಗ್ರಾಮದ ಬಳಿ ನಡೆದಿದೆ. ಕಬ್ಬು ಕಟಾವು ಕಾರ್ಮಿಕ ಮಹಿಳೆ ವಿಜಯಪುರ ಜಿಲ್ಲೆಯ ಕಡ್ಡಿರಾಮಪುರ ತಾಂಡಾದ ನಿವಾಸಿ ಶಶಿಕಲಾ(20)ಮೃತಪಟ್ಟಿದ್ದಾರೆ.

ಘಟನೆ ವಿವರ: ಕೋರಮಂಡಲ್ ಸಕ್ಕರೆ ಕಾರ್ಖಾನೆಗೆ ಕಬ್ಬು ಕಟಾವು ಮಾಡಲು ಬಂದಿದ್ದ ಶಶಿಕಲಾ ಮತ್ತು ತಂಡದವರು ಮತ್ತೀಕೆರೆ ಬಳಿ ಕಬ್ಬು ಕಟಾವು ಮಾಡಿ ಗಂಜಿಗೆರೆ ಗ್ರಾಮಕ್ಕೆ ತೆರಳುತ್ತಿದ್ದರು. ಈ ವೇಳೆ ರಾಜೇನಹಳ್ಳಿ ಗ್ರಾಮದ ಬಳಿ ಟಾಟಾ ಏಸ್ ವಾಹನ ಚಾಲಕನ ನಿಯಂತ್ರಣ ತಪ್ಪಿ ಮಗುಚಿ ಬಿದ್ದ ಪರಿಣಾಮ ಶಶಿಕಲಾ, ಚಂದ್ರನಾಯಕ್, ಗಾಯಿತ್ರಿ, ಲಕ್ಷ್ಮೀಬಾಯಿ, ಪರಶುರಾಮ್, ಮಂಗಳನಾಯಕ್, ಸೇರಿದಂತೆ 10ಕ್ಕೂ ಹೆಚ್ಚು ಮಂದಿಗೆ ಗಂಭೀರ ಗಾಯಗಳಾಗಿದ್ದು, ಕೆ.ಆರ್.ಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಭೀರ ಸ್ವರೂಪದ ಗಾಯಗಳಾಗಿದ್ದ ಶಶಿಕಲಾ ಮೈಸೂರಿಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ನಿರಂಜನ್, ಪಿಎಸ್‌ಐ ಪ್ರಮೋದ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ತೀವ್ರ ಗಾಯಗೊಂಡಿದ್ದ ಜನರನ್ನು ತುರ್ತು ವಾಹನದಲ್ಲಿ ಸಾಗಿಸಿದರು. ಈ ಬಗ್ಗೆ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೈಸೂರಿನ 131 ಪಾರಂಪರಿಕ ಕಟ್ಟಡಗಳ ತ್ವರಿತ ಸಮೀಕ್ಷೆ

ನಿಯಮಾನುಸಾರ ವರ್ಗ ವಿಂಗಡಣೆ ಮಾಡಿ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಕೆ



ಮೈಸೂರು, ಅ. 31(ಆರ್‌ಕೆ)–ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ 131 ಪಾರಂಪರಿಕ ಕಟ್ಟಡಗಳ ಸಮೀಕ್ಷೆ ನಡೆಸುತ್ತಿರುವ ತಜ್ಞರ ತಂಡ, ಅವುಗಳ ಸ್ಥಿತಿಗತಿಗಳಿಗನುಸಾರ ವರ್ಗ ವಿಂಗಡಣೆ ಮಾಡುತ್ತಿದೆ.

ಸಮೀಕ್ಷಾ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಒಂದು ತಿಂಗಳೊಳಗಾಗಿ ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿ ಸದಸ್ಯರಾದ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ಪರಂಪರೆ, ಸಂಗ್ರಹಾಲಯಗಳು ಮತ್ತು ಪ್ರಾಚ್ಯವಸ್ತು ಆಯುಕ್ತ ದೇವರಾಜು ತಿಳಿಸಿದ್ದಾರೆ. ಅಕ್ಟೋಬರ್ 12ರಿಂದ ಮೈಸೂರು ನಗರದಲ್ಲಿ ಪಟ್ಟಿ ಮಾಡಿರುವ 131 ರಾಜ್ಯ, ಕೇಂದ್ರ ಸರ್ಕಾರದ ಕಚೇರಿ ಕಟ್ಟಡಗಳು ಹಾಗೂ ಖಾಸಗಿ ಒಡೆತನದ ಪಾರಂಪರಿಕ ನಿರ್ಮಾಣಗಳ ಸಮೀಕ್ಷೆ ಆರಂಭವಾಗಿದ್ದು, ಈಗ 25 ಕಟ್ಟಡಗಳ ಸಮೀಕ್ಷಾ ಕಾರ್ಯ ಮುಗಿದಿದ್ದು, ಇನ್ನೊಂದು ತಿಂಗಳೊಳಗಾಗಿ ಜಿಲ್ಲಾಧಿಕಾರಿಗಳಿಗೆ ಎ, ಬಿ, ಸಿ ಎಂದು ವಿಂಗಡಿಸಿ ಸಮಗ್ರ ವರದಿ ನೀಡಲಾಗುವುದು ಎಂದು ಅವರು ತಿಳಿಸಿದರು.

ಪ್ರತೀ ಕಟ್ಟಡಕ್ಕೆ ಭೇಟಿ ನೀಡಿ ತಾರಸಿ, ಗೋಡೆಗಳು, ಛಾವಣಿ, ಅಡಿಪಾಯಗಳನ್ನು ಪರಿಶೀಲಿಸಿ ಕಟ್ಟಡದ ಸದೃಢತೆ ಎಷ್ಟಿದೆ ಎಂಬುದನ್ನು ತಿಳಿದುಕೊಂಡು ಅದು ಸಂಪೂರ್ಣ ಶಿಥಿಲವಾಗಿದೆಯೇ, ಭಾಗಶಃ ಹಾಳಾಗಿದೆಯೇ ಅಥವಾ ಉತ್ತಮ ಸ್ಥಿತಿಯಲ್ಲಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ವಸ್ತುಸ್ಥಿತಿಯನುಸಾರ ಗ್ರೇಡ್–1, ಗ್ರೇಡ್–2 ಹಾಗೂ ಗ್ರೇಡ್–3 (ಎ, ಬಿ, ಸಿ)ಯನ್ನಾಗಿ ವಿಂಗಡಿಸಿ ಪ್ರತಿಯೊಂದು ಗ್ರೇಡ್‌ನ ಕಟ್ಟಡದ ಸಂಪೂರ್ಣ ಮಾಹಿತಿಯೊಂದಿಗೆ ಸಮಗ್ರ ವರದಿ ತಯಾರಿಸಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇವೆ ಎಂದು ದೇವರಾಜು ತಿಳಿಸಿದರು.

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ದೇವರಾಜು, ಉಪ ನಿರ್ದೇಶಕಿ ಮಂಜುಳಾ, ಕ್ಯೂರೇಟರ್ ಸುನಿಲ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮಹೇಶ್, ಇಂಜಿನಿಯರ್ ರೇಖಾ, ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್ (ಐಎನ್‌ಟಿಎಸಿಹೆಚ್) ಹಾಗೂ ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿ ಸದಸ್ಯರಾದ ಪ್ರೊ. ರಂಗರಾಜು, ಪ್ರೊ. ಸೈಯದ್ ಶಕೀಬ್ ಉರ್ ರೆಹಮಾನ್ ಸೇರಿದಂತೆ ಹಲವರು ಸಮೀಕ್ಷಾ ತಂಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಮಾಡೆಲ್ ಬಿಲ್ಡಿಂಗ್ (ಅಮೆಂಡ್‌ಮೆಂಟ್) ಬೈಲಾಸ್–2021 ಪ್ರಕಾರ ಪಾರಂಪರಿಕ ಕಟ್ಟಡಗಳನ್ನು ಗ್ರೇಡ್–1, ಗ್ರೇಡ್–2 ಮತ್ತು ಗ್ರೇಡ್–2 ಎಂದು ವಿಂಗಡಿಸಲಾಗುವುದು.

ಮಾನದಂಡಗಳಿಗನುಸಾರ ಎಲ್ಲಾ ಅಂಶಗಳನ್ನೊಳಗೊಂಡಂತೆ ವರದಿ ತಯಾರಿಸಿ ಶಿಫಾರಸಿನೊಂದಿಗೆ ಕಳುಹಿಸಲಾಗುವುದು ಎಂದು ಹೆರಿಟೇಜ್ ಆಯುಕ್ತರು ತಿಳಿಸಿದರು.

ಮೈಸೂರಿನಲ್ಲಿರುವ ಎಲ್ಲಾ 131 ಪಾರಂಪರಿಕ ಕಟ್ಟಡಗಳ ಮಾಲೀಕರು, ಮುಖ್ಯಸ್ಥರುಗಳಿಗೆ ಪತ್ರ ಬರೆದಿದ್ದು, ತಾವು ವಾಸಿಸುತ್ತಿರುವ ಹಾಗೂ ಕೆಲಸ ಮಾಡುತ್ತಿರುವುದು ಪಾರಂಪರಿಕ ಕಟ್ಟಡ ಎಂಬುದನ್ನು ಮನವರಿಕೆ ಮಾಡಿಕೊಡಲಾಗಿದೆ. ಯಾವುದೇ ರಿಪೇರಿ, ಆಧುನೀಕರಣ ಅಥವಾ ಪುನರುಜ್ಜೀವನ ಕಾಮಗಾರಿ ಮಾಡುವ ಉದ್ದೇಶವಿದ್ದರೆ ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿಗೆ ಪ್ರಸ್ತಾವನೆ ಸಲ್ಲಿಸಿ ಸಲಹೆ–ಮಾರ್ಗದರ್ಶನ ಹಾಗೂ ಅನುಮತಿ ಪಡೆಯಬೇಕು ಎಂದು ತಿಳಿಸಲಾಗಿದೆ ಎಂದು ದೇವರಾಜು ಹೇಳಿದರು.

ಕಾಮಗಾರಿಗೆ ಸಮಿತಿಯೇ ವಿನ್ಯಾಸ, ಅಂದಾಜು ಪಟ್ಟಿ ಮತ್ತು ಡಿಪಿಆರ್ ಸಿದ್ಧಪಡಿಸಿ ಕೊಡುವುದಲ್ಲದೆ, ಅಗತ್ಯ ಬಿದ್ದರೆ ಕಾಮಗಾರಿಯನ್ನೂ ಪಾರಂಪರಿಕ ಇಲಾಖೆ ವತಿಯಿಂದಲೇ ನಿರ್ವಹಿಸಿ ಪಾರಂಪರಿಕ ಕಟ್ಟಡವನ್ನು ಸಂರಕ್ಷಿಸಲಾಗುವುದು ಎಂಬುದನ್ನು ತಿಳಿಸಲಾಗಿದೆ ಎಂದು ಹೆರಿಟೇಜ್ ಆಯುಕ್ತರು ನುಡಿದರು.



ಬೆಂಗಳೂರು ತಾಂತ್ರಿಕ ತಂಡದಿಂದ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಪರಿಶೀಲನೆ



ಕುಸಿದು ಬಿದ್ದಿರುವ ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರ ಪ್ರಯೋಗಾಲಯ ಭಾಗದ ಕಟ್ಟಡವನ್ನು ಕಾಲೇಜು ಶಿಕ್ಷಣ ಇಲಾಖೆ ತಾಂತ್ರಿಕ ತಂಡ ಸೋಮವಾರ ಪರಿಶೀಲಿಸಿತು.

ಮೈಸೂರು, ಅ. 31(ಆರ್‌ಕೆ)– ಮಳೆಯಿಂದಾಗಿ ಇತ್ತೀಚೆಗೆ ಕುಸಿದಿದ್ದ ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರ ಪ್ರಯೋಗಾಲಯ ಭಾಗದ ಕಟ್ಟಡವನ್ನು, ಬೆಂಗಳೂರಿನ ಕಾಲೇಜು ಶಿಕ್ಷಣ ಇಲಾಖೆ ತಾಂತ್ರಿಕ ತಂಡ ಇಂದು ಪರಿಶೀಲಿಸಿತು. ಇಂಜಿನಿಯರಿಂಗ್ ವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮಧುಸೂದನ್ ನೇತೃತ್ವದ ತಾಂತ್ರಿಕ ತಂಡವು, ಶತಮಾನಕ್ಕೂ ಹಳೆಯದಾದ ಈ ಪಾರಂಪರಿಕ ಕಟ್ಟಡದ ಛಾವಣಿ, ಗೋಡೆ ಕುಸಿದು ಬಿದ್ದಿರುವ ಭಾಗದಲ್ಲಿ ಸ್ಯಾಂಪಲ್‌ಗಳನ್ನು ಸಂಗ್ರಹಿಸಿತು. ಕಟ್ಟಡದ ಇತಿಹಾಸ, ಹಿನ್ನೆಲೆ, ಯಾವ ಯಾವ ಪದಾರ್ಥ ಬಳಸಿ ನಿರ್ಮಿಸಲಾಗಿದೆ, ವಿಸ್ತೀರ್ಣ, ಮಹಡಿಗಳು, ಮೆಟ್ಟಿಲುಗಳ ಸ್ಥಿತಿಗತಿ ಕುರಿತಂತೆ ಕಾಲೇಜು ಪ್ರಾಂಶುಪಾಲ ಡಿ. ರವಿ ಅವರಿಂದ ಸಂಪೂರ್ಣ ಮಾಹಿತಿ ಪಡೆದ ಅಧಿಕಾರಿಗಳು, ತಾರಸಿ ಮೇಲೆ ಮಳೆ ನೀರು ಹರಿದು ಹೋಗಲು ಮಾಡಿರುವ ವ್ಯವಸ್ಥೆ, ಗೋಡೆ ಒಳಗಡೆ ನೀರು ಇಳಿದಿರುವ ಬಗ್ಗೆಯೂ ಫೋಟೋ ತೆಗೆದುಕೊಂಡರು.

ಕುಸಿದು ಬಿದ್ದಿರುವ ಜಾಗದಿಂದ ತ್ಯಾಜ್ಯ ವಿಲೇವಾರಿ ಮಾಡುವ ಬಗ್ಗೆ ಪ್ರಾಂಶುಪಾಲರೊಂದಿಗೆ ಸಮಾಲೋಚನೆ ನಡೆಸಿದ ಇಂಜಿನಿಯರ್‌ಗಳು, ಯಂತ್ರ ಬಳಸಿ ಕಟ್ಟಡ ತ್ಯಾಜ್ಯ ತೆರವುಗೊಳಿಸಿದರೆ, ಕಟ್ಟಡಕ್ಕೆ ಅಪಾಯ ಸಂಭವಿಸುವ ಸಾಧ್ಯತೆ ಇರುವುದರಿಂದ ಕಾರ್ಮಿಕರನ್ನು ಬಿಟ್ಟು ಕೆಲಸ ಮಾಡಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಅದೇ ರೀತಿ ಕಾಲೇಜಿನ ಇತರ ಕಟ್ಟಡಗಳಿಗೂ ಭೇಟಿ ನೀಡಿ ವೀಕ್ಷಿಸಿದ ಅವರು, ಮಾಹಿತಿ ಪಡೆದು ಪಾರಂಪರಿಕ ಕಟ್ಟಡವನ್ನು ಸುಸ್ಥಿತಿಯಲ್ಲಿ ಸಂರಕ್ಷಿಸಲು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಸಲಹೆಗಳನ್ನು ನೀಡಿದರು. ಹೊಸ ಕಟ್ಟಡಕ್ಕೂ ಭೇಟಿ ನೀಡಿ ಪರಿಶೀಲನೆ ನಡೆಸಿದ ಇಂಜಿನಿಯರ್‌ಗಳು, ಬೆಂಗಳೂರಿಗೆ ತೆರಳಿ ಇಲಾಖೆ ಮುಖ್ಯಸ್ಥರ ಮೂಲಕ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಮಧುಸೂದನ್ ತಿಳಿಸಿದರು.

ವಿವಿಧ ಕ್ಷೇತ್ರದ 45 ಮಂದಿ ಸಾಧಕರಿಗೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ


ಶಶಿಶೇಖರ ದೀಕ್ಷಿತ್


ಬೂಕನಕೆರೆ ವಿಜೇಂದ್ರ


ಎಸ್.ಬಿ.ಎಂ.ಪ್ರಸನ್ನ


ಕೋದಂಡರಾಮ


ಮೋಹನ್ ಪಾಳೇಗಾರ್


ವಿನೋದಮ್ಮ


ರವಿ(ಪಾಂಡವಪುರ)


ವಿಕ್ರಂ ಅಯ್ಯಂಗಾರ್

ಮೈಸೂರು, ಅ.31(ಎಸ್‌ಪಿಎನ್)–67ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ 45 ಮಂದಿ ಸಾಧಕರನ್ನು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಅ.28ರಂದು ಜಿಲ್ಲಾ ಕನ್ನಡ ರಾಜ್ಯೋತ್ಸವ ಸನ್ಮಾನ ಉಪಸಮಿತಿಯ ಸಭೆಯಲ್ಲಿ ತೀರ್ಮಾನಿಸಿದಂತೆ ಮೈಸೂರು ಜಿಲ್ಲೆಯ ವಿವಿಧ ಕ್ಷೇತ್ರಗಳಾದ ಕನ್ನಡ ಪರ ಹೋರಾಟ ಮತ್ತು ಸೇವೆ, ಸಾಹಿತ್ಯ, ಸಂಘಟನೆ, ಸಾಂಸ್ಕೃತಿಕ ಸಂಘಟನೆ, ವಾದ್ಯ ಸಂಗೀತ, ರಂಗಭೂಮಿ, ಜಾನಪದ, ಕ್ರೀಡೆ, ಧಾರ್ಮಿಕ, ಶಿಕ್ಷಣ, ಪತ್ರಿಕೋದ್ಯಮ, ಆಹಾರ ವಿಜ್ಞಾನ ಕ್ಷೇತ್ರ, ಸಮರಕಲೆ(ವುಶು), ಪ್ರಾಣಿ ಸಂರಕ್ಷಣೆ ಸೇರಿದಂತೆ ಇತರೆ ಕ್ಷೇತ್ರದಿಂದ 45 ಮಂದಿ ಸಾಧಕರನ್ನು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಕನ್ನಡ ಹೋರಾಟಗಾರರಾದ ಕೆ.ಎ.ಪ್ರಭಾಮಣಿ, ಅ.ಮಹೇಶ್ವರ, ಸುನಿಲ್ ಕುಮಾರ್, ಬಿ.ಕೋದಂಡರಾಮ, ಎನ್.ಸುರೇಶ್, **ಕನ್ನಡ ಸೇವಾ ಕ್ಷೇತ್ರದ** ಜಾಕೀರ್ ಹುಸೇನ್, **ಸಹಕಾರ**ದಿಂದ ಆರ್.ಅನಂತರಾಮು, **ಸಮಾಜ ಸೇವೆ**ಯಿಂದ ಎಂ.ಸಂಜೀವ್ ಶೆಟ್ಟಿ, ಎಂ.ಎಲ್.ಕಲ್ಯಾಣ ಕುಮಾರ್, ಮಹದೇವ, ಬೂಕನಕೆರೆ ವಿಜೇಂದ್ರ, ಎಂ.ರಾಮಕೃಷ್ಣ, ಸಂಘಟನಾ ಕ್ಷೇತ್ರದಿಂದ ಕೆ.ವಿಕ್ರಂ ಅಯ್ಯಂಗಾರ್, ಡಾ.ಆರ್.ನಿಂಗರಾಜು ಆಯ್ಕೆಯಾಗಿದ್ದಾರೆ.

ಶಿಕ್ಷಣ ಕ್ಷೇತ್ರದಿಂದ ಬಿ.ಶಿವಲಿಂಗಪ್ಪ, ಸಿ.ಜಿ.ಶಿವಕುಮಾರ್, ಡಾ.ಸಿ.ಡಿ.ಪರಶುರಾಮ, ಡಾ.ಎಸ್.ಬಿ.ಎಂ.ಪ್ರಸನ್ನ, ಡಾ.ಕೆ.ಶಿವಚಿತ್ತಪ್ಪ, ಪತ್ರಿಕಾ ಛಾಯಾಗ್ರಹಣ ಎಸ್.ಆರ್.ಮಧುಸೂದನ್, ದೃಶ್ಯ ಮಾಧ್ಯಮದಿಂದ ರವಿ(ಪಾಂಡವಪುರ), ಕಲೆ, ಪೌರಾಣಿಕ ನಾಟಕ ಕ್ಷೇತ್ರದಿಂದ ಡೇವಿಡ್, ರಂಗಭೂಮಿಯಿಂದ ಬಿ.ಎಸ್.ರಾಮಸ್ವಾಮಿ, ಡಿ.ಕೆಂಚೇಗೌಡ, ಸಾಹಿತ್ಯ ಕ್ಷೇತ್ರದಿಂದ ಎಂ.ಬಿ.ಸಂತೋಷ್, ಪ್ರೊ.ಕೆ.ಆರ್.ಪ್ರೇಮಲೀಲಾ, ಡಾ.ಬೇಸೂರು ಮೋಹನ್ ಪಾಳೇಗಾರ್, ಡಾ.ವಿನೋದಮ್ಮ, ಛೇರ್ಯ ರಾಂಕುಮಾರ್, ಎನ್.ಲೋಕೇಶ್, ಜಾನಪದದಿಂದ ಸಿದ್ದರಾಮು, ಪಾರ್ವತಮ್ಮ ಆಯ್ಕೆಯಾಗಿದ್ದಾರೆ.

ಸಾಂಸ್ಕೃತಿಕ ಸಂಘಟನೆಯಿಂದ ಜಿ.ಆರ್.ಶ್ರೀವತ್ಸ, **ವಾದ್ಯಸಂಗೀತ**(ಕ್ಲಾರಿಯೋನೆಟ್) ಡಿ.ರಾಮು, ಸಂಗೀತದಿಂದ ಕೊಳತ್ತೂರು ಪಿ.ಮಹದೇವಸ್ವಾಮಿ, ಬಾಲಕೃಷ್ಣ, **ಸಂಗೀತದಿಂದ** ಎಂ.ಎ.ಹರೀಶ್ ಕುಮಾರ್, **ಧಾರ್ಮಿಕ ಕ್ಷೇತ್ರ**ದಿಂದ ಡಾ.ಎನ್.ಶಶಿಶೇಖರ ದೀಕ್ಷಿತ್, **ವೈದ್ಯಕೀಯ ಕ್ಷೇತ್ರ**ದ ಡಾ.ಹೆಚ್.ಕೆ.ಪ್ರಸಾದ್, **ಕ್ರೀಡಾ ಕ್ಷೇತ್ರದ** ವಿಶ್ವೇಶ್ವರ ಆರಾಧ್ಯ, ಅಮೃತ್ ಪುರೋಹಿತ್, **ಆಹಾರ ವಿಜ್ಞಾನ ಕ್ಷೇತ್ರದ** ನಂದಿನಿಮೂರ್ತಿ, **ಪ್ರಾಣಿ ಸಂರಕ್ಷಣಾ ಕ್ಷೇತ್ರದಿಂದ** ನೇಹಾನೈನಾ, **ಸಮರಕಲೆ**(ವುಶು)ಯ ಪ್ರಣಿತಿ ಗಿರಿಧರ್ ಸೇರಿದಂತೆ ಇತರೆ 45 ಸಾಧಕರ ಪಟ್ಟಿಯನ್ನು ಅಂತಿಮಗೊಳಿಸಿ ಡಾ.ಕೆ.ವಿ.ರಾಜೇಂದ್ರ ಆದೇಶಿಸಿದ್ದಾರೆ.

ಇಂದು ಕರುನಾಡ ಕೃಷಿ ತಿಲಕ ಪ್ರಶಸ್ತಿ ಪ್ರದಾನ

ಮೈಸೂರು,ಅ.31(ಎಂಟಿವೈ)– ಕನ್ನಡ ರಾಜ್ಯೋತ್ಸವದ ಅಂಗವಾಗಿ ನಂಜನಗೂಡು ತಾಲೂಕಿನ ದೇಬೂರು ಗ್ರಾಮದಲ್ಲಿ ನ.1ರಂದು ಸಂಜೆ 4.30ಕ್ಕೆ ಕರುನಾಡ ಕೃಷಿ ತಿಲಕ ಪ್ರಶಸ್ತಿ ಪ್ರದಾನ ಮತ್ತು ರೈತ ಕಲ್ಯಾಣ ನಾಮಫಲಕ ಅನಾವರಣ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಗೌರವಾಧ್ಯಕ್ಷ ಹೇಮಂತ್ ಕುಮಾರ್‌ಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘ ಹಾಗೂ ದೇಬೂರು ಗ್ರಾಮದ ಜೈ ಭುವನೇಶ್ವರಿ ಗೆಳೆಯರ ಬಳಗದ ವತಿಯಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸಂಜೆ 4.30ಕ್ಕೆ ನಂಜನಗೂಡಿನ ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ತಹಸೀಲ್ದಾರ್ ಶಿವಮೂರ್ತಿ, ಸಹಾಯಕ ಕೃಷಿ ನಿರ್ದೇಶಕ ಬಿ.ಎಸ್.ದೀಪಕ್, ದೇಬೂರು ಗ್ರಾಪಂ ಪಿಡಿಓ ಸೋಮಶೇಖರ್ ಇತರರು ಪಾಲ್ಗೊಳ್ಳುವರು ಎಂದು ಹೇಳಿದರು.

ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಅಧ್ಯಕ್ಷ ಚಂದನ್ ಗೌಡ ಅವರಿಗೆ ಕರುನಾಡ ಕೃಷಿ ತಿಲಕ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಇದೇ ವೇಳೆ ರೈತ ಕಲ್ಯಾಣ ಸಂಘದ ಉದ್ಘಾಟನಾ ಮತ್ತು ನಾಮಫಲಕ ಅನಾವರಣ ಕಾರ್ಯಕ್ರಮ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಸ್ವಾಮೀಗೌಡ, ರಾಜ್ಯ ಯುವ ಘಟಕದ ಅಧ್ಯಕ್ಷ ಅಭಿಷೇಕ್, ಸಂಘಟನಾ ಕಾರ್ಯದರ್ಶಿ ಮೂರ್ತಿ, ಹರೀಶ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಗೋವರ್ಧನ್, ಶಿವಕುಮಾರ್ ಇದ್ದರು.

ಆರ್.ಲಿಂಗಪ್ಪ, ಅಬ್ದುಲ್ ಅಜೀಜ್ ಜೆಡಿಎಸ್ ಪಂಚರತ್ನ ಯಾತ್ರೆ ಮಂಡ್ಯ ಜಿಲ್ಲಾ ಉಸ್ತುವಾರಿಗಳು


ಆರ್. ಲಿಂಗಪ್ಪ


ಅಬ್ದುಲ್ ಅಜೀಜ್

ಮೈಸೂರು, ಅ.31– ಜಾತ್ಯತೀತ ಜನತಾ ದಳದ ಪಂಚರತ್ನ ರಥಯಾತ್ರೆ, ಜನಸಂಪರ್ಕ ಪ್ರವಾಸ ಕಾರ್ಯಕ್ರಮದ ಮಂಡ್ಯ ಜಿಲ್ಲಾ ಉಸ್ತುವಾರಿಗಳನ್ನಾಗಿ ಮೈಸೂರು ಮಾಜಿ ಮೇಯರ್ ಹಾಗೂ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಆರ್. ಲಿಂಗಪ್ಪ ಹಾಗೂ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ ಆದ ಪಕ್ಷದ ರಾಜ್ಯ ಕಾರ್ಯದರ್ಶಿ ಅಬ್ದುಲ್ ಅಜೀಜ್ ಅವರನ್ನು ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ನೇಮಕ ಮಾಡಿದ್ದಾರೆ.

ಕುಕ್ಕರಹಳ್ಳಿ ಕೆರೆ ಏರಿ ಪರಿಶೀಲಿಸಿದ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು

ಕೆರೆಯ ಹೆಚ್ಚುವರಿ ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥೆ ಮಾಡುವಂತೆ ಸಲಹೆ

ಮೈಸೂರು,ಅ.31(ಎಂಟಿವೈ)– ಮೈಸೂರಿನ ಕುಕ್ಕರಹಳ್ಳಿ ಕೆರೆಯ ಏರಿಯಿಂದ ನೀರು ಸೋರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಾವೇರಿ ನೀರಾವರಿ ನಿಗಮ ಲಿಮಿಟೆಡ್ (ಸಿಎನ್‌ಎನ್‌ಎಲ್) ತಾಂತ್ರಿಕ ಸಲಹಾ ಸಮಿತಿಯ ಸದಸ್ಯರು ಹಾಗೂ ಇಂಜಿನಿಯರ್‌ಗಳ ತಂಡ ಇಂದು ಕೆರೆ ಏರಿ ಪರಿಶೀಲಿಸಿ ಕೆಲವು ಸಲಹೆ–ಸೂಚನೆ ನೀಡಿತು.

ಸತತ ಮಳೆಯಿಂದಾಗಿ ಹಲವು ವರ್ಷಗಳ ಬಳಿಕ ಕುಕ್ಕರಹಳ್ಳಿ ಕೆರೆ ಮಳೆ ನೀರಿನಿಂದ ತುಂಬಿದ್ದು, ಸಾಕಷ್ಟು ವರ್ಷಗಳ ಬಳಿಕ ಕೆರೆಯಲ್ಲಿ ಅಪಾಯ ಮಟ್ಟದ ನೀರು ಸಂಗ್ರಹವಾಗಿದೆ. ಈ ನಡುವೆ ಕೆರೆ ಏರಿಯಿಂದ 3–4 ಕಡೆ ನೀರು ಸೋರಿಕೆಯಾಗುತ್ತಿದೆ ಇದರಿಂದ ಕೆರೆ ಏರಿಗೆ ಅಪಾಯದ ಸ್ಥಿತಿ ಬಂದಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದರು.

ಸ್ಥಳೀಯರ ಕೋರಿಕೆ ಮೇರೆಗೆ ಮೈಸೂರು ವಿಶ್ವವಿದ್ಯಾನಿಲಯವು ಕೆಆರ್‌ಎಸ್ ತಜ್ಞರ ತಂಡಕ್ಕೆ ಆಹ್ವಾನ ನೀಡಿ, ಕೆರೆ ಏರಿಯ ಸುಭದ್ರತೆ ಬಗ್ಗೆ ಅವಲೋಕನ ನಡೆಸಿತ್ತು. ಸುದೀರ್ಘ ಪರಿಶೀಲನೆ ಬಳಿಕ ಕೆರೆ ಏರಿಗೆ ಯಾವುದೇ ಆತಂಕವಿಲ್ಲ ಎಂದು ಭರವಸೆ ನೀಡಿದ್ದರಲ್ಲದೆ, ಕೆರೆ ಏರಿಯ ಸಾಂದ್ರತೆ ಬಗ್ಗೆ ಪರಿಶೀಲಿಸಲು ಏರಿ ಮಣ್ಣಿನ ಮಾದರಿಯನ್ನು ಸಂಗ್ರಹಿಸಲಾಗಿತ್ತು.

ಇಂದು ಕಾವೇರಿ ನೀರಾವರಿ ನಿಗಮ ಲಿಮಿಟೆಡ್‌ನ ಸಲಹಾ ಸಮಿತಿ ಸದಸ್ಯ ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ ಸಂಪತ್‌ಕುಮಾರ್, ಡಿಸೈನ್ ವಿಂಗ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಎಇಇ ಎಂ.ಎನ್.ಚಂದ್ರಶೇಖರ್, ಎಲ್.ಗೋವರ್ಧನ್, ಎಇ ಸೋಮಶೇಖರ್ ಹಾಗೂ ಇನ್ನಿತರರು ಇದ್ದ ತಂಡ ಕುಕ್ಕರಹಳ್ಳಿ ಕೆರೆಗೆ ಭೇಟಿ ನೀಡಿ ಪರಿಶೀಲಿಸಿತು.



ಇದೇ ವೇಳೆ ಕುಕ್ಕರಹಳ್ಳಿ ಕೆರೆ ಸಂರಕ್ಷಣಾ ಸಮಿತಿಯ ಪ್ರೊ.ಕೆ.ಎಂ.ಜಯರಾಮಯ್ಯ ಮಾತನಾಡಿ, 150ಕ್ಕೂ ಹೆಚ್ಚು ವರ್ಷದ ಹಿಂದೆ ಕುಕ್ಕರಹಳ್ಳಿ ಕೆರೆಗೆ ಈ ಹಿಂದೆ ಅಳವಡಿಸಿರುವ ತೂಬು ಹಳೆದಾಗಿದ್ದು, ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಕೆರೆಯಿಂದ ಹೆಚ್ಚಿನ ಪ್ರಮಾಣದ ನೀರನ್ನು ಹೊರಕ್ಕೆ ಕಳುಹಿಸಲು ಸಾಧ್ಯವಾಗುತ್ತಿಲ್ಲ. ಕೆಲವರು ಕೆರೆ ಏರಿಗೆ ಧಕ್ಕೆಯಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಅದನ್ನು ನಿವಾರಿಸಲು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಸಲಹೆ ನೀಡಬೇಕು. ಅಲ್ಲದೆ, ಕೆರೆಯಿಂದ ಹೆಚ್ಚುವರಿ ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥೆ ಮಾಡಬೇಕು. ದೋಬಿಘಾಟ್‌ಗೆ ಹಾನಿಯಾಗದಂತೆ ಕಟ್ಟೆಚ್ಚರ ವಹಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಸಲಹಾ ಸಮಿತಿಯ ಸದಸ್ಯರು ಮಾತನಾಡಿ, ಕೆರೆ ಏರಿಯಿಂದ ನೀರು ಸೋರಿಕೆಯಾಗುತ್ತಿರುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ 'ರಾಕ್ಟೋ ಪಿಚ್ಚಿಂಗ್' ಮಾಡುವುದು ಸೂಕ್ತ. ಈ ವಿಧಾನದಲ್ಲಿ ಕೆರೆ ಏರಿಗೆ ಕಲ್ಲುಗಳನ್ನು ಜೋಡಣೆ ಮಾಡುವುದರಿಂದ ಏರಿ ಇನ್ನಷ್ಟು ಭದ್ರಗೊಳ್ಳಲಿದೆ. ಮಣ್ಣಿನ ಸವಕಳಿಯನ್ನೂ ನಿಯಂತ್ರಿಸಬಹುದು. ಇದರಿಂದ ನೀರು ಸೋರಿಕೆಯಾದರೂ ಏರಿಯ ಸುರಕ್ಷತೆ ಸಾಧ್ಯ ಎಂದು ಅಭಿಪ್ರಾಯಪಟ್ಟರಲ್ಲದೆ, ಕುಕ್ಕರಹಳ್ಳಿಗೆ ಈ ಹಿಂದೆ ಅಳವಡಿಸಿರುವ ತೂಬನ್ನು ಸಂಪೂರ್ಣವಾಗಿ ಮುಚ್ಚಿ ಹೊಸದಾಗಿ 'ಹೆಡ್ ರೆಗ್ಯುಲೇಟರ್' ವ್ಯವಸ್ಥೆ ಅಳವಡಿಸುವುದು ಸೂಕ್ತ. ಇದರಲ್ಲಿ ಕೆರೆಗೆ ಹೆಚ್ಚುವರಿಯಾಗಿ ಹರಿದು ಬರುವ ನೀರಿನ ಪ್ರಮಾಣಕ್ಕೆ ಅನುಗುಣವಾಗಿ ಕೆರೆಯಿಂದ ನೀರನ್ನು ಹೊರಗೆ ಹರಿಸಬಹುದು ಎಂದು ಅಭಿಪ್ರಾಯಪಟ್ಟರು. ಇಂದು ನಡೆಸಿದ ಪರಿಶೀಲನೆ ವೇಳೆ ಕಂಡು ಬಂದ ಅಂಶಗಳು ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಶೀಘ್ರವೇ ವರದಿ ಸಲ್ಲಿಸಲಾಗುತ್ತದೆ. ಆ ವರದಿಯಲ್ಲಿ ಹೆಡ್ ರೆಗ್ಯುಲೇಟರ್, ರಾಕ್ಟೋ ಪಿಚ್ಚಿಂಗ್ ಅಳವಡಿಕೆ ಸೇರಿದಂತೆ ಇನ್ನಿತರ ಅಂಶಗಳ ಬಗ್ಗೆಯೂ ಉಲ್ಲೇಖವಿರುತ್ತದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಮೈಸೂರು ವಿವಿಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರತಾಪ್, ಎಇಇ ಶಿವಲಿಂಗಸ್ವಾಮಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪಾಂಡಂಡ ಎಂ. ಕುಟ್ಟಪ್ಪ ಸ್ಮರಣಾರ್ಥ ಕೊಡವ ಕೌಟುಂಬಿಕ ರಿಂಕ್ ಹಾಕಿ ಟೂರ್ನಿ

ಸೋಮವಾರ 125 ದಾಖಲೆ ಗೋಲುಗಳ ಸುರಿಮಳೆ



ಮಂಗಳವಾರದ ಪಂದ್ಯಗಳು

ಬೆಳಗ್ಗೆ 8.30 ; ಕಳ್ಳಂಗಡ–ಬಾರಿಯಂಡ
9.30 ; ಕುಪ್ಪಂಡ (ಕೈಕೇರಿ) – ಬೊಟ್ಟೋಳಂಡ
10.00 ; ಪಾಲಚಂಡ–ನೆರವಂಡ
10.30 ; ಚೇಂದಂಡ–ಪಾಲಂದೀರ
11.00 ; ಕಾಳೇಂಗಡ–ಕುಮ್ಮಂಡ
11.30 ; ಅಪ್ಪಚೆಟ್ಟೋಳಂಡ–ಚೆಕ್ಕೇರ
ಮಧ್ಯಾಹ್ನ 12.00 ; ಮುಲ್ಲೇಂಗಡ–ಮುಕ್ಕಾಟೀರ (ಕಡಗದಾಳ್)
12.30 ; ಪಾಲಚಂಡ/ನೆರವಂಡ– ಚೇಂದಂಡ/ಪಾಲಂದೀರ
1.00 ; ಕುಪ್ಪಂಡ/ಬೊಟ್ಟೋಳಂಡ– ಕಳ್ಳಂಗಡ/ಬಾರಿಯಂಡ
1.30 ; ಮುರುವಂಡ–ಕೊಂಗೇಟಿರ
2.00 ; ಐಚೆಟ್ಟೀರ–ತೀತಿಮಾಡ
2.30 ; ಪಾಲೆಯಡ–ಚೇನಂಡ

ಗೋಣಿಕೊಪ್ಪ, ಅ.31– ಕೊಡವ ಹಾಕಿ ಅಕಾಡೆಮಿ ವತಿಯಿಂದ ಕರ್ನಾಟಕ ಪಬ್ಲಿಕ್ ಶಾಲಾ ಟರ್ಫ್ ಮೈದಾನದಲ್ಲಿ ನಡೆಯುತ್ತಿರುವ ಪಾಂಡಂಡ ಎಂ. ಕುಟ್ಟಪ್ಪ ಜ್ಞಾಪಕಾರ್ಥ ಕೊಡವ ಕೌಟುಂಬಿಕ ರಿಂಕ್ ಹಾಕಿ ಟೂರ್ನಿಯಲ್ಲಿ ಸೋಮವಾರ 125 ಗೋಲು ದಾಖಲೆ ವಿಶೇಷತೆಯಾಗಿತ್ತು. 11 ಪಂದ್ಯಗಳಲ್ಲಿ ಅತೀ ಹೆಚ್ಚು ಗೋಲುಗಳ ಸುರಿಮಳೆ ಹಾಕಿ ಪ್ರಿಯರನ್ನು ಖುಷಿಪಡಿಸಿತು.

ಆಟಗಾರರಾದ ಪೆಮ್ಮಂಡ ಎ. ಸೋಮಣ್ಣ ಎರಡು ಪಂದ್ಯಗಳಲ್ಲಿ ತಲಾ 5 ಗೋಲುಗಳ ಅಮೋಘ ಆಟ ವಾಡಿದರು. ಬೊಟ್ಟೋಳಂಡ ಸೂರಜ್, ಚೆಪ್ಪುಡೀರ ಸೋಮಯ್ಯ, ಬಿದ್ದಾಟಂಡ ಮೇದಪ್ಪ ಪಾಲಂದೀರ ಅಪ್ಪಚ್ಚು ತಲಾ 5 ಗೋಲುಗಳ ಸಾಧನೆಗೈದರು. ಚೆಪ್ಪುಡೀರ, ನೆರವಂಡ, ಪಾಲಂದೀರ, ನಾಗಂಡ, ಹಾಗೂ ಪೆಮ್ಮಂಡ ತಂಡಗಳ ಎರಡಂಕಿ ಗೋಲು ದಾಖಲೆಯಿಂದಾಗಿ ಶತಕದ ಗೋಲು ಇತಿಹಾಸ ಸೃಷ್ಟಿಸಲು ಸಾಧ್ಯವಾಯಿತು. ಕ್ರೀಡಾಭಿಮಾನಿಗಳಲ್ಲಿ ಸಂಚಲನ ಮೂಡಿಸಿತು.

ಫಲಿತಾಂಶ; ಬಾರಿಯಂಡವು ಕುಟ್ಟಂಡವನ್ನು 5–4 ಗೋಲುಗಳಿಂದ ಜಯಿಸಿತು. ಬಾರಿಯಂಡ ಬೆಳ್ಯಪ್ಪ 4, ವಿನು 1, ಕುಟ್ಟಂಡ ದಿಲನ್ 2, ಬಿದ್ದಪ್ಪ, ಕವನ್ ತಲಾ ಒಂದೊಂದು ಗೋಲು ಬಾರಿಸಿದರು.

ಬೊಟ್ಟೋಳಂಡವು ಮುಂಡ್ಯೋಳಂಡವನ್ನು 5–4 ಗೋಲುಗಳಿಂದದ ಮಣಿಸಿತು. ಬೊಟ್ಟೋಳಂಡ ಸೂರಜ್ 5 ಗೋಲು ಸಿಡಿಸಿ ಗೆಲುವಿನ ಸುರದಾರರಾದರು. ಮುಂಡ್ಯೋಳಂಡ ಅಯ್ಯಪ್ಪ 3, ಮಾಚಯ್ಯ 1 ಗೋಲು ಹೊಡೆದು ಪ್ರತಿಸ್ಪರ್ಧೆ ನೀಡಿದರು.

ಅಮ್ಮಣಿಚಂಡಕ್ಕೆ ಮಾಚಿಮಂಡ ವಿರುದ್ಧ 3–2 ಗೋಲುಗಳ ಜಯ ದೊರೆಯಿತು. ಅಮ್ಮಣಿಚಂಡ ಸೋಮಯ್ಯ 2, ಬೋಪಣ್ಣ, ಮಾಚಿಮಂಡ ಚಂಗಪ್ಪ ಆಶಿಕ್ ತಲಾ ಒಂದೊಂದು ಗೋಲು ಬಾರಿಸಿ ತಂಡಕ್ಕೆ ನೆರವಾದರು.

ಚೆಪ್ಪುಡೀರವು ಮೂಕೊಂಡ ವಿರುದ್ಧ 10–6 ಗೋಲುಗಳ ಜಯ ಸಾಧನೆ ಮಾಡಿತು. ಚೆಪ್ಪುಡೀರ ಸೋಮಯ್ಯ 5 ಗೋಲು ದಾಖಲಿಸಿದರು. ಚೆಪ್ಪುಡಿರ ಚಿಣ್ಣಪ್ಪ 3, ಅಯ್ಯಪ್ಪ, ಕಾರ್ಯಪ್ಪ, ಮೂಕೊಂಡ ಅಕ್ಷಿತ್ 3, ಮಿತೇಶ್ 2, ನಿಕಿಲ್ 1 ಗೋಲು ಹೊಡೆದರು.

ಪೆಮ್ಮಂಡ ಕೋಡಿಮಣಿಯಂಡವನ್ನು 8–1 ಗೋಲುಗಳಿಂದ ಸೋಲಿಸಿತು. ಪೆಮ್ಮಂಡ ಎ.ಸೋಮಣ್ಣ 5 ಗೋಲು ಸಿಡಿಸಿ ಸಂಭ್ರಮಿಸಿದರು. ಸುಹೇಸ್ 3, ಕೋಡಿಮಣಿಯಂಡ ಪೂಣಚ್ಚ 1 ಗೋಲು ಹೊಡೆದರು.

ಬಿದ್ದಾಟಂಡವು ಚೌರೀರವನ್ನು 5–4 ಗೋಲುಗಳಿಂದ ಸೋಲಿಸಿತು. ಬಿದ್ದಾಟಂಡ ಮೇದಪ್ಪ 5 ಗೋಲು ಹೊಡೆದು ಸಂಚಲನ ಮೂಡಿಸಿದರು. ಚೌರೀರ ಶರತ್ 2, ಪ್ರತಾಪ್, ಡಾನ್ ತಲಾ ಒಂದೊಂದು ಗೋಲು ಬಾರಿಸಿದರು.

ಪಾಲಚಂಡಕ್ಕೆ ಮುಕ್ಕಾಟೀರ (ಬೇತ್ರಿ) ವಿರುದ್ದ 6–5 ಗೋಲುಗಳ ಗೆಲುವು ದೊರೆಯಿತು. ಪಾಲಚಂಡ ಜೋಯಪ್ಪ 4, ಸಜನ್, ಪವನ್ ತಲಾ 1, ಮುಕ್ಕಾಟೀರ ಬೋಪಣ್ಣ 3, ಉತ್ತಪ್ಪ, ಮಂಥನ್ ತಲಾ ಒಂದು ಗೋಲು ಹೊಡೆದರು.

ನೆರವಂಡವು ಚಿಯಕ್‌ಪೂವಂಡವನ್ನು 11–2 ಗೋಲುಗಳಿಂದ ಸೋಲಿಸಿತು. ನೆರವಂಡ ನಾಚಪ್ಪ 4, ದರ್ಶನ್, ದೇವಯ್ಯ ತಲಾ ಎರಡು ಗೋಲು ಹೊಡೆದರು. ಕುವನ್, ಪ್ರವೀಣ್, ಬೆಳ್ಯಪ್ಪ ಚಿಯಕ್‌ಪೂವಂಡ ವಿವೇಕ್, ರೋಹನ್ ತಲಾ 1 ಗೋಲು ಹೊಡೆದರು.

ಪಾಲಂದೀರವು ನಾಗಂಡ ವಿರುದ್ಧ 13–12 ಗೋಲುಗಳ ರೋಚಕ ಗೆಲುವು ಪಡೆದುಕೊಂಡಿತು. ಉಭಯ ತಂಡಗಳು ಪಂದ್ಯದುದ್ದಕ್ಕೂ ಗೋಲುಗಳ ಸುರಿಮಳೆಗೆರೆದವು. ಕ್ರೀಡಾಭಿಮಾನಿಗಳಿಗೆ ರೋಚಕ ಅನುಭವಕ್ಕೆ ಸಾಕ್ಷಿಯಾಯಿತು. ಪಾಲಂದೀರ ಅಪ್ಪಚ್ಚು 5, ಉತ್ತಪ್ಪ 4, ಮುತ್ತಣ್ಣ 3, ನಾಗಂಡ ರಾಜಾ, ನಾಚಪ್ಪ, ಲವ ತಲಾ 4 ಗೋಲು ಸಿಡಿಸಿ ಉತ್ತಮ ಪೈಪೋಟಿ ನೀಡಿದರು.

ಚೆಪ್ಪುಡೀರವು ಅಮ್ಮಣಿಚಂಡವನ್ನು 12–1 ಗೋಲುಗಳ ಅಂತರದಲ್ಲಿ ಮಣಿಸಿತು. ಚೆಪ್ಪುಡೀರ ಸೋಮಣ್ಣ 4, ಚಿಣ್ಣಪ್ಪ ಕಾರ್ಯಪ್ಪ ತಲಾ 3, ದಿವಾನ್ 2, ಅಮ್ಮಣಿಚಂಡ ಭವನ್ ಏಕೈಕ ಗೋಲು ಹೊಡೆದರು.

ಪೆಮ್ಮಂಡಕ್ಕೆ ಬಿದ್ದಾಟಂಡ ವಿರುದ್ಧ 10–5 ಗೋಲುಗಳ ಜಯ ಲಭಿಸಿತು. ಪೆಮ್ಮಂಡ ಎ. ಸೋಮಣ್ಣ 5, ಪಿ. ಯು. ಸೋಮಣ್ಣ 4, ಚರಣ್ 1, ಬಿದ್ದಾಟಂಡ ಚೆಲ್ಸಿ 4, ಸಂಪನ್ 1 ಗೋಲು ಹೊಡೆದರು.

ಇಟ್ಟೀರಕ್ಕೆ ಬೋಳಿಯಾಡೀರ ವಿರುದ್ಧ 6–2 ಗೋಲುಗಳ ಜಯ ಲಭಿಸಿತು. ಇಟ್ಟೀರ ಅಚ್ಚಯ್ಯ 3, ಜಗನ್ 2, ಅಚ್ಚಪ್ಪ, ಬೋಳಿಯಾಡೀರ ಚೇತನ್ 2 ಗೋಲು ಹೊಡೆದರು.

ವಿರಾಜಪೇಟೆ ಪುರಸಭೆಯ ಸ್ಥಾಯಿ ಸಮಿತಿಗೆ 8 ಸದಸ್ಯರ ಅವಿರೋಧ ಆಯ್ಕೆ



ವಿರಾಜಪೇಟೆ, ಅ.31– ವಿರಾಜಪೇಟೆ ಪುರಸಭೆಯ ಸ್ಥಾಯಿ ಸಮಿತಿಗೆ ಆಡಳಿತ ಪಕ್ಷದ ಐದು ಹಾಗೂ ಪ್ರತಿಪಕ್ಷದ ಮೂರು ಸ್ಥಾನ ಸೇರಿ ಒಟ್ಟು 8 ಸದಸ್ಯರು ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಇಂದು ಪುರಸಭೆ ಅಧ್ಯಕ್ಷೆ ಸುಸ್ಮಿತಾ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹನ್ನೊಂದು ಸದಸ್ಯರ ಸಮಿತಿಗೆ ಪ್ರತಿಪಕ್ಷದ ಸದಸ್ಯರು ಒತ್ತಾಯಿಸಿದರು ಕೊನೆಗೆ ಸಭೆಯಲ್ಲಿ ಉಪಸ್ಥಿತರಿದ್ದ ಶಾಸಕ ಬೋಪಯ್ಯ ಎಂಟು ಸ್ಥಾನಕ್ಕೆ ಸೂಚಿಸಿ, ಮೂರು ಸ್ಥಾನ ಪ್ರತಿಪಕ್ಷ ಒಪ್ಪಿಕೊಳ್ಳುವಂತೆ ಹೇಳಿದಾಗ ಸಭೆ ಸಮ್ಮತಿಸಿತು.

ಕೆಲವು ಸಮಯದಿಂದ ಪುರಸಭೆ ಸ್ಥಾಯಿ ಸಮಿತಿಗೆ ಆಯ್ಕೆ ನಡೆದಿರಲಿಲ್ಲ. ಇದರಿಂದ ಕಾಂಗ್ರೆಸ್‌ನ ಕೆಲವು ಸದಸ್ಯರು ರಾಜ್ಯ ಉಚ್ಚನ್ಯಾಯಾಲಯದ ಮೆಟ್ಟಿಲೇರಿತ್ತು ಅದರಿಂತೆ ನ್ಯಾಯಾಲಯ ಒಂದು ತಿಂಗಳಲ್ಲಿ ಸಮಿತಿ ರಚನೆಗೆ ಸೂಚಿಸಿದ್ದ ಹಿನ್ನೆಲೆಯಲ್ಲಿ ಇಂದು ಸ್ಥಾಯಿ ಸಮಿತಿಯ ಆಯ್ಕೆ ನಡೆಯತು. ಈ ನಡುವೆ ಪುರಸಭೆಯ ಹಿರಿಯ ಸದಸ್ಯ ಸಿ.ಕೆ. ಪೃಥ್ವಿನಾಥ್ ಅವರ ಮಗಳ ಮದುವೆ ಅ.31ಕ್ಕೆ ಇರುವ ಕಾರಣ ಇಂದಿನ ಸಭೆ ಮುಂದೂಡುವಂತೆ ಕಾಂಗ್ರೆಸ್ ಆಗ್ರಹಿಸಿತ್ತು. ಇಲ್ಲಿ ಬಿಜೆಪಿಗೆ ಬಹುಮತದ ಕೊರತೆ ಕಾರಣ ಶಾಸಕ ಬೋಪಯ್ಯ ಹಾಗೂ ಸಂಸದ ಪ್ರತಾಪ್ ಸಿಂಹ ಆಗಮಿಸಿದ್ದರು. ವಿಧಾನಪರಿಷತ್ ಸದಸ್ಯರಾದ ಸುಜಾ ಕುಶಾಲಪ್ಪ ಅವರು ಹಾಜರಿದ್ದರು

ನಿಗದಿಯಂತೆ ನಡೆದ ಸಭೆಯಲ್ಲಿ ಬಿಜೆಪಿಯ 6 ಜನ ಸದಸ್ಯರ ಸಮಿತಿಗೆ ಪಟ್ಟು ಹಿಡಿದಿತ್ತು ಇದಕ್ಕೆ ಪುರಸಭೆ ಅಧ್ಯಕ್ಷೆ ಸುಸ್ಮಿತಾ ಸಮ್ಮತಿಸಿದ್ದರು. ಆದರೆ ಪ್ರತಿಪಕ್ಷದ ಸದಸ್ಯ ರಾಜೇಶ್ ರಾಫಿ, ಪಟ್ಟಡ ರಂಜಿ ಪೂಣಚ್ಚ 11 ಸದಸ್ಯರನ್ನು ಪರಿಗಣಿಸಿ ಸಮಿತಿ ಮಾಡುವಂತೆ ಒತ್ತಾಯಿಸಿದರು. ಈ ವೇಳೆ ಶಾಸಕರ ಮಾತಿಗೆ ಸಮ್ಮತಿಸಿ ದಂತೆ ಮುಖ್ಯಾಧಿಕಾರಿ ಚಂದ್ರಕುಮಾರ್ ಆಯ್ಕೆ ಪ್ರಕ್ರಿಯೆಗೆ ಚಾಲನೆ ನೀಡಿದರು. ಅದರಂತೆ ಬಿಜೆಪಿಯ ಸುನೀತಾ, ಆಶಾ ಸುಬ್ಬಯ್ಯ ಅನಿತಾ, ಯಶೋಧ ಬಿಜೆಪಿ ಪರ ಪಕ್ಷೇತರ ಸದಸ್ಯ ಜಲೀಲ್ ಆಯ್ಕೆಯಾದರೆ, ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರಾದ ರಂಜಿ ಪೂಣಚ್ಚ, ಅಗಸ್ಟಿನ್ ಬೆನ್ನಿ, ಪಕ್ಷೇತರ ಸದಸ್ಯ ರಜನಿಕಾಂತ್ ಆಯ್ಕೆಯಾದರು.

ಈ ಸಂದರ್ಭ ಶಾಸಕ ಬೋಪಯ್ಯ ಮಾತನಾಡಿ, ಸದಸ್ಯರ ಕೋರಿಕೆಯಂತೆ ವಿರಾಜಪೇಟೆ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಒದಗಿಸುವುದಾಗಿ ತಿಳಿಸಿದರು. ಪಟ್ಟಣದಲ್ಲಿ ನಗರೋತ್ಥಾನ ದಡಿಯಲ್ಲಿ 4.5 ಕೋಟಿ ರೂ. ಅನುದಾನದಲ್ಲಿ 16 ವಿವಿಧ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಲಾಗಿದೆ, ಮಳೆ ಪರಿಹಾರದಲ್ಲಿ ರಸ್ತೆ ಅಭಿವೃದ್ಧಿಗೆ ಅನುದಾನ ಒದಗಿಸಲಾಗಿದೆ. ನೂತನ ಪುರಸಭೆ ಕಟ್ಟಡ ಹಾಗೂ ನೂತನ ಮಾರುಕಟ್ಟೆ ಮುಂತಾದ ಕೆಲಸಗಳಿಗೆ ಅಗತ್ಯ ಅನುದಾನ ಒದಗಿಸುವುದಾಗಿ ಬೋಪಯ್ಯ ಭರವಸೆ ನೀಡಿದರು.

ಸಭೆಯಲ್ಲಿ ಉಪಾಧ್ಯಕ್ಷ ವಿಯಾಂಕ್ ಕುಟ್ಟಪ್ಪ, ಅಭಿಯಂತರ ಹೇಮಕುಮಾರ್, ಪಂಚಾಯಿತಿ ಸಿಬ್ಬಂದಿ ಉಪಸ್ಥಿತರಿದ್ದರು.

ನ.21ರಂದು ಮಡಿಕೇರಿಯಲ್ಲಿ ರೈತರ ಬೃಹತ್ ಪ್ರತಿಭಟನೆ



ಮಡಿಕೇರಿ,ಅ.31– ಕರ್ನಾಟಕ ರಾಜ್ಯ ರೈತ ಸಂಘ ಮತ್ತು ವಿವಿಧ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನವೆಂಬರ್ 21 ರಂದು ಮಡಿಕೇರಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲು ರೈತ ಸಂಘ ನಿರ್ಧರಿಸಿದೆ.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಅಧ್ಯಕ್ಷತೆಯಲ್ಲಿ ಸಿದ್ದಾಪುರ ನಗರದ ಸ್ವರ್ಣಮಾಲ ಕಲ್ಯಾಣ ಮಂಟಪದಲ್ಲಿ ಸಭೆ ನಡೆಸಲಾಯಿತು. ಕೊಡಗಿನ ವಿವಿಧ ಸಂಘಟನೆಗಳು ಮತ್ತು ಕರ್ನಾಟಕ ರಾಜ್ಯ ರೈತ ಸಂಘದ ಸಂಯುಕ್ತ ಆಶ್ರಯದಲ್ಲಿ ನಡೆದ ಮಾನವ ಮತ್ತು ವನ್ಯ ಜೀವಿಗಳ ಸಂಘರ್ಷ ಕುರಿತು ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿ ವಿವಿಧ ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಇದೇ ಸಂದರ್ಭ ನವೆಂಬರ್ 21 ರಂದು ಮಡಿಕೇರಿಯಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸುವುದಾಗಿ ರೈತ ಸಂಘ ಜಿಲ್ಲಾಧ್ಯಕ್ಷ ಮನು ಸೋಮಯ್ಯ ಪ್ರಕಟಿಸಿದರು. ಅಂದು ಜನರಲ್ ತಿಮ್ಮಯ್ಯ ಸರ್ಕಲ್‌ನಿಂದ ಬೃಹತ್ ಮೆರವಣಿಗೆ ಮೂಲಕ ಅರಣ್ಯ ಭವನ ಮುತ್ತಿಗೆ ಹಾಕಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಜಿಲ್ಲೆಯಲ್ಲಿ ನಿರಂತರವಾಗಿರುವ ಮಾನವ ವನ್ಯ ಜೀವಿ ಸಂಘರ್ಷ, ಪರಿಹಾರ ವಿತರಣೆ, ಕಾಡಾನೆ ಹಾವಳಿ ತಡೆ, ಹುಲಿ ದಾಳಿ ತಡೆಗೆ ಕ್ರಮ ಕೈಗೊಳ್ಳಲು ಅರಣ್ಯ ಇಲಾಖೆ ಮುಂದಾಗಿಲ್ಲ. ಈ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ರಾಜಕೀಯ ರಹಿತವಾಗಿ ನಡೆಸಲಾಗುವ ಅರಣ್ಯ ಭವನ ಮುತ್ತಿಗೆಯಲ್ಲಿ ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳ ಪ್ರಮುಖರು ಪಾಲ್ಗೊಳ್ಳಬೇಕೆಂದು ಮನು ಸೋಮಯ್ಯ ಮನವಿ ಮಾಡಿದರು.

ಕರ್ನಾಟಕ ರಾಜ್ಯ ರೈತ ಸಂಘ ಸಿದ್ದಾಪುರ ಶಾಖೆಯ ಅಧ್ಯಕ್ಷ ದೇವಣೀರ ಸಿ.ಬೋಪಣ್ಣ, ಜಿಲ್ಲಾ ಕಾನೂನು ಘಟಕದ ಸಲಹೆಗಾರ ಕೆ.ಬಿ. ಹೇಮಚಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚೆಟ್ರುಮಾಡ ಸುಜೈ ಬೋಪಯ್ಯ, ಜಿಲ್ಲಾ ಸಂಚಾಲಕ ಮಚ್ಚಿಮಾಡ ಸುಭಾಷ್ ಸುಬ್ಬಯ್ಯ, ಕೊಡಗು ಜಿಲ್ಲಾ ಕಾರ್ಮಿಕರ ಸಂಘಟನೆಯ ಅಧ್ಯಕ್ಷ ಪಿ.ಆರ್. ಭರತ್ ಕುಮಾರ್ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು ಸಭೆಯಲ್ಲಿ ಪಾಲ್ಗೊಂಡಿದ್ದರು.

ರಾಷ್ಟ್ರೀಯ ಏಕತಾ ದಿನ; ಪ್ರತಿಜ್ಞಾ ವಿಧಿ ಸ್ವೀಕಾರ



ಮಡಿಕೇರಿ, ಅ.31– ಜಿಲ್ಲಾಡಳಿತ ವತಿಯಿಂದ ನಗರದ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಸೋಮವಾರ ರಾಷ್ಟ್ರೀಯ ಏಕತಾ ದಿನಾಚರಣೆ ಪ್ರಯುಕ್ತ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು. ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ ಪ್ರತಿಜ್ಞಾ ವಿಧಿ ಭೋಧಿಸಿದರು.

ರಾಷ್ಟ್ರದ ಐಕ್ಯತೆ, ಸಮಗ್ರತೆ ಮತ್ತು ಭದ್ರತೆ ಕಾಪಾಡಲು ನಮ್ಮನ್ನು ಅರ್ಪಿಸುಕೊಳ್ಳುತ್ತೇವೆ ಮತ್ತು ದೇಶ ಬಾಂಧವರಲ್ಲಿ ಸಂದೇಶವನ್ನು ಸಾರಲು ಶ್ರಮಿಸುತ್ತೇನೆ ಎಂದು ಪ್ರಜ್ಞಾಪೂರ್ವಕವಾಗಿ ಪ್ರತಿಜ್ಞೆ ಮಾಡಲಾಯಿತು.

ರಾಷ್ಟ್ರದ ಪ್ರಥಮ ಗೃಹ ಸಚಿವರಾದ ಸರ್ದಾರ್ ವಲ್ಲಭಾಯ್ ಪಟೇಲ್ ಅವರ ದೂರದೃಷ್ಟಿ ಮತ್ತು ಕಾರ್ಯಕ್ಷಮತೆಯಿಂದ ಸಾಧಿಸಿದ ರಾಷ್ಟ್ರೀಯ ಏಕೀಕರಣದ ಸ್ಫೂರ್ತಿ ಕಾಪಾಡುತ್ತೇನೆ. ರಾಷ್ಟ್ರದ ಆಂತರಿಕ ಭದ್ರತೆಯನ್ನು ಖಾತ್ರಿ ಪಡಿಸಲು ತಮ್ಮದೇ ಆದ ಕೊಡುಗೆ ನೀಡುತ್ತೇನೆ ಎಂದು ಪ್ರತಿಜ್ಞೆ ಸ್ವೀಕರಿಸಲಾಯಿತು. ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ನಾನಾ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇದ್ದರು.

ಕೊಳ್ಳೇಗಾಲ ನಗರಸಭೆ ಉಪಚುನಾವಣೆ ಫಲಿತಾಂಶ

6 ಸ್ಥಾನ ಗೆದ್ದು ಬೀಗಿದ ಬಿಜೆಪಿ

ಶಾಸಕ ಎನ್.ಮಹೇಶ್ ಮೇಲುಗೈ



ಕೊಳ್ಳೇಗಾಲದ 7 ವಾರ್ಡ್‌ಗಳ ಪೈಕಿ 6 ವಾರ್ಡ್‌ಗಳಲ್ಲಿ ಬಿಜೆಪಿಗೆ ಅಭೂತಪೂರ್ವ ಗೆಲುವು ತಂದುಕೊಟ್ಟ ಮತದಾರರಿಗೆ ಅಭಿನಂದನೆ ಸಲ್ಲಿಸುವೆ. ಈ ಗೆಲುವು ಮುಂದಿನ 2023ರ ವಿಧಾನಸಭಾ ಚುನಾವಣೆಯ ದಿಕ್ಸೂಚಿ. ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಿದ್ದ 6 ವಾರ್ಡ್‌ಗಳಲ್ಲಿಯೂ ಸಹ ಬಿಜೆಪಿ ಪರವಾಗಿ ಮುಸ್ಲಿಂ, ಕುರುಬ ಹಾಗೂ ದಲಿತರು ಬೆಂಬಲಿಸಿ ಮತ ನೀಡಿದ್ದಾರೆ. ಉಪಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಗಳನ್ನು ಸೋಲಿಸಬೇಕು ಎಂದು ಹಠತೊಟ್ಟ ಕೆಲ ಮುಖಂಡರಿಗೂ ಮತದಾರರು ಬೆಲೆ ನೀಡದೆ ಬಿಜೆಪಿ ಪರವಾಗಿ ನಾವಿದ್ದೇವೆ ಎಂದು ತೋರಿಸಿಕೊಟ್ಟಿದ್ದಾರೆ. ಹಿಂದುಳಿದ ಸಮಾಜದ ಮತಗಳೇ ನಮಗೆ ಆಧಾರ ಎಂದು ಬೀಗುತ್ತಿದ್ದ ಕಾಂಗ್ರೆಸ್ಸಿಗರಿಗೆ ತಕ್ಕ ಪಾಠ ಕಲಿಸಿದ್ದಾರೆ.

–ಎನ್.ಮಹೇಶ್, ಶಾಸಕ.

ಕೊಳ್ಳೇಗಾಲ,ಅ.31–ಕೊಳ್ಳೇಗಾಲ ನಗರಸಭೆಯ 7 ವಾರ್ಡ್‌ಗಳಿಗೆ ನಡೆದ ಉಪ ಚುನಾವಣೆಯ ಫಲಿತಾಂಶ ಪ್ರಕಟಗೊಂಡಿದ್ದು, 6 ಸ್ಥಾನಗಳಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದ್ದು, ಒಂದು ವಾರ್ಡ್ ಕಾಂಗ್ರೆಸ್ ಪಾಲಾಗಿದೆ.

ಈ ಹಿಂದೆ ನಡೆದಿದ್ದ ನಗರಸಭೆ ಅಧ್ಯಕ್ಷ–ಉಪಾಧ್ಯಕ್ಷ ಚುನಾವಣೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಬಿಎಸ್‌ಪಿಯ 7 ಸದಸ್ಯರ ಸದಸ್ಯತ್ವ ಅನರ್ಹಗೊಂಡಿತ್ತು. ಇದರಿಂದ ತೆರವಾದ ವಾರ್ಡ್(2, 6, 7, 13, 21, 25 ಹಾಗೂ 26)ಗಳಿಗೆ ಅ.28 ರಂದು ಚುನಾವಣೆ ನಡೆದಿತ್ತು. ಮತಯಂತ್ರಗಳನ್ನು ನಗರದ ನ್ಯಾಷನಲ್ ಶಾಲಾ ಕೊಠಡಿಯೊಂದರಲ್ಲಿ ಬಿಗಿಬಂದೋಬಸ್ತ್‌ನಲ್ಲಿ ಇಡಲಾಗಿತ್ತು. ಸೋಮವಾರ ಮತ ಎಣಿಕೆ ಕಾರ್ಯ ನಿಗದಿಯಾಗಿತ್ತು. ಅದರಂತೆ ಇಂದು ಬೆಳಗ್ಗೆ 8 ಗಂಟೆಗೆ ಆರಂಭವಾದ ಎಣಿಕಾ ಪ್ರಕ್ರಿಯೆ ಒಂದೂವರೆ ಗಂಟೆಯಲ್ಲೇ ಮುಕ್ತಾಯವಾಯಿತು.

ಬಿಎಸ್‌ಪಿಯಿಂದ ಸದಸ್ಯತ್ವ ಅನರ್ಹಗೊಂಡಿದ್ದ 7 ಜನರ ಪೈಕಿ 6 ಮಂದಿ ಬಿಜೆಪಿಯಿಂದ ಈಗ ಗೆಲುವು ಸಾಧಿಸಿದ್ದಾರೆ. 2ನೇ ವಾರ್ಡ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಭಾಗ್ಯ 546 ಮತಗಳನ್ನು ಪಡೆದು ಜಯಶೀಲರಾಗಿದ್ದು, ಇವರ ವಿರುದ್ಧ ಸ್ಪರ್ಧಿಸಿದ್ದ ಬಿಜೆಪಿ ಅಭ್ಯರ್ಥಿ ಎಲ್.ನಾಗಮಣಿ 246 ಮತ ಪಡೆದು ಪರಾಭವಗೊಂಡಿದ್ದಾರೆ. ಇನ್ನು 6ನೇ ವಾರ್ಡ್‌ನಲ್ಲಿ ಎಂ.ಮಾನಸ(460), 7ನೇ ವಾರ್ಡ್‌ನಲ್ಲಿ ನಾಸಿರ್ ಷರೀಫ್(491), 13ನೇ ವಾರ್ಡ್‌ನಲ್ಲಿ ಎನ್.ಪವಿತ್ರ(504), 21ನೇ ವಾರ್ಡ್‌ನಲ್ಲಿ ಪ್ರಕಾಶ್(556), 25ನೇ ವಾರ್ಡ್‌ನಲ್ಲಿ ಎನ್.ರಾಮಕೃಷ್ಣ(201) ಹಾಗೂ 26ನೇ ವಾರ್ಡ್‌ನಲ್ಲಿ ಬಿ.ನಾಗಸುಂದ್ರಮ್ಮ(620) ಜಯ ಗಳಿಸಿದ್ದು, ಬಿಜೆಪಿಗೆ ಬಲ ತುಂಬಿದ್ದಾರೆ.

ಶಾಸಕ ಮಹೇಶ್ ಮೇಲುಗೈ: ಬಿಜೆಪಿಯ 6 ಅಭ್ಯರ್ಥಿಗಳು ಜಯ ಗಳಿಸುವುದರೊಂದಿಗೆ ಶಾಸಕ ಎನ್.ಮಹೇಶ್ ಮೇಲುಗೈ ಸಾಧಿಸಿದ್ದಾರೆ. ಮಹೇಶ್ ಅವರನ್ನು ಬಿಎಸ್‌ಪಿಯಿಂದ ಉಚ್ಛಾಟನೆ ಮಾಡಿದ ಬಳಿಕ ಅವರ ಬೆಂಬಲಿಗರಾಗಿದ್ದ ನಗರಸಭೆ ಸದಸ್ಯರು ಅವರೊಂದಿಗೆ ಬಿಜೆಪಿಗೆ ಸೇರ್ಪಡೆಯಾಗಿದ್ದರು. ಅಲ್ಲದೆ ಆ ಸಮಯದಲ್ಲಿ ನಡೆದ ನಗರಸಭೆ ಅಧ್ಯಕ್ಷ–ಉಪಾಧ್ಯಕ್ಷ ಚುನಾವಣೆಯಲ್ಲಿ ಬಿಎಸ್‌ಪಿಯ ವಿಪ್ ಉಲ್ಲಂಘಿಸಿ 7 ಸದಸ್ಯರೂ ಬಿಜೆಪಿ ಸದಸ್ಯರೊಂದಿಗೆ ಕೈಜೋಡಿಸಿ ನಗರಸಭೆಯ ಅಧಿಕಾರ ಹಿಡಿದಿದ್ದರು. ಪಕ್ಷದ ವಿಪ್ ಉಲ್ಲಂಘಿಸಿದ್ದನ್ನು ಪ್ರಶ್ನಿಸಿ ಬಿಎಸ್‌ಪಿ ಜಿಲ್ಲಾಧಿಕಾರಿ ನ್ಯಾಯಾಲಯ ಮೆಟ್ಟಿಲೇರಿತ್ತು. ನ್ಯಾಯಾಲಯವು 7 ಮಂದಿಯ ಸದಸ್ಯತ್ವವನ್ನೂ ಅನರ್ಹಗೊಳಿಸಿತ್ತು. ಹೈಕೋರ್ಟ್ ಸಹ ಜಿಲ್ಲಾ ದಂಡಾಧಿಕಾರಿಗಳ ಆದೇಶವನ್ನು ಎತ್ತಿ ಹಿಡಿದಿತ್ತು. ಬಳಿಕ ಅನರ್ಹರು ಚುನಾವಣೆಯಲ್ಲಿ ಸ್ಪರ್ಧೆಗೆ ಅವಕಾಶ ಕೋರಿ ಮೇಲ್ಮನವಿ ಸಲ್ಲಿಸಿದ್ದರು. ನ್ಯಾಯಾಲಯ ಸ್ಪರ್ಧೆಗೆ ಹಸಿರು ನಿಶಾನೆ ತೋರಿತ್ತು.

ಬಿಜೆಪಿ ಸಂಭ್ರಮಾಚರಣೆ: ಪಕ್ಷದ 6 ಅಭ್ಯರ್ಥಿಗಳು ಗೆಲ್ಲುತ್ತಿದ್ದಂತೆಯೇ ಶಾಸಕ ಎನ್.ಮಹೇಶ್ ನೇತೃತ್ವದಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಕಬ್ಬಿಗೆ ಎಫ್‌ಆರ್‌ಪಿ ದರ ಹೆಚ್ಚಳಕ್ಕೆ ಆಗ್ರಹ



ಚಾಮರಾಜನಗರ, ಅ.31–ಕಬ್ಬಿಗೆ ಎಫ್‌ಆರ್‌ಪಿ ದರ ಹೆಚ್ಚಿಸುವಂತೆ ಆಗ್ರಹಿಸಿ ಕಬ್ಬು ಬೆಳೆಗಾರರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಜಿಲ್ಲಾ ಕಬ್ಬು ಬೆಳೆಗಾರರು ಸಂಘದ ಆಶ್ರಯದಲ್ಲಿ ರೈತರು ನಗರದ ಶ್ರೀ ಚಾಮರಾಜರಾಜೇಶ್ವರ ದೇವಸ್ಥಾನದ ಮುಂಭಾಗ ಜಮಾಯಿಸಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ಜಿಲ್ಲಾಡಳಿತದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ಆರಂಭಿಸಿದರು. ನಂತರ ಪ್ರತಿಭಟನಾ ಮೆರವಣಿಗೆ ಹೊರಟ ರೈತರು ಭುವನೇಶ್ವರಿ ವೃತ್ತ, ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನ ತಲುಪಿದರು. ಅಲ್ಲಿ ಸ್ವಲ್ಪ ಸಮಯ ಪ್ರತಿಭಟನೆ ನಡೆಸಿ ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ನೂತನ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಮುಖಂಡರಾದ ಮೂಕಹಳ್ಳಿ ಮಹದೇವಸ್ವಾಮಿ, ಶಿವಸ್ವಾಮಿ, ನಾಗರಾಜು, ಶಿವಕುಮಾರಸ್ವಾಮಿ ಇತರರಿದ್ದರು.

ಸೋಲಿಗರ ಮಾದಮ್ಮಗೆ ಒಲಿದ ರಾಜ್ಯೋತ್ಸವ ಪ್ರಶಸ್ತಿ



ಚಾಮರಾಜನಗರ, ಅ.31–ಜಿಲ್ಲೆಯ ಹನೂರು ತಾಲೂಕು ಪಿಜಿ ಪಾಳ್ಯದ ಜೀರಿಗೆ ಗದ್ದೆ ಪೋಡಿನ 85 ವರ್ಷದ ಮಾದಮ್ಮ ಅವರು 2022ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸಂಕೀರ್ಣ ಕ್ಷೇತ್ರದಿಂದ ಮಾದಮ್ಮ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸೂಲಗಿತ್ತಿ, ನಾಟಿ ವೈದ್ಯೆಯಾಗಿ ಗುರುತಿಸಿಕೊಂಡಿರುವ ಮಾದಮ್ಮ ಅವರು ಸೋಲಿಗರ ಬುಡಕಟ್ಟು ಅಭಿವೃದ್ಧಿ ಸಂಘ ಸ್ಥಾಪನೆ ಮಾಡುವ ಸಂದರ್ಭದಲ್ಲೇ ಸಮುದಾಯದ ಸಂಘಟನೆಯಲ್ಲಿ ಪ್ರಸಿದ್ಧಿಯಾಗಿದ್ದ ಆದಿವಾಸಿಗಳ ಹಕ್ಕುಗಳಿಗಾಗಿ ಹೋರಾಟ ಮಾಡಿರುವ ಅವರು, ಮಹಿಳಾ ಸಂಘಟನೆಗಳಲ್ಲಿ ಗುರುತಿಸಿಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಸರ್ಕಾರ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಐಟಿಐ ಕಾಲೇಜು ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ



ಗುಂಡ್ಲುಪೇಟೆ, ಅ.31–ತಾಲೂಕಿನ ತೆರಕಣಾಂಬಿ ಗ್ರಾಮದ ಐಟಿಐ ಕಾಲೇಜು ಸುತ್ತುಗೋಡೆ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್.ನಿರಂಜನಕುಮಾರ್ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ತಾಲೂಕಿನ ತೆರಕಣಾಂಬಿ, ಗುಂಡ್ಲುಪೇಟೆ ಪಟ್ಟಣ ಹಾಗೂ ಬೇಗೂರು ಗ್ರಾಮಗಳಲ್ಲಿ ಐಟಿಐ ಕಾಲೇಜುಗಳಿದ್ದು, ನಿರುದ್ಯೋಗ ನಿವಾರಣೆಗೆ ಸರ್ಕಾರದಿಂದ ಅಗತ್ಯ ವೃತ್ತಿ ಶಿಕ್ಷಣ ನೀಡಲಾಗುತ್ತಿದೆ. ಟಾಟಾ ಸೇರಿದಂತೆ ಅತ್ಯುನ್ನತ ಸಂಸ್ಥೆಯಲ್ಲಿ ಉದ್ಯೋಗಾವಕಾಶ ದೊರಕುವ ನಿಟ್ಟಿನಲ್ಲಿ ತರಬೇತಿ ನೀಡುತ್ತಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ರಾಜಮ್ಮ, ಸದಸ್ಯರಾದ ಗೋವಿಂದು, ಪಾಪಣ್ಣಿ, ಶಶಿ, ಮಾಜಿ ಸದಸ್ಯ ಟಿ.ಎಸ್.ಮಹದೇವಸ್ವಾಮಿ ಇತರರಿದ್ದರು.

ಹನೂರಲ್ಲಿ ಇಂದಿರಾ ಗಾಂಧಿ ಪುಣ್ಯಸ್ಮರಣೆ



ಹನೂರು, ಅ.31–ಬಡವರು, ದೀನ ದಲಿತರ ಏಳಿಗೆಗೆ ಶ್ರಮಿಸಿದ ಉಕ್ಕಿನ ಮಹಿಳೆ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ತತ್ವ ಆದರ್ಶಗಳನ್ನು ಪ್ರತಿಯೊಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಆರ್.ನರೇಂದ್ರ ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇಂದಿರಾಗಾಂಧಿ ಅವರ ಆಡಳಿತಾವಧಿಯಲ್ಲಿ ಜಾರಿಗೆ ತಂದಿದ್ದ ಆರ್ಥಿಕ ನೀತಿಯಿಂದ ಭಾರತ ಇಂದು ಸುಭದ್ರವಾಗಿದೆ. ಅಲ್ಲದೆ ಪ್ರಜಾಪ್ರಭುತ್ವ, ಸಂವಿಧಾನ ರಕ್ಷಣೆಯಿಂದ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ದೇಶ ಸುಭದ್ರವಾಗಿದೆ ಎಂದರು. ಉಳುವವನೇ ಭೂಮಿ ಒಡೆಯ ಕಾಯ್ದೆ ಜಾರಿಗೆ ತಂದ ನಂತರ ಲಕ್ಷಾಂತರ ರೈತರು ಜೀವನ ಕಂಡುಕೊಂಡಿದ್ದಾರೆ. ಸಾಮಾಜಿಕ ನ್ಯಾಯದಡಿ ಜೀತಪದ್ಧತಿ ಹೋಗಲಾಡಿಸಿದ ಹಿನ್ನೆಲೆಯಲ್ಲಿ ಲಕ್ಷಾಂತರ ಜನರು ಸ್ವತಂತ್ರ ಬದುಕು ಕಟ್ಟಿಕೊಂಡಿದ್ದಾರೆ ಎಂದು ಬಣ್ಣಿಸಿದರು.

ಎಐಸಿಸಿ ರಾಷ್ಟ್ರೀಯ ಅಧ್ಯಕ್ಷರಾಗಿ ಮಲ್ಲಿಕಾರ್ಜುನ್ ಖರ್ಗೆ ಆಯ್ಕೆಯಾಗಿರುವುದು ಪಕ್ಷಕ್ಕೆ ಆನೆ ಬಲ ಬಂದಂತಾಗಿದೆ ಎಂದರು. ಇದೇ ಸಂದರ್ಭದಲ್ಲಿ ಹನೂರು ಪಟ್ಟಣ ನಿವಾಸಿ ಪ್ರಭು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು. ಸೂಳೇರಿಪಾಳ್ಯ ಗ್ರಾಪಂ ಅಧ್ಯಕ್ಷೆ ಸುಧಾ, ಸದಸ್ಯ ಬಸವರಾಜು, ಹನೂರು ಪಪಂ ಸದಸ್ಯರಾದ ಸಂಪತ್‌ಕುಮಾರ್, ರಾಮಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಈಶ್ವರ್, ಪ್ರಧಾನ ಕಾರ್ಯದರ್ಶಿ ಉದ್ದನೂರು ಸಿದ್ದರಾಜು, ಮುಖಂಡರಾದ ಪೆದ್ದನಪಾಳ್ಯ ಮಣಿ, ಕಾಂಚಳ್ಳಿ ನಟರಾಜು, ಸಿಕಂದರ್ ಪಾಷಾ ಷಣ್ಮುಗ, ಸೋಮಣ್ಣ ರಾಜೇಶ್, ಸೇರಿದಂತೆ ಇನ್ನಿತರರಿದ್ದರು.

ಸಮುದಾಯ ಭವನಗಳು ಜ್ಞಾನ ದೇಗುಲವಾಗಲಿ



ಚಾಮರಾಜನಗರ, ಅ.31–ಸಮುದಾಯ ಭವನಗಳು ಜ್ಞಾನ ದೇಗುಲವಾಗಿ ಪರಿವರ್ತನೆಯಾಗಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅಭಿಪ್ರಾಯಪಟ್ಟರು.

ತಾಲೂಕಿನ ಕಾಳನಹುಂಡಿ ಗ್ರಾಮದಲ್ಲಿ ಸುಮಾರು 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶ್ರೀಭಗೀರಥ ಸಮುದಾಯ ಭವನ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಸಮುದಾಯ ಭವನಗಳು ಉದ್ಘಾಟನೆಗಷ್ಟೇ ಸೀಮಿತವಾಗಿದ್ದು, ಶುಭ ಸಮಾರಂಭ, ಮದುವೆಗಳು ಸೇರಿದಂತೆ ಶೈಕ್ಷಣಿಕ ಚಟುವಟಿಕೆಗಳಿಗೂ ಹೆಚ್ಚು ಬಳಕೆಯಾಗಬೇಕು. ಮಕ್ಕಳಿಗೆ ಸಂಜೆ ಪಾಠ, ಎಸ್‌ಎಸ್‌ಎಲ್‌ಸಿ ಹಾಗೂ ಪಿಯು ಮಕ್ಕಳಿಗೆ ವಿಶೇಷ ತರಗತಿಗಳು ನಡೆಯುವಂತಾಗಬೇಕು. ಮಹಿಳೆಯರ ಸ್ವ–ಸಹಾಯ ಸಂಘಗಳ ಸಭೆ ನಡೆಸುವ ಭವನ ಮೂಲಕ ಸದಾ ಚಟುವಟಿಕಾ ಕೇಂದ್ರವಾಗಿರಬೇಕು ಎಂದು ಸಲಹೆ ನೀಡಿದರು

ಶಾಸಕ ಸಿ.ಪುಟ್ಟರಂಗಶೆಟ್ಟಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಗಲ ಶಿವಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎ.ಮಹದೇವಶೆಟ್ಟಿ, ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ವಿರೂಪಾಕ್ಷ, ಸಮಾಜವಾದಿ ಜನತಾ ಪಾರ್ಟಿ ರಾಜ್ಯಾಧ್ಯಕ್ಷ ಜಿ.ಎಂ.ಗಾಡ್ಕರ್, ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಪಿ.ಲಿಂಗರಾಜು, ಯಜಮಾನರಾದ ಬಸವಶೆಟ್ಟಿ, ಶಿವಣ್ಣಶೆಟ್ಟಿ, ಮಹದೇವಶೆಟ್ಟಿ, ಗ್ರಾಪಂ ಸದಸ್ಯ ಮಹದೇವಶೆಟ್ಟಿ, ರಾಮಶೆಟ್ಟಿ ಭಾಗ್ಯದೊಡ್ಡ ಬಸವಶೆಟ್ಟಿ, ಮಾಜಿ ಸದಸ್ಯ ಶಿವಣ್ಣ, ಎಸ್‌ಡಿಎಂಸಿ ಅಧ್ಯಕ್ಷ ಸೋಮಣ್ಣ, ಮುಖಂಡರಾದ ಶಂಕರಶೆಟ್ಟಿ ಹಾಗೂ ಉಪ್ಪಾರ ಸಮುದಾಯದ ಮುಖಂಡರು, ಯಜಮಾನರು, ಶ್ರೀ ಭಗೀರಥ ಯುವಕರ ಸಂಘದ ಪದಾಧಿಕಾರಿಗಳು, ಸದಸ್ಯರು, ಮಹಿಳಾ ಸ್ವ–ಸಹಾಯ ಸಂಘದ ಸದಸ್ಯರಿದ್ದರು.

ನೂತನ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅಧಿಕಾರ ಸ್ವೀಕಾರ



ಚಾಮರಾಜನಗರ, ಅ.31–ಜಿಲ್ಲೆಯ ನೂತನ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಇಂದು ಅಧಿಕಾರ ಸ್ವೀಕರಿಸಿದರು. ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಿರ್ಗಮಿತ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ನೂತನ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅವರಿಗೆ ಪುಸ್ತಕ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು.

ಬಳಿಕ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳು ನೂತನ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್‌ರನ್ನು ಸ್ವಾಗತಿಸಿದರು. ನಿರ್ಗಮಿತ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರನ್ನು ಆತ್ಮೀಯವಾಗಿ ಬೀಳ್ಕೊಟ್ಟರು. ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು.

ಮೂರನೇ ಪುಟದಿಂದ

'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ

ಕಾಲ ಆರ್ಥಿಕ ಚಟುವಟಿಕೆಗಳ ಕುರಿತ ದಿಕ್ಸೂಚಿಯಾಗಲಿದೆ. ಇದರಲ್ಲಿಯೂ ಆಸಕ್ತರು, ಉದ್ಯಮಿಗಳು ಹಾಗೂ ಸಣ್ಣ ಕೈಗಾರಿಕೋದ್ಯಮಿಗಳಿಗೆ ಪಾಲ್ಗೊಳ್ಳುವ ಅವಕಾಶವಿದೆ. ಹೆಸರುಗಳನ್ನು ನೋಂದಾಯಿಸಿಕೊಂಡು ಭಾಗವಹಿಸಬೇಕು. ನೋಂದಣಿ ಮೂಲಕ ಮಾತ್ರವೇ ಸಮಾವೇಶಕ್ಕೆ ಪ್ರವೇಶವಿದೆ ಎಂದರು. ನವೆಂಬರ್ 11ರಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ 2ನೇ ಟರ್ಮಿನಲ್, ಬೆಂಗಳೂರು ರೈಲ್ವೇ ನಿಲ್ದಾಣದಲ್ಲಿ ಚೆನ್ನೈ-ಬೆಂಗಳೂರು- ಮೈಸೂರು ನಡುವಿನ 'ವಂದೇ ಭಾರತ್' ಹೈಸ್ಪೀಡ್ ರೈಲನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಉದ್ಘಾಟನೆ ಮಾಡಲಿದ್ದಾರೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಇದರ ಜೊತೆಗೆ ಬೆಂಗಳೂರು ನಿರ್ಮಾತೃ ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆ ಉದ್ಘಾಟನೆಯಾಗುತ್ತಿದೆ. ಕೆಂಪೇಗೌಡರು ಪ್ರಗತಿಯ ಸಂಕೇತವಾಗಿದ್ದು, ಅವರ ಪ್ರತಿಮೆಗೆ 'ಪ್ರಗತಿಯ ಪ್ರತಿಮೆ' ಎಂದು ಹೆಸರಿಡಲಾಗಿದೆ. ಲಕ್ಷಾಂತರ ಜನ ಇದರಲ್ಲಿ ಭಾಗವಹಿಸುವ ನಿರೀಕ್ಷೆಯಿದ್ದು, ಸಾರ್ವಜನಿಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾರೆ ಎಂದು ವಿವರಿಸಿದರು. ಇನ್ಸ್‌ಪೆಕ್ಟರ್ ನಂದೀಶ್ ಆತ್ಮಹತ್ಯೆ ಪ್ರಕರಣದ ತನಿಖೆ ಪ್ರಾರಂಭಿಸಲು ಡಿಜಿಪಿ ಅವರಿಗೆ ಸೂಚನೆ ನೀಡಲಾಗಿದೆ. ಸಂಪೂರ್ಣ, ವಿಸ್ತೃತ ತನಿಖೆ ಕೈಗೊಳ್ಳಲು ತಿಳಿಸಿದ್ದೇನೆ ಎಂದರು.

ಮಹಾರಾಜ ಕಾಲೇಜು ವಿದ್ಯಾರ್ಥಿ ಬಲಿ

ಅರಣ್ಯಾಧಿಕಾರಿಗಳ ನಿರ್ಲಕ್ಷ್ಯತನದಿಂದ ಇಂದು ಯುವಕ ಬಲಿಯಾಗಿದ್ದಾನೆ ಎಂದು ಗ್ರಾಮಸ್ಥರು ದೂರಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ವಲಯ ಅರಣ್ಯಾಧಿಕಾರಿ ಶಶಿಧರ್ ಹಾಗೂ ಬನ್ನೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಶಾಸಕ ಎಂ.ಅಶ್ವಿನ್ ಕುಮಾರ್ ಕೂಡ ಭೇಟಿ ನೀಡಿ ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ಹೇಳಿ, ಸರ್ಕಾರದಿಂದ ಸಿಗಬಹುದಾದ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ. ಯುವಕನ ಮನೆಗೆ ಮೈಮುಲ್ ಮಾಜಿ ಅಧ್ಯಕ್ಷ ಸಿ.ಓಂಪ್ರಕಾಶ್, ಉಕ್ಕಲಗೆರೆ ಗ್ರಾಪಂ ಮಾಜಿ ಅಧ್ಯಕ್ಷ ಅಡುಗೆ ಕುಮಾರ್, ರೈತ ಮುಖಂಡ ಮಹದೇವಸ್ವಾಮಿ, ಎಪಿಎಂಸಿ ಮಾಜಿ ಸದಸ್ಯ ಬಸವಣ್ಣ ಭೇಟಿ ನೀಡಿ ಸಾಂತ್ವನ ಹೇಳಿದ್ದಾರೆ. ಯುವಕನ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಬನ್ನೂರು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಗಿದೆ.

ಕನ್ನಡ ಮಾತನಾಡಬೇಕಲ್ವಾ...!?

ಎಂ.ಎಸ್ಸಿ(ಸಿಎಸ್) ಪದವಿ ಮುಗಿಸಿ ಸದ್ಯ ಶ್ರೀರಂಗಪಟ್ಟಣ ತಾಲೂಕು ಎಂಐಟಿ ಕ್ಯಾಂಪಸ್‌ನಲ್ಲಿರುವ ಮಹಾರಾಜ ರೀಸರ್ಚ್ ಫೌಂಡೇಷನ್‌ನಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿದ್ದೇನೆ. ನಾನು ಮೈಸೂರಿಗೆ ಬಂದ 6 ತಿಂಗಳಲ್ಲೇ ಅಲ್ಪಸ್ವಲ್ಪ ಕನ್ನಡ ಕಲಿತು, ಮಾತನಾಡಲು ಶುರು ಮಾಡಿದೆ. ಸ್ನೇಹಿತರು, ಉಪನ್ಯಾಸಕರು, ನೆರೆಹೊರೆಯವರು, ಅಂಗಡಿಯವರು ಹೀಗೆ ಎಲ್ಲರೂ ಸಹಕರಿಸಿದರು. ಏನಾದರೂ ತಪ್ಪಾದರೆ ತಮಾಷೆ ಮಾಡದೆ ಅದನ್ನು ಸರಿಪಡಿಸಿ ಹೇಳಿಕೊಟ್ಟರು.

ಅಪ್ಪು ನನಗಿಷ್ಟ: ಜೊತೆಗೆ ಕನ್ನಡ ಸಿನಿಮಾ ಹಾಗೂ ಹಾಡುಗಳಿಂದಲೂ ಭಾಷೆ ಕಲಿಯಲು ಅನುಕೂಲವಾಯಿತು. ರ್‍ಯಾಪರ್ ಚಂದನ್‌ಶೆಟ್ಟಿ ಒಮ್ಮೆ ನಮ್ಮ ವಿದ್ಯಾವಿಕಾಸ ಕಾಲೇಜಿಗೆ ಬಂದಿದ್ದರು. ಬಳಿಕ ಯುವ ದಸರಾದಲ್ಲೂ ಹಾಡಿದ್ದರು. ಅವರು ಹಾಡುವುದು ನನಗೆ ಇಷ್ಟವಾಯಿತು. ಅಪ್ಪು ಪುನೀತ್ ರಾಜ್‌ಕುಮಾರ್ ನನ್ನ ಫೇವರೇಟ್ ನಟ. ಅರಸು, ಮಿಲನ, ರಾಜಕುಮಾರ ಸೇರಿ ಅನೇಕ ಸಿನಿಮಾಗಳನ್ನು ನೋಡಿದ್ದೇನೆ. ಅವರ ಕೊನೆಯ ಚಿತ್ರ 'ಗಂಧದ ಗುಡಿ' ನೋಡಬೇಕು. 'ಬೊಂಬೆ ಹೇಳುತೈತೆ ಮತ್ತೆ ಹೇಳುತೈತೆ ನೀನೇ ರಾಜಕುಮಾರ...' ಹಾಡು ತುಂಬಾ ಇಷ್ಟ 'ಮುಂಗಾರು ಮಳೆ-2' ಸಿನಿಮಾದ 'ಸರಿಯಾಗಿ ನೆನಪಿದೆ ನನಗೆ...', 'ಕೆಜಿಎಫ್'ನ 'ಸಲಾಂ ರಾಖಿಬಾಯ್...' ಹಾಡುಗಳನ್ನೂ ಪದೇ ಪದೇ ಕೇಳುತ್ತೇನೆ.

ಹೃದಯಸ್ಪರ್ಶಿ ಭಾಷೆ: ನನ್ನ ತಂದೆ 'ಭಾಷೆಯಿಂದ ಜನರ ಹೃದಯ ಮುಟ್ಟಬಹುದು' ಎಂಬ ಸಲಹೆ ನೀಡಿದ್ದರು. ನಾನು ಕನ್ನಡ ಕಲಿಯಲು ತಂದೆಯ ಮಾತೂ ಪ್ರೇರಣೆಯಾಯಿತು. ಕನ್ನಡ ಕಲಿತಿರುವುದರಿಂದ ನನಗೆ ಆರಾಮದಾಯಕ ಭಾವನೆ ಮೂಡಿದೆ. ಕೆಲವು ಬಾರಿ ಕಾಲೇಜಿನಲ್ಲಿ ಕನ್ನಡದಲ್ಲೇ ವಿಷಯ ಮಂಡಿಸಲು ಪ್ರಯತ್ನಿಸಿದ್ದೇನೆ. ಬೋಗಾದಿ 2ನೇ ಹಂತದಲ್ಲಿ ಬಾಡಿಗೆ ಮನೆಯಲ್ಲಿದ್ದೇನೆ. ನೆರೆಹೊರೆಯವರೆಲ್ಲಾ ತುಂಬಾ ಪ್ರೀತಿಯಿಂದ ಮಾತನಾಡಿಸುತ್ತಾರೆ. ತಂದೆ ಹೇಳಿದಂತೆ ಭಾಷೆಯಿಂದ ಜನರ ಹೃದಯ ಸ್ಪರ್ಶಿಸಿದ್ದೇನೆ. ಮೈಸೂರಿನ ವಾತಾವರಣ, ಊಟ ಎಲ್ಲವೂ ಚೆನ್ನಾಗಿದೆ. ಜನ ತುಂಬಾ ಸಹಾಯ ಮಾಡುತ್ತಾರೆ. ಬೇರೆ ಊರಿಗೆ ಹೋಗಿ ಮೈಸೂರಿಗೆ ವಾಪಸ್ಸಾದಾಗ ನಮ್ಮ ಮನೆಗೆ ಬಂದಿದ್ದೇವೆ ಎನ್ನಿಸುತ್ತದೆ.

ನಾನು 'ಕನ್ನಡ ಬಾಯ್': ಮೈಸೂರಿನಲ್ಲಿ ಅಫ್ಘಾನಿಸ್ತಾನದ 200ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಅಲ್ಲದೆ ಬೇರೆ ದೇಶದವರೂ ತುಂಬಾ ಇದ್ದಾರೆ. ಎಲ್ಲರಿಗೂ ನಾನು ಕನ್ನಡ ಕಲಿಯುವಂತೆ ತಿಳಿಸುತ್ತೇನೆ. ಅವರೆಲ್ಲಾ ನನ್ನನ್ನು 'ಕನ್ನಡ ಬಾಯ್' ಎಂದೇ ಕರೆಯುತ್ತಾರೆ. ಆಗ 'ನಾನು ಕನ್ನಡಿಗ' ಎಂದು ಹೆಮ್ಮೆಯಿಂದ ಹೇಳುತ್ತೇನೆ. ಟ್ರಾಫಿಕ್ ಇನ್ನಿತರ ಸಮಸ್ಯೆ ಬಗ್ಗೆ ವಿದೇಶಿಯರೊಂದಿಗೆ ಮಾತನಾಡಬೇಕಾದಾಗ ಪೊಲೀಸರು ನನಗೆ ಕರೆ ಮಾಡುತ್ತಾರೆ. ಇನ್ನು ವಿದೇಶಿ ವಿದ್ಯಾರ್ಥಿಗಳಿಗೆಲ್ಲಾ ನಾನು ಗೊತ್ತು. ಸಂವಹನದಲ್ಲಿ ಏನಾದರೂ ಸಮಸ್ಯೆಯಾದರೆ ನನಗೆ ಕರೆ ಮಾಡುತ್ತಾರೆ. ನಾನು ಕನ್ನಡದಿಂದ ಮಾತನಾಡುವುದರಿಂದ ಎಲ್ಲರೂ ಇಷ್ಟಪಡುತ್ತಾರೆ. ನಾನೂ ಇನ್ನೂ ಚೆನ್ನಾಗಿ ಕನ್ನಡವನ್ನು ಕಲಿಯುತ್ತೇನೆ ಎಂದು ಮೊಹಮ್ಮದ್ ರೆಜಾ ಶರೀಫಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸಿ

ಶಾಸಕ ಬೆಂಬಲ ನೀಡಿದ್ರಾ? ಈ ಶ್ರೀರಾಮುಲು ಚುನಾವಣೆಗೆ ಮೊದಲು ಬಿಜೆಪಿ ಅಧಿಕಾರಕ್ಕೆ ಬಂದರೆ 24 ಗಂಟೆಯೊಳಗೆ ನಾಗಮೋಹನ್ ದಾಸ್ ಅವರ ವರದಿ ಜಾರಿಗೊಳಿಸುವುದಾಗಿ ಹೇಳಿದ್ದರು. ಅಲ್ಲದೆ, ಇದನ್ನು ರಕ್ತದಲ್ಲಿ ಬರೆದುಕೊಡ್ತೀನಿ ಎಂದಿದ್ದರು. ಈಗ ನಮ್ಮಿಂದ ಒತ್ತಡ ಹೆಚ್ಚಳ ಹಾಗೂ ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರ ಹೋರಾಟದ ಹಿನ್ನೆಲೆಯಲ್ಲಿ ವಿಧಿಯಿಲ್ಲದೆ, ಸುಗ್ರೀವಾಜ್ಞೆ ಹೊರಡಿಸಿದ್ದಾರೆ ಎಂದರು.

ಎರಡು ದಿನಗಳ ವಿಶೇಷ ಅಧಿವೇಶನ ಕರೆದು, ಮೀಸಲಾತಿ ಸಂಬಂಧ ಒಂದು ಕಾಯ್ದೆ ಮಾಡಿ ಎಂದು ನಾನು ಹೇಳಿದ್ದೆ. ಕಾಯ್ದೆ ನಂತರ ಕೇಂದ್ರದಲ್ಲಿಯೂ ಬಿಜೆಪಿಯದೇ ಸರ್ಕಾರ ಇರುವುದರಿಂದ ಅದನ್ನು ಸಂವಿಧಾನದ 9 ಶೆಡ್ಯೂಲ್‌ಗೆ ಸೇರಿಸಲು ಕ್ರಮ ಕೈಗೊಳ್ಳಲು ಬಿಜೆಪಿ ಸರ್ಕಾರಕ್ಕೆ ಆಗ್ರಹಿಸಿದ್ದೆ. ಆದರೆ ಇವರು 9ನೇ ಶೆಡ್ಯೂಲ್ ಬಗ್ಗೆ ಮಾತನಾಡುತ್ತಿದ್ದಾರಾ? ಎಂದು ಪ್ರಶ್ನಿಸಿದರಲ್ಲದೆ, ಇದಕ್ಕೆ ಸೇರಿಸದೇ ಹೋದರೆ ಸಂವಿಧಾನಾತ್ಮಕ ರಕ್ಷಣೆ ಸಿಗುವುದಿಲ್ಲ ಎಂದು ಹೇಳಿದರು. 1992ರ ಇಂದಿರಾ ಸಹಾನಿ ಪ್ರಕರಣದಲ್ಲಿ 9 ನ್ಯಾಯಮೂರ್ತಿಗಳ ಪೀಠವು ಮೀಸಲಾತಿ ಪ್ರಮಾಣ ಶೇ.50ಕ್ಕಿಂತ ಮೀರಬಾರದೆಂದು ತೀರ್ಪು ನೀಡಿದೆ. ಈಗ ಈ ಮಿತಿಯನ್ನು ಸಡಿಲ ಮಾಡಿ ಶೇ.6ರಷ್ಟು ಹೆಚ್ಚಳ ಮಾಡಲಾಗಿದೆ. ಇದರ ಜೊತೆ ಆರ್ಥಿಕವಾಗಿ ಹಿಂದುಳಿದ ಸಾಮಾನ್ಯ ವರ್ಗದವರಿಗೆ ಶೇ.10ರಷ್ಟು ಮೀಸಲಾತಿ ನೀಡಲಾಗಿದೆ. ಇದರಿಂದ ಒಟ್ಟು ಮೀಸಲಾತಿ ಶೇ.66ರಷ್ಟಾಯಿತು. ಹೀಗಾಗಿ ಇದಕ್ಕೆ ರಕ್ಷಣೆ ಸಿಗಬೇಕಾದರೆ ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಬೇಕು ಎಂದು ಪ್ರತಿಪಾದಿಸಿದರು.

ಸಿಎಂ, ಗೃಹ ಸಚಿವರು ರಾಜೀನಾಮೆ ಕೊಡಬೇಕಲ್ಲವೇ?: ಹೃದಯಾಘಾತದಿಂದ ಮೃತಪಟ್ಟ ಪೊಲೀಸ್ ಇನ್ಸ್‌ಪೆಕ್ಟರ್ ನಂದೀಶ್ ಅವರ ಅಂತಿಮ ದರ್ಶನಕ್ಕೆ ಹೋಗಿದ್ದ ಸಚಿವ ಎಂ.ಟಿ.ಬಿ.ನಾಗರಾಜ್, ಅಲ್ಲಿ ಪೊಲೀಸ್ ಸಿಬ್ಬಂದಿ ಜೊತೆ ಮಾತನಾಡುವಾಗ 70, 80 ಲಕ್ಷ ಕೊಟ್ಟು ವರ್ಗಾವಣೆ ಮಾಡಿಸಿಕೊಂಡರೆ ಹೃದಯಾಘಾತ ಆಗದೆ ಮತ್ತೇನಾಗುತ್ತೆ ಎಂದು ಹೇಳಿದ್ದಾರೆ. ಇದು ಯಾರೋ ದಾರಿಯಲ್ಲಿ ಹೋಗುವವರು ಹೇಳಿದ್ದಲ್ಲ, ಅವರೊಬ್ಬ ಸಚಿವರು. ನಂದೀಶ್ ಸಾಲ ಮಾಡಿ 70ರಿಂದ 80 ಲಕ್ಷ ಲಂಚ ನೀಡಿದ್ದಾರೆ. ಆಮೇಲೆ ಯಾವುದೋ ಕಾರಣಕ್ಕೆ ಅವರನ್ನು ಅಮಾನತು ಮಾಡಿದ್ದಾರೆ. ಇದರಿಂದ ಒತ್ತಡಕ್ಕೆ ಒಳಗಾಗಿ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಇದಕ್ಕೆ ಯಾರು ಹೊಣೆ? ರಾಜ್ಯ ಸರ್ಕಾರ ಹೊಣೆ ಅಲ್ವಾ? ಈ ಲಂಚದ ಹಣವನ್ನು ಗೃಹ ಸಚಿವರು ಅಥವಾ ಮುಖ್ಯಮಂತ್ರಿಗಳು ಪಡೆದಿರಬೇಕು? ಅವರಿಗೆ ತಮ್ಮ ಸ್ಥಾನದಲ್ಲಿ ಮುಂದುವರೆಯುವ ಯಾವ ನೈತಿಕತೆ ಇದೆ. ರಾಜೀನಾಮೆ ಕೊಡಬೇಕಲ್ಲವೇ? ಎಂದು ಕಿಡಿಕಾರಿದರು.

ರಾಜಕೀಯ ಖಳನಾಯಕ ಎಂದು ತಮ್ಮನ್ನು ನಳಿನ್ ಕುಮಾರ್ ಕಟೀಲ್ ಟೀಕಿಸಿರುವ ಕುರಿತು ಪ್ರತಿಕ್ರಿಯಿಸಿ, ಅವನೊಬ್ಬ ಜೋಕರ್. ಅಂಥವರಿಗೆಲ್ಲ ನಾನು ಉತ್ತರ ಕೊಡುತ್ತಾ ಕೂರಲು ಆಗಲ್ಲ. ಕಟೀಲ್ ಯಾವ ಹಿನ್ನಲೆಯಿಂದ ಬಂದವರು? ಯಾವ ಹೋರಾಟ ಮಾಡಿಕೊಂಡು ಬಂದಿದ್ದಾರೆ? ಆರ್‌ಎಸ್‌ಎಸ್ ಹಿನ್ನಲೆ ಮಾತ್ರ ಹೊಂದಿದ್ದಾರೆ. ಹಾಗಾಗಿ ಕಟೀಲ್ ಹೇಳುವ ಮಾತುಗಳಿಗೆ ಪ್ರತಿಕ್ರಿಯೆ ನೀಡಬೇಕಾದ ಅಗತ್ಯವಿಲ್ಲ ಎಂದು ಟೀಕಿಸಿದರು.

ನ್ಯಾಯಾಂಗ ತನಿಖೆಗೆ ಒತ್ತಾಯ

ಅವರ ಕೆಲಸ ಎಂದು ಕಿಡಿಕಾರಿದರು. **40 ಪರ್ಸೆಂಟ್‌ಗೆ ಇದು ಪ್ರಬಲ ಸಾಕ್ಷಿ:** ಬಸವರಾಜ ಅಮರಗೋಳ ಎಂಬ ವ್ಯಕ್ತಿ ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ, ಮೂಡಿಗೆರೆ ಹಾಗೂ ಕಡೂರು ಮುಂತಾದ ಕಡೆಗಳಿಗೆ ಕೋವಿಡ್ ಮೊದಲ ಅಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಆದೇಶ ಮೇರೆಗೆ ಉಪಕರಣಗಳನ್ನು ಸರಬರಾಜು ಮಾಡಿದ್ದರು. ಈಗ ಎರಡು ವರ್ಷಗಳೇ ಆಗಿದೆ. ಅವರಿಗೆ ಕೇವಲ ಶೇ.20ರಷ್ಟು ಬಿಲ್ ಹಣವನ್ನು ಮಾತ್ರ ನೀಡಿದ್ದಾರೆ. ಬಾಕಿ ಹಣಕ್ಕಾಗಿ ಅವರು ಮುಖ್ಯಮಂತ್ರಿಗಳನ್ನು ಎರಡು ಬಾರಿ ಭೇಟಿ ಮಾಡಿದ್ದಾರೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ಮುಖ್ಯ ಕಾರ್ಯದರ್ಶಿ, ಅಧೀನ ಕಾರ್ಯದರ್ಶಿಗಳನ್ನು ಭೇಟಿ ಮಾಡಿದ್ದಾರೆ ಎಂದರು.

ಇದರಿಂದ ಯಾವ ಉಪಯೋಗ ಆಗದಿದ್ದಕ್ಕೆ ಕೊನೆಗೆ ರಾಷ್ಟ್ರಪತಿಗಳಿಗೆ ಇದೇ ಅ.20ರಂದು ಪತ್ರ ಬರೆದು ತನ್ನ ಬಳಿ 35ರಿಂದ 40ರಷ್ಟು ಕಮಿಷನ್ ಕೇಳುತ್ತಿದ್ದಾರೆ. ಇಷ್ಟು ಹಣ ನನ್ನಿಂದ ಕೊಡಲು ಸಾಧ್ಯವಿಲ್ಲ. ನನ್ನ ಬಾಕಿ ಬಿಲ್ ಹಣವನ್ನು ನೀವೇ ಕೊಡಿಸಿ, ಇಲ್ಲದಿದ್ದರೆ ನನಗೆ ದಯಾಮರಣಕ್ಕೆ ಅನುಮತಿ ಕೊಡಿ ಎಂದು ಕೇಳಿದ್ದಾರೆ. 40 ಪರ್ಸೆಂಟ್ ಕಮಿಷನ್ ಸರ್ಕಾರ ಎಂಬುದಕ್ಕೆ ಇದು ಪ್ರಬಲ ಸಾಕ್ಷಿ ಎಂದು ತಿಳಿಸಿದರು. ಮುಂಬರುವ ವಿಧಾನಸಭಾ ಚುನಾವಣೆ ಸಂಬಂಧ ನವೆಂಬರ್ ಅಂತ್ಯದೊಳಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಲಿದೆ. ಈಗಾಗಲೇ ಪಕ್ಷದಿಂದ ಸರ್ವೆ ಮಾಡಿಸಲಾಗಿದೆ. ನಮ್ಮ ಸಮೀಕ್ಷೆಯ ಪ್ರಕಾರ 150 ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವ ವಿಶ್ವಾಸವಿದೆ ಎಂದು ಹೇಳಿದರು.

ಮೈಸೂರಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ 14ನೇ ಮಾನ್ಯತಾ ದಿನಾಚರಣೆಗೆ ಚಾಲನೆ

ಸಂಶೋಧಕರು ಸಂಕಲ್ಪ ತೊಡದಿದ್ದರೆ ಪಶ್ಚಾತ್ತಾಪ ಪಡಬೇಕಾದೀತು...


ಹಿರಿಯ ಸಾಹಿತಿ ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಸುಳಿವು

ಮೈಸೂರು, ಅ.31(ಆರ್‌ಕೆಬಿ)- ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಅಭಿವೃದ್ಧಿಗೆ ಸಂಶೋಧಕರು ಸಂಕಲ್ಪ ತೊಟ್ಟು, ಕ್ರಿಯಾಶೀಲರಾಗಬೇಕು. ನಮ್ಮ ಸಂಶೋಧಕರು ತಮ್ಮ ಎಲ್ಲಾ ಕ್ಲೇಶಗಳನ್ನು ಬಿಟ್ಟು ಕೆಲಸ ಮಾಡಬೇಕು. ಈ ವಿಚಾರದಲ್ಲಿ ಸಂಶೋಧಕರಾಗಲಿ, ಕೇಂದ್ರದ ಅಧಿಕಾರಿಗಳಾಗಲೀ ಕೊಸರಾಟ ಮಾಡದೇ ಪ್ರಕಟಣೆ, ಪ್ರಸಾರ, ಬೋಧನೆ ಎಲ್ಲವೂ ಒಟ್ಟಾಗಿ ಹೋದರೆ ಮಾತ್ರ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಅಭಿವೃದ್ಧಿ ಸಾಧ್ಯ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂದು ಹಿರಿಯ ಸಾಹಿತಿ ಪ್ರೊ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಇಂದಿಲ್ಲಿ ಕರೆ ನೀಡಿದರು.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಸೋಮವಾರ 14ನೇ ಶಾಸ್ತ್ರೀಯ ಕನ್ನಡ ಮಾನ್ಯತಾ ದಿನಾಚರಣೆಯಲ್ಲಿ 'ವಡ್ಡಾರಾಧನೆ; ಅಧ್ಯಯನ ಸಂಪುಟ' ಕೇಂದ್ರದ ಕೃತಿ ಮತ್ತು 'ಸೊಲ್ಲರಿಮೆ' ಸುದ್ದಿಪತ್ರಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಶಾಸ್ತ್ರೀಯ ಕನ್ನಡ ಕೇಂದ್ರವು ಸ್ವತಂತ್ರವಾಗಿ ಕೆಲಸ ಮಾಡಿ, ಬಲಿಷ್ಠವಾಗಬೇಕಾಗುತ್ತದೆ. ವಿದ್ವಾಂಸರು, ಸರ್ಕಾರೇತರ ಸಂಸ್ಥೆಗಳ ಸಲಹೆ, ಸರ್ಕಾರದ ಬೆಂಬಲ ಎಲ್ಲರೂ ಇದಕ್ಕೆ ಬೇಕು. ಇಂದು ಗಟ್ಟಿಗೊಳಿಸಿ, ಮುಂದಕ್ಕೆ ಕೊಂಡೊಯ್ಯಬೇಕು. ಹೆಚ್ಚು ಹೆಚ್ಚು ಪುಸ್ತಕಗಳು ಬರಬೇಕು. ಇದರಲ್ಲಿ ಸಂಶೋಧಕರ ಪಾತ್ರ ಬಹಳ ದೊಡ್ಡದಿದೆ. ಈ ವಿಚಾರವನ್ನು ಸಂಶೋಧಕರು ಗಂಭೀರವಾಗಿ ಯೋಚಿಸಬೇಕು. ಯೋಜನೆಯ ಸಾಧ್ಯಾಸಾಧ್ಯತೆಯನ್ನು ಮನಸ್ಸಿಗೆ ತೆಗೆದುಕೊಂಡು ನಿರಂತರ ದುಡಿಮೆ ಇರಬೇಕು. ಹಾಗಾದರೆ ಮಾತ್ರ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಅಭಿವೃದ್ಧಿ ಸಾಧ್ಯ. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಎಲ್ಲರೂ ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂದರು.

ಕನ್ನಡದ ಕೆಲಸ, ಬರವಣಿಗೆ, ಮಾತು ಇವು ಒಂದು ಮಧುರ ಬಂಧವಾಗಿ ನಮ್ಮನ್ನು ಬಿಡದೆ ಆವರಿಸಿದೆ. ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಆರಂಭಕ್ಕೆ ಅನೇಕ ಸ್ನೇಹಿತರ ಜೊತೆಗೆ ನನ್ನ ಹೋರಾಟವೂ ಇತ್ತು. ಇಂದು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನೆಗಳು ಮತ್ತು ಮುನ್ನಡೆಸುವುದು ಬಹಳ ಮುಖ್ಯ ಎಂದು ತಿಳಿಸಿದರು.



ಇಂದಿನಿಂದ 'ಉಲಿ ಉಯ್ಯಾಲೆ' ಆಕಾಶವಾಣಿ ಸರಣಿ ಕಾರ್ಯಕ್ರಮ

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವು ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಸಂಬಂಧಿಸಿದಂತೆ 'ಉಲಿ ಉಯ್ಯಾಲೆ' ಬಾನುಲಿಗಾಗಿ ಸಿದ್ಧಪಡಿಸಿದ 'ಉಲಿ ಉಯ್ಯಾಲೆ' ಬಾನುಲಿ ಸರಣಿ ಕಾರ್ಯಕ್ರಮಕ್ಕೆ ಇದೇ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮ ಪ್ರತೀ ಮಂಗಳವಾರ ಬೆಳಗ್ಗೆ 8.30 ಗಂಟೆಗೆ ಆಕಾಶವಾಣಿಯಲ್ಲಿ ರಾಜ್ಯ ವ್ಯಾಪಿ ಪ್ರಸಾರವಾಗಲಿದೆ.

2008ರ ಅ.31ರಂದು ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಅತ್ಯುನ್ನತ ಮಾನ್ಯತೆ ಘೋಷಣೆಯಾಗಿತ್ತು. ಆ ನಂತರದಲ್ಲಿ ಕೇಂದ್ರವನ್ನು ಎಲ್ಲಿ ಸ್ಥಾಪನೆ ಮಾಡಬೇಕು ಎಂಬ ಬಗ್ಗೆ ಚರ್ಚೆಗಳು ನಡೆದವು. ಬೆಂಗಳೂರಿನಲ್ಲಿ ಸ್ಥಾಪಿಸುವ ಕುರಿತು ಕೂಗೆದ್ದಿತು. ಆಗ ನಾನು, ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರ ಮೈಸೂರಿನಲ್ಲೇ ಸ್ಥಾಪನೆಯಾಗಬೇಕು ಎಂದು ದನಿ ಎತ್ತಿದೆ. ಬೆಂಗಳೂರಿನಲ್ಲೇಕೆ? ಮೈಸೂರಿಗಿಂತಲೂ ಉತ್ತಮ ಜಾಗ ಎಲ್ಲಿದೇ? ಎಂದು ತಾವು ಪ್ರಶ್ನಿಸಿದ್ದನ್ನು ಸ್ಮರಿಸಿದರು.

ಆಡಳಿತ, ಶೋಧನೆ, ಪ್ರಕಟಣೆಗಳು, ಪ್ರಯೋಜನಕಾರಿಯಾಗಿ ಮಾಡುವುದು ಸಂಶೋಧಕರು ಮತ್ತು ಯೋಜನಾ ನಿರ್ದೇಶಕರ ಕೈಯ್ಯಲ್ಲಿದೆ ಎಂದ ಅವರು, ಇಲ್ಲಿನ ಪ್ರಕಟಣೆ ವಿಚಾರದಲ್ಲಿ ನಾವು ಅಷ್ಟು ವೇಗದಲ್ಲಿ ಸಾಗುತ್ತಿಲ್ಲ ಎನಿಸುತ್ತಿದೆ. ಈ ವಿಚಾರಗಳನ್ನು ಹಿರಿಯ ಸಾಹಿತಿಗಳು, ವಿದ್ವಾಂಸರು ಕೂಡ ಹಲವು ಬಾರಿ ಹೇಳಿದ್ದನ್ನು ಕೇಳಿದ್ದೇವೆ ನಾನೂ ಕೂಡ ಇಂತಹ ಮಾತುಗಳನ್ನು ಹೇಳಿ ಹೇಳಿ ಸಾಕಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಶಾಸ್ತ್ರೀಯ ಕನ್ನಡ ನವೀಕೃತ ಜಾಲತಾಣ ಅನಾವರಣ, ಕನ್ನಡ ನಾಡು, ನುಡಿ ಸಂಸ್ಕೃತಿಗೆ ಸಂಬಂಧಿಸಿದಂತೆ ಬಾನುಲಿಗಾಗಿ ಸಿದ್ಧಪಡಿಸಿದ ಸರಣಿ ಕಾರ್ಯಕ್ರಮ 'ಉಲಿ ಉಯ್ಯಾಲೆ' ಸರಣಿ ಕಾರ್ಯಕ್ರಮಕ್ಕೆ ಚಾಲನೆ, ಶಾಸ್ತ್ರೀಯ ಕನ್ನಡ; ಸ್ಥಾವರ ಜಂಗಮ 'ದೇಸಿಯೋಳ್ ಪುಗುವುದು' ಪ್ರಚಾರೋಪನ್ಯಾಸ ಮಾಲಿಕೆಯ ಚಾಲನೆ, 'ಅರಿವ ತೇಜದಿ' ಬಾಹ್ಯ ಸಂಶೋಧನೆ ಯೋಜನೆಗಳಿಗೆ ಚಾಲನೆ ಇತ್ಯಾದಿ ನೆರವೇರಿಸಲಾಯಿತು.

ಕಾರ್ಯಕ್ರಮದ ನಡುವೆ ಮೈಸೂರು ಭಾರತೀಯ ಭಾಷಾ ಸಂಸ್ಥಾನದ ನಿವೃತ್ತ ಪ್ರಾಚಾರ್ಯ, ಸಂಶೋಧನಾಧಿಕಾರಿಗಳಾದ ಪ್ರೊ.ಭ.ಮಲ್ಲಿಕಾರ್ಜುನ, ಡಾ.ಎಂ.ಬಾಲಕುಮಾರ್ ಅವರನ್ನು ಸನ್ಮಾನಿಸಲಾಯಿತು. ಇದಕ್ಕೂ ಮೊದಲು ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಬಿ. ಶಿವರಾಮಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಕೇಂದ್ರವು 14 ವರ್ಷಗಳಲ್ಲಿ ನಡೆದು ಬಂದ ದಾರಿ ಹಾಗೂ ಮುಂದೆ ಕೇಂದ್ರದಿಂದ ಕೈಗೊಳ್ಳಲಿರುವ ಕಾರ್ಯಕ್ರಮ, ಯೋಜನೆಗಳ ಮಾಹಿತಿ ನೀಡಿದರು.

ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಅಧ್ಯಕ್ಷತೆ ವಹಿಸಿದ್ದರು. ಭಾರತೀಯ ಭಾಷಾ ಸಂಸ್ಥಾನದ ಶಾಸ್ತ್ರೀಯ ಭಾಷೆಗಳ ಮುಖ್ಯಸ್ಥ ಮತ್ತು ಉಪ ನಿರ್ದೇಶಕ ಪ್ರೊ.ಸಿ.ವಿ.ಶಿವರಾಮ ಕೃಷ್ಣ ಸ್ವಾಗತಿಸಿದರು.

14 ವರ್ಷಗಳ ವನವಾಸ ಮುಗಿದಿದೆ.. ರಾಜ್ಯ ಕಟ್ಟುವ ಕೆಲಸ ಮಾಡೋಣ

ಶಾಸ್ತ್ರೀಯ ಕನ್ನಡ ಭಾಷಾ ಕೇಂದ್ರಕ್ಕೆ 14 ವರ್ಷ ಕಳೆದಿದೆ. ಅಂದರೆ 14 ವರ್ಷಗಳ ಅಜ್ಞಾತವಾಸ, ವನವಾಸ ಎಂದು ತಿಳಿದುಕೊಂಡು, ಈಗ ರಾಜ್ಯ ಕಟ್ಟುವ ಕೆಲಸ ಆಗಬೇಕಿದೆ. ಮುಂದೆ ಒಳ್ಳೆಯ ಕೆಲಸಗಳು ಆಗುತ್ತವೆಂಬ ಭರವಸೆ ಇದೆ. ಇನ್ನು ಮುಂದೆ ನಿಷ್ಕ್ರಿಯವಾಗಿ ಇರಲು ಸಾಧ್ಯವೇ ಇಲ್ಲ. ಸಾರ್ಥಕವಾದ ಹೆಜ್ಜೆಗಳು ಆಗುತ್ತವೆ ಎಂಬ ವಿಶ್ವಾಸವಿದೆ.

- ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರಿ, ಹಿರಿಯ ಸಾಹಿತಿ

ದಾಖಲೀಕರಣ, ಸಂಶೋಧನೆ, ಪ್ರಸರಣ ಮತ್ತು ಬೋಧನೆ ಎಂಬ ನಾಲ್ಕು ಆಯಾಮದಲ್ಲಿ ಕೇಂದ್ರ ಕಾರ್ಯನಿರ್ವಹಣೆ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಜಾನಪದ ಗೀತೆಗಳನ್ನು 30 ದಿನಗಳ ಕಾಲ ಹಾಡಿಸಿ ದೃಶ್ಯ ಮತ್ತು ಶ್ರವ್ಯ ಮೂಲಕ ಶಾಸ್ತ್ರೀಯವಾಗಿ ದಾಖಲೀಕರಣ ಮಾಡಲಾಗಿದೆ. 2016ರಿಂದ 2021ರ ವರೆಗೆ 31 ಸಂಶೋಧನೆ ಮಾಡಲಾಗಿದೆ. ಇನ್ನೂ 13 ಯೋಜನೆಗಳನ್ನು ರೂಪಿಸಿದ್ದು, ಕಾಲಮಿತಿಯಲ್ಲಿ ಅದನ್ನೂ ಮುಗಿಸಲಾಗುವುದು. ಶಾಸ್ತ್ರೀಯತೆ ನಿಲುಗಡೆಯಲ್ಲ, ಅದು ಕಾಲಸ್ತಂಭನವೂ ಅಲ್ಲ. ಪರಂಪರೆಯ ಮುಂದುವರಿಯುವ ಸ್ಥಿತಿ. ಹಳೆಯ ಚಹರೆಯೊಂದಿಗೆ ಹೊಸತನವನ್ನು ರೂಪಿಸಿಕೊಳ್ಳುವುದು. ಈ ನೆಲೆಗಟ್ಟಿನಲ್ಲಿ ಕೇಂದ್ರದ ಕೆಲಸ-ಕಾರ್ಯಗಳು ನಡೆಯುತ್ತಿವೆ.

- ಪ್ರೊ.ಬಿ. ಶಿವರಾಮಶೆಟ್ಟಿ, ಕೇಂದ್ರದ ಯೋಜನಾ ನಿರ್ದೇಶಕ

ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಪ್ರಧಾನಿ ಇಂದಿರಾಗಾಂಧಿ ಸ್ಮರಣೆ



ಮೈಸೂರು, ಅ.31(ಆರ್‌ಕೆಬಿ)- ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಅವರ ಪುಣ್ಯಸ್ಮರಣೆ ಅಂಗವಾಗಿ ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ಇಂದಿರಾಗಾಂಧಿಯವರ ಭಾವಚಿತ್ರಕ್ಕೆ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮಹಿಳಾ ಕಾಂಗ್ರೆಸ್ ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ನಗರಾಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಉಪಾಧ್ಯಕ್ಷ ಶಿವಕುಮಾರ್, ಮುಖಂಡ ಕೆ.ಹರೀಶ್ ಗೌಡ ಇನ್ನಿತರರು ಪುಷ್ಪನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮುಖಂಡರು ಇಂದಿರಾಗಾಂಧಿ ಅವರ ಆಡಳಿತ ಅವಧಿಯಲ್ಲಿನ ಜನಪರ ಯೋಜನೆಗಳ ಬಗ್ಗೆ ಗುಣಗಾನ ಮಾಡಿದರು. ಕೆಪಿಸಿಸಿ ವಕ್ತಾರರಾದ ಮಂಜುಳಾ ಮಾನಸ, ಕಾಂಗ್ರೆಸ್ ನಗರ ಉಪಾಧ್ಯಕ್ಷ ಭಾಸ್ಕರ್ ಗೌಡ, ಪ್ರಧಾನ ಕಾರ್ಯದರ್ಶಿ ಈಶ್ವರ ಚಕ್ಕಡಿ, ರಾಜ್ಯ ಕಾರ್ಯದರ್ಶಿ ರಫೀಕ್ ಅಲಿ, ನಗರಪಾಲಿಕೆ ಮಾಜಿ ಸದಸ್ಯರಾದ ಎಂ.ಚಿಕ್ಕಣ್ಣ, ನಾಗಭೂಷಣ್, ನಗರ ಉಪಾಧ್ಯಕ್ಷ ಗೋಪಿನಾಥ್, ಕಾರ್ಮಿಕ ವಿಭಾಗದ ರಾಜ್ಯ ಕಾರ್ಯದರ್ಶಿ ನಾಗರಾಜ್, ಚಾಮರಾಜ ವಿಭಾಗದ ಉಸ್ತುವಾರಿ ಸಂತೋಷ್, ದೊಡ್ಡ ಮರೀಗೌಡ, ಪದವೀಧರ ಮತ್ತು ಶಿಕ್ಷಕರ ಘಟಕದ ಕಾರ್ಯದರ್ಶಿ ಮೆಲ್ವಿನ್, ಸೇವಾದಳದ ಮಾಜಿ ಅಧ್ಯಕ್ಷ ಗಿರೀಶ್, ಮುಖಂಡರಾದ ಜಿ.ಸಿದ್ದರಾಜು, ಆರ್.ಹೆಚ್. ಕುಮಾರ್, ಕಾಂಗ್ರೆಸ್ ಎಸ್‌ಸಿ ಘಟಕದ ಕೆ.ಅರುಣ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು, ಮಂಡ್ಯ, ಕೊಡಗು, ಚಾ.ನಗರದಲ್ಲಿ ಮೋಡ ಕವಿದ ವಾತಾವರಣ

ಇಂದಿನಿಂದ ಐದು ದಿನ ತುಂತುರು ಮಳೆ ಸಾಧ್ಯತೆ

ಮೈಸೂರು, ಅ.31(ಆರ್‌ಕೆಬಿ)- ಹವಾಮಾನ ಮುನ್ಸೂಚನೆ ಪ್ರಕಾರ ಮೈಸೂರು, ಕೊಡಗು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ನ.1ರಿಂದ 5ರವರೆಗೆ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಆಗುವ ಸಾಧ್ಯತೆ ಇದೆ. ಈ ಐದು ದಿನಗಳ ಅವಧಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಒಟ್ಟು 22 ಮಿ.ಮೀ., ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯಲ್ಲಿ 16 ಮಿ.ಮೀ., ಕೊಡಗು ಜಿಲ್ಲೆಯಲ್ಲಿ 11 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ.



ಈ ಅವಧಿಯಲ್ಲಿ ಉಷ್ಣಾಂಶ ಸ್ವಲ್ಪ ಕಡಿಮೆ ಇರಲಿದ್ದು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಗರಿಷ್ಠ 27-28 ಡಿಗ್ರಿ ಸೆಲ್ಸಿಯಸ್, ಕನಿಷ್ಠ 20-21 ಡಿಗ್ರಿ ಸೆಲ್ಸಿಯಸ್, ಕೊಡಗಿನಲ್ಲಿ ಗರಿಷ್ಠ 25-26, ಕನಿಷ್ಠ 28-19 ಡಿಗ್ರಿ ಸೆಲ್ಸಿಯಸ್, ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ 28-29 ಹಾಗೂ ಗರಿಷ್ಠ 19-20 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ ಎಂದು ನಾಗನಹಳ್ಳಿ ಗ್ರಾಮೀಣ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ. ದೀರ್ಘಾವಧಿ ಹವಾಮಾನ ಮುನ್ಸೂಚನೆಯ ಪ್ರಕಾರ ನ.4ರಿಂದ 10 ರವರೆಗೆ ಸರಾಸರಿ ಮಳೆಯಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಟಿ20 ವಿಶ್ವಕಪ್: ಐರ್ಲೆಂಡ್ ವಿರುದ್ಧ ಆಸೀಸ್‌ಗೆ ಜಯ

ಬ್ರಿಸ್ಬೇನ್, ಅ.31- ನಾಯಕ ಆರನ್ ಫಿಂಚ್ ಅವರ ಅರ್ಧಶತಕ ಹಾಗೂ ಬೌಲರ್‌ಗಳ ಶಿಸ್ತಿನ ದಾಳಿ ನೆರವಿನಿಂದ ಆಸ್ಟ್ರೇಲಿಯಾ, ಟಿ20 ವಿಶ್ವಕಪ್ ಟೂರ್ನಿಯಲ್ಲಿ ಐರ್ಲೆಂಡ್ ವಿರುದ್ಧ 42 ರನ್ ಜಯ ಸಾಧಿಸಿದೆ.

ಇಲ್ಲಿನ ಗಾಬಾ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 179 ರನ್ ಗಳಿಸಿತು. ತಂಡದ ಪರ ನಾಯಕ ಆರನ್ ಫಿಂಚ್ 63, ಮಿಚೆಲ್ ಮಾರ್ಷ್ 28, ಮಾರ್ಕಸ್ ಸ್ಟೋಯಿನಿಸ್ 35, ಟೀಮ್ ಡೇವಿಡ್ 15, ಮ್ಯಾಕ್ಸ್‌ವೆಲ್ 13 ರನ್ ಗಳಿಸಿದರು. ಐರ್ಲೆಂಡ್ ಪರ ಬ್ಯಾರಿ ಮೆಕಾರ್ಥಿ 3, ಜೋಶ್ ಲಿಟ್ಲ್ 2 ವಿಕೆಟ್ ಕಬಳಿಸಿದರು.

180 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಐರ್ಲೆಂಡ್ 18.1 ಓವರ್‌ಗಳಲ್ಲಿ 137 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಸೋಲು ಅನುಭವಿಸಿತು. ತಂಡದ ಪರ ಲಾರ್ಸನ್ ಟಕರ್ 71, ಪಾಲ್ ಸ್ಟರ್ಲಿಂಗ್, ಮಾರ್ಕ್ ಅಡೇರ್ 11, ಗರೆಥ್ ಡೆಲಾನಿ 14ರನ್ ಗಳಿಸಿದರು. ಆಸೀಸ್ ಪರ ಪ್ಯಾಟ್ ಕಮಿನ್ಸ್, ಗ್ಲೆನ್ ಮ್ಯಾಕ್ಸ್‌ವೆಲ್, ಮಿಚೆಲ್ ಸ್ಟಾರ್ಕ್ ಹಾಗೂ ಆಡಂ ಜಂಪಾ ತಲಾ 2, ಮಾರ್ಕಸ್ ಸ್ಟೋಯಿನಿಸ್ 1 ವಿಕೆಟ್ ಉರುಳಿಸಿದರು. ಆರೋನ್ ಫಿಂಚ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ನ.6, ಶಿಕ್ಷಕರ ಅರ್ಹತಾ ಪರೀಕ್ಷೆ

ಮೈಸೂರು, ಅ.31- ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ನ. 6 ರಂದು ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಮೈಸೂರು ಜಿಲ್ಲೆಯಲ್ಲಿನ ಅಭ್ಯರ್ಥಿಗಳಿಗಾಗಿ ಒಟ್ಟು 38 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದ್ದು, ಒಟ್ಟು ಅಭ್ಯರ್ಥಿಗಳ ಸಂಖ್ಯೆ 10102 ಆಗಿದ್ದು ಇದರಲ್ಲಿ ಮೊದಲ ಅಧಿವೇಶನಕ್ಕೆ 7,136, ಎರಡನೇ ಅಧಿವೇಶನಕ್ಕೆ 10102 ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಳ್ಳುತ್ತಿದ್ದಾರೆ. ಅಭ್ಯರ್ಥಿಗಳು ತಮ್ಮ ತಮ್ಮ ಪರೀಕ್ಷಾ ಕೇಂದ್ರವನ್ನು ಮೊದಲೇ ಗುರುತಿಸಿಕೊಳ್ಳಬೇಕು. ಪ್ರತಿ ಪರೀಕ್ಷಾ ಕೇಂದ್ರದಲ್ಲೂ ತನಿಖಾ ಜಾಗೃತ ದಳದ ಸದಸ್ಯರನ್ನು ನಿಯೋಜಿಸಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಂಕ್ರಾಮಿಕ ಕೋವಿಡ್ ನಂತರ ಸಂಕಷ್ಟ ಮೆಟ್ಟಿ ಆರ್ಥಿಕ ಸ್ವಾವಲಂಬನೆಯತ್ತ ಹೆಜ್ಜೆ

ಬಡ ಮಹಿಳೆಯರ ಪ್ರಗತಿಯ ಪ್ರತೀಕ ಪರೋಟ ಕಾರ್ಟ್

- ಕೂಗು ಫೌಂಡೇಷನ್ ನೆರವಿನಲ್ಲಿ ಪರೋಟ ವಹಿವಾಟು
- ರೋಟರಿ ಸೆಂಟ್ರಲ್ ಮೈಸೂರು ವತಿಯಿಂದ ಗಾಡಿ, ಮಿಕ್ಸರ್, ವಾಟರ್ ಪ್ಯೂರಿಫೈಯರ್ ಕೊಡುಗೆ

ಮೈಸೂರು,ಅ.31(ಪಿಎಂ)- ಹಲವು ಸಂಕಷ್ಟಗಳನ್ನು ಮೆಟ್ಟಿ ನಿಂತು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ಸಂಕಲ್ಪ ತೊಟ್ಟ ಬಡ ಮಹಿಳೆಯರ ತಂಡವೊಂದರ ಯಶೋಗಾಥೆ ಇದು.

ಮೈಸೂರಿನ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶಗಳಲ್ಲಿ ಕೋವಿಡ್ ಸೋಂಕಿನಿಂದ ತಮ್ಮ ಕುಟುಂಬದ ಆಧಾರಸ್ತಂಭವಾಗಿದ್ದ ಪತಿಯರನ್ನು ಕಳೆದುಕೊಂಡ 11 ಮಂದಿ ಮಹಿಳೆಯರ ತಂಡ, ಕೂಗು ಫೌಂಡೇಷನ್ ಸ್ವಯಂಸೇವಾ ಸಂಸ್ಥೆಯ ಆಶ್ರಯದಲ್ಲಿ ಸ್ವಯಂ ಉದ್ಯೋಗದೊಂದಿಗೆ ಬದುಕು ಕಟ್ಟಿಕೊಳ್ಳುತ್ತಿದೆ.

ಗಂಡಂದಿರನ್ನು ಕಳೆದುಕೊಂಡು ಜೀವನ ಸಾಗಿಸುವುದು ಹೇಗೆಂದು ಕಂಗೆಟ್ಟಿದ್ದ ಮಹಿಳೆಯರಿಗೆ ಕೂಗು ಫೌಂಡೇಷನ್ ಕೈಹಿಡಿದಿದೆ. ಈ ಫೌಂಡೇಷನ್ ಸಹ ಸಂಸ್ಥಾಪಕಿ ಡಾ.ನಂದಿನಿ ಕೇಶವ್, ಪರೋಟ ವಹಿವಾಟು ನಡೆಸಲು ನೆರವಾಗಿದ್ದಾರೆ. ಪರೋಟ ತಯಾರಿಸಿ ಮನೆ ಮನೆಗೆ ಮಾರಾಟ ಮಾಡುತ್ತಿದ್ದ ಈ ಮಹಿಳೆಯರ ಗುಂಪು, ಇದರಿಂದ ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಿತು.

ಇದರಿಂದ ಉತ್ತೇಜನಗೊಂಡ ಈ ಮಹಿಳಾ ತಂಡ, ಇದೀಗ ಮೈಸೂರಿನ ವಿವಿ ಮೊಹಲ್ಲಾದ ಲಾಯಲ್ ವರ್ಲ್ಡ್ ಸೂಪರ್ ಮಾರ್ಕೆಟ್ ಸಮೀಪ, ಟೆಂಪಲ್ ರಸ್ತೆಯ ಬದಿಯಲ್ಲಿ ಪರೋಟ ಕಾರ್ಟ್ (ಪರೋಟ ಗಾಡಿ) ಮೂಲಕ ಮಾರಾಟ ಮಳಿಗೆಯನ್ನು ಆರಂಭಿಸಿ ತನ್ನ ವಹಿವಾಟು ವಿಸ್ತರಿಸಿದೆ. ಅಲ್ಲದೆ, ಪರೋಟ ವಹಿವಾಟಿನ ಮೂಲಕ ಪರಿಶ್ರಮದಿಂದ ಮುನ್ನಡೆಯಬೇಕೆಂಬ ಈ ಮಹಿಳೆಯರ ಗುಂಪಿಗೆ ರೋಟರಿ ಸೆಂಟ್ರಲ್ ಮೈಸೂರು ವತಿಯಿಂದ ಕಾರ್ಟ್ (ಗಾಡಿ), ಮಿಕ್ಸರ್ ಮತ್ತು ವಾಟರ್ ಪ್ಯೂರಿಫೈಯರ್ (ನೀರು ಶುದ್ಧೀಕರಿಸುವ ಯಂತ್ರ) ಅನ್ನು ಕೊಡುಗೆಯಾಗಿ ನೀಡಲಾಗಿದೆ.


ಕೂಗು ಫೌಂಡೇಷನ್ ಮತ್ತು ರೋಟರಿ ಸೆಂಟ್ರಲ್ ಮೈಸೂರು ಜಂಟಿ ಆಶ್ರಯದಲ್ಲಿ ಸೋಮವಾರ ಪರೋಟ ಕಾರ್ಟ್ ಮಳಿಗೆಗೆ ಚಾಲನೆ ನೀಡಲಾಯಿತು. ಪತ್ರಕರ್ತೆ ರಶ್ಮಿ ಕೋಟಿ, ಟೇಪ್ ಕತ್ತರಿಸಿ ಶುಭ ಹಾರೈಸುವ ಮೂಲಕ ನೂತನ ರೀತಿಯ ಪರೋಟ ವಹಿವಾಟಿಗೆ ಚಾಲನೆ ನೀಡಿದರು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ವೈದ್ಯರೂ ಆದ ಭರತನಾಟ್ಯ ಕಲಾವಿದೆ ಡಾ.ನಂದಿನಿ ಕೇಶವ್, ಮೈಸೂರು ಸುತ್ತಮುತ್ತಲ ಗ್ರಾಮೀಣ ಪ್ರದೇಶದಲ್ಲಿ ಕೋವಿಡ್ ಸೋಂಕಿನಿಂದ ತಮ್ಮ ಪತಿಯರನ್ನು ಕಳೆದುಕೊಂಡು ಸಂಕಷ್ಟ ಅನುಭವಿಸುತ್ತಿದ್ದ 11 ಮಹಿಳೆಯರನ್ನು, ಕೂಗು ಫೌಂಡೇಷನ್‌ನಿಂದ ಗುರುತಿಸಿ, ಅವರು ಆರ್ಥಿಕವಾಗಿ ಸ್ವಾವಲಂಬಿಯಾಗಲು ನೆರವಾಗುತ್ತಿದೆ. ಮೊದಲಿಗೆ ಈ ಮಹಿಳೆಯರ ಗುಂಪು ಪರೋಟ ತಯಾರಿಸಿ ಮನೆ ಮನೆಗೆ ಹೋಗಿ ಮಾರಾಟ ಮಾಡುತ್ತಿತ್ತು. ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು ಎಂದು ತಿಳಿಸಿದರು.

ಮನೆ ಮನೆಗೆ ಮಾರಾಟ ಮಾಡುವುದರಿಂದ ದಿನಕ್ಕೆ ತಲಾ 400 ರೂ.ನಿಂದ 500 ರೂ.ವರೆಗೆ ಈ ಮಹಿಳೆಯರು ದುಡಿಯುತ್ತಿದ್ದರು. ಇದೀಗ ಇವರ ವಹಿವಾಟಿಗೆ ನೂತನ ಸ್ವರೂಪ ನೀಡಲಾಗಿದೆ. ನಮ್ಮ ಫೌಂಡೇಷನ್ ವತಿಯಿಂದ ಇನ್ನು ಮೂರು ತಿಂಗಳು ಕಾಲ ಆರ್ಥಿಕವಾಗಿ ಇವರಿಗೆ ನೆರವಾಗುತ್ತೇವೆ ಆನಂತರ ಅವರೇ ವಹಿವಾಟು ಮುನ್ನಡೆಸುತ್ತಾರೆ. ಜೊತೆಗೆ ಈ ಮಹಿಳೆಯರು ತಮ್ಮಂತೆಯೇ ಆರ್ಥಿಕವಾಗಿ ಹಿಂದುಳಿದ ಮಹಿಳೆಯರನ್ನು ಸಂಘಟಿಸಿ ತಮ್ಮ ವಹಿವಾಟಿನೊಂದಿಗೆ ಜೋಡಿಸಿ ಅವರನ್ನು ಮುನ್ನಡೆಸುವ ಉದ್ದೇಶ ಹೊಂದಿದ್ದಾರೆ ಎಂದರು.

ನಂಜನಗೂಡಿನ ಹದಿನಾರು ಗ್ರಾಮದಲ್ಲಿ ನಮ್ಮ ಫಾರ್ಮ್ ಇದೆ. ಇಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಮಹಿಳೆಯರೊಂದಿಗೆ ಹಲವು ಮಹಿಳೆಯರು ಸೇರಿಕೊಂಡು ಈ ಪರೋಟ ವಹಿವಾಟು ಆರಂಭಿಸಿದರು. ನಮ್ಮ ಫಾರ್ಮ್‌ನಲ್ಲಿ ಪರೋಟದ ಪಲ್ಯಕ್ಕೆ ಬೇಕಾದ ತರಕಾರಿ ಬೆಳೆಯಲು ಸ್ಥಳಾವಕಾಶ ನೀಡಿದ್ದೇವೆ. ನಮ್ಮ ಫಾರ್ಮ್‌ನಲ್ಲಿ ಬೆಳೆಯುವ ತರಕಾರಿ ಸಂಪೂರ್ಣ ಸಾವಯವ ಕೃಷಿ ಪದ್ಧತಿಯಡಿ ಬೆಳೆಯಲಾಗುತ್ತಿದೆ. ಗೋಧಿಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಯಾದವಗಿರಿಯ ನಮ್ಮ ಸಂಬಂಧಿಕರ ಮನೆಯ ನೆಲಮಾಳಿಗೆಯಲ್ಲಿ ಈಗ ಪರೋಟ ತಯಾರಿಸಲು ಇವರಿಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ದಿನಕ್ಕೆ 300ರಿಂದ 325 ಪರೋಟ ತಯಾರು ಮಾಡಲಿದ್ದಾರೆ. ಇದು ಶುದ್ಧ ಸಸ್ಯಾಹಾರಿ ಪರೋಟವಾಗಿದೆ. ಈ ಮಹಿಳಾ ಗುಂಪಿನ ವಹಿವಾಟಿಗೆ ರೋಟರಿ ಸೆಂಟ್ರಲ್ ಮೈಸೂರು ಅಧ್ಯಕ್ಷ ಡಾ.ಪ್ರತಾಪ್ ಶೆಟ್ಟಿ ಮತ್ತು ಅವರ ತಂಡ ಸಹಕಾರ ನೀಡಿದೆ. ಅದಕ್ಕಾಗಿ ಅವರಿಗೆ ಧನ್ಯವಾದ ಅರ್ಪಿಸುವುದಾಗಿ ಡಾ.ನಂದಿನಿ ಕೇಶವ್ ಹೇಳಿದರು. ರೋಟರಿ ಸೆಂಟ್ರಲ್ ಮೈಸೂರು ಚುನಾಯಿತ ಅಧ್ಯಕ್ಷ ಎನ್. ಉಮೇಶ್, ಕಾರ್ಯದರ್ಶಿ ಸಚ್ಚಿದಾನಂದ ಹೆಗ್ಡೆ, ಮಾಜಿ ಅಧ್ಯಕ್ಷ ವಿವೇಕ್ ಅತ್ತಾವರ್, ಪದಾಧಿಕಾರಿ ಸಮರ್ಥ ವೈದ್ಯ, ಸದಸ್ಯರಾದ ಸೌಜನ್ಯ ರಾಮ್‌ಮೋಹನ್, ಚಂದ್ರಿಕಾ ಸುಧೀರ್, ಮೀರಾ ಮತ್ತಿತರರು ಹಾಜರಿದ್ದರು.



ಬಾಳೆಎಲೆಯಲ್ಲಿ ಪರೋಟ ಪ್ಯಾಕಿಂಗ್

ಐದಾರು ವಿಧದ ಪ್ಯಾಕ್‌ಗಳಲ್ಲಿ ಪರೋಟ ಮಾರಾಟ ಮಾಡಲಾಗುತ್ತದೆ. ಜೊತೆಗೆ ಅವುಗಳನ್ನು ಬಾಳೆ ಎಲೆಗಳಲ್ಲಿ ಸುತ್ತಿ ಬಾಳೆ ನಾರಿನ ದಾರದಿಂದ ಕಟ್ಟಿಕೊಡುವುದು ವಿಶೇಷ ಈ ಮಹಿಳೆಯರ ಗುಂಪಿನ ಸದಸ್ಯೆ ಮಹಾದೇವಿ ತಮ್ಮ ಹೊಸ ವೃತ್ತಿಯ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು.

ನನ್ನ ಪತಿ ನಿಧನರಾದಾಗ, ಇಬ್ಬರು ಚಿಕ್ಕ ಮಕ್ಕಳೊಂದಿಗೆ ಜೀವನ ಸಾಗಿಸುವುದು ಹೇಗೆಂಬ ಆತಂಕದಲ್ಲಿದ್ದೆ. ನಾವು ಈಗ ಗೌರವಯುತ ಜೀವನ ನಡೆಸಲು ಸಾಧ್ಯವಾಗಿದೆ. ನಾವು ಈ ವಹಿವಾಟಿನಲ್ಲಿ ಬೆಳೆದಂತೆ ನಮ್ಮ ಗುಂಪಿನ ಪ್ರತಿಯೊಬ್ಬರೂ ನಮ್ಮಂತಹ ಇನ್ನಷ್ಟು ಮಹಿಳೆಯರನ್ನು ಮುನ್ನಡೆಸುವ ಆಶಯ ಹೊಂದಿದ್ದೇವೆ. ನಮ್ಮ ಜೀವನ ಸುಧಾರಣೆಗೆ ನೆರವಾಗುತ್ತಿರುವ ಕೂಗು ಫೌಂಡೇಷನ್‌ಗೆ ಧನ್ಯವಾದ ಅರ್ಪಿಸುತ್ತೇನೆಂದು 'ಮೈಸೂರು ಮಿತ್ರ'ನಲ್ಲಿ ಹೇಳಿದರು.

ಗುಂಪಿನ ಮತ್ತೊಬ್ಬ ಸದಸ್ಯ ಕಮಲಾ ಸಿದ್ದೇಗೌಡ ಮಾತನಾಡಿ, ಕೂಗು ಫೌಂಡೇಷನ್ ಕಳೆದ ಮೂರು ತಿಂಗಳಿಂದ ನಮ್ಮ ನೆರವಿಗೆ ನಿಂತಿದೆ. ಈ ವಹಿವಾಟಿನ ದಾರಿ ತೋರಿದ ಹಿನ್ನೆಲೆಯಲ್ಲಿ ನಮಗೆ ತುಂಬ ಅನುಕೂಲವಾಗಿದೆ ಕುಟುಂಬ ನಿರ್ವಹಣೆಗೆ ಒಂದು ದಾರಿಯಾಗಿದೆ ತಿಳಿಸಿದರು. ಪರೋಟ ಆರ್ಡರ್ ಮಾಡಲು ಮೊಸಂ. 90193-15419 ಅನ್ನು ಸಂಪರ್ಕಿಸಬಹುದು.

ಮೈಸೂರು ಮಿತ್ರ





ಡಾ. ಗುಬ್ಬಿಗೂಡು ರಮೇಶ್
ಮೊ : 9742934512

ಸಾಂಸ್ಕೃತಿಕ ಸಾಮಿಪ್ಯಗಳೇ ನಮಗೆ ದಾರಿದೀಪ

"ಕಾಸರಗೋಡಿನ ಕನ್ನಡಿಗನಿಗೆ ಅವನೆಲ್ಲಿದ್ದಾನೆನ್ನುವುದೇ ಗೊತ್ತಿಲ್ಲ? ಅದು ಕೇರಳದವರಿಗೂ ಬೇಡ, ನಮಗೂ ಬೇಡ, ಅಲ್ಲಿರುವ ಕನ್ನಡ ಶಾಲೆಯ ಸಮಸ್ಯೆಯೇ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು ಎನ್ನುವ ಹೆಸರಲ್ಲಿ ಸದ್ದು ಮಾಡುತ್ತಿದೆ. ಮಾಲೂರು, ಕೋಲಾರ ಕರ್ನಾಟಕವೇ ಆದರೂ ಜನ ಅಲ್ಲಿ ಮಾತಾಡುವುದೆಲ್ಲಾ ತೆಲುಗು, ಬಳ್ಳಾರಿ ತೆಲುಗು, ಸತ್ತೀಗಾಲ ಗೋಪಿನಾಥಂ ಬನ್ನಾರಿ ಗಡಿಗಳಲ್ಲಿ ತಮಿಳು, ಅದವಾನಿ, ಸೊಲ್ಲಾಪುರಗಳಲ್ಲಿ ಮರಾಠಿ, ಕಾಸರಗೋಡಿನ ಆಸುಪಾಸುಗಳಲ್ಲೆಲ್ಲಾ ಮಲಯಾಳಂ, ಹೀಗೆ ಗಡಿನಾಡುಗಳಲ್ಲಿರುವ ಅಕ್ಕಪಕ್ಕದ ರಾಜ್ಯಗಳ ರಾಜ್ಯ ಭಾಷೆಗಳು ಕನ್ನಡಿಗರ ಮೇಲೆ ಪ್ರಭಾವ ಬೀರುವುದಾದರೆ ಗಡಿನಾಡಿನ ಕನ್ನಡಿಗರು ತಮ್ಮ ಭಾಷೆಯನ್ನು ಗಡಿಯಲ್ಲೇ ಇರುವ ಕನ್ನಡೇತರರಿಗೆ ಕಲಿಸಲು ಏಕೆ ಸಾಧ್ಯವಾಗುತ್ತಿಲ್ಲ?

ಇಂದು ನಮಗೆ ಕನ್ನಡ ರಾಜ್ಯೋತ್ಸವವೆಂಬ ನಾಡ ಹಬ್ಬ. ಕನ್ನಡಿಗರ ಹಲವು ಕನಸುಗಳಿಗೆ, ಕನ್ನಡಮ್ಮನ ತೇರು ಕಣ್ತುಂಬಬೇಕಾದ ಸಾರ್ಥಕದ ಕ್ಷಣಗಳಿಗೆ ಕರುನಾಡು ಕಾದಿದೆ. ಮಣ್ಣುಗೂಡಿದ ಕರುನಾಡಿನ ಸಂಕಲ್ಪಗಳಿಗೆ ಜೀವ ತುಂಬಬೇಕಿದೆ. ನಮ್ಮ ಕನಸಿನ ನಾಡು ಕರುನಾಡು. ಇದಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಇಲ್ಲಿ ಸಾಹಿತ್ಯವಿದೆ. ಸಂಸ್ಕೃತಿಯಿದೆ. ಶ್ರೀಮಂತಿಕೆಯಿದೆ. ಕಲೆ, ನಾಟ್ಯ, ಶಿಲ್ಪ, ಭಾಷೆ, ಭಾವ–ಹೀಗೆ ಒಂದು ಜನಜೀವನ ಒಟ್ಟಿಗೆ ಬಾಳಲಿಕ್ಕೆ ಏನು ಬೇಕೋ ಅವೆಲ್ಲವೂ ಇಲ್ಲಿದೆ. ಎತ್ತರದ ನಿಲುವು ಚಿತ್ತದ ಚೆಲುವು ಎಷ್ಟಾದ್ರೂ ಕಾಣಬೇಕೆಂದರೆ ನೀವು ಭಾರತದ ಭೂಪಟದಲ್ಲಿ ಕರ್ನಾಟಕವನ್ನು ನೋಡಬೇಕು. ಇಡೀ ಇಂಡಿಯಾದಲ್ಲಿಯೇ ಅತಿ ಹೆಚ್ಚು ಪ್ರಾಕೃತಿಕ ಸಂಪತ್ತಿನಿಂದ ಕೂಡಿದ ಊರಿದು ಗಂಧದಗುಡಿ.

ಈ ನಾಡಿನ ಜನರ ಭಾಷೆ ಕನ್ನಡ, ಕರುನಾಡು ಇದರ ಹೆಸರು. ಅಂದರೆ ಕಪ್ಪುಮಣ್ಣಿನಿಂದ ಕೂಡಿದ ಭೂಪ್ರದೇಶದಲ್ಲಿ ವಾಸಿಸುವ ಜನರು ಒಂದು ನಿತ್ಯನೂತನ ಜನ ಜೀವನವೇ ಕರ್ನಾಟಕ. ಪಂಪನಿಂದ ಕುವೆಂಪುವರೆಗೆ ಈ ನಾಡಿನಲ್ಲಿ ಬರೆದವರಿದ್ದಾರೆ, ಹಾಡಿದವರಿದ್ದಾರೆ. ನಿಸ್ವಾರ್ಥವಾಗಿ ನಾಡುಕಟ್ಟಿ ಗತಿಸಿಹೋದ ಕನ್ನಡದ ರಾಜಮನೆತನಗಳಿವೆ. ಅದರ ಇತಿಹಾಸ ಶ್ರೀಮಂತಿಕೆಗಳು ಕನ್ನಡಿಗರಲ್ಲಿ ಉನ್ಮಾದ ಮತ್ತು ಹುಮ್ಮಸ್ಸನ್ನು ಹೆಚ್ಚುವಂತೆ ಮಾಡಿವೆ. ನಮ್ಮ ಮನೆಗಳಲ್ಲಿ ನಮ್ಮ ತಾತ ಮುತ್ತಾತ ಕಳ್ಳೇಪುರಿ ತಾತಂದಿರ ಚಿಕ್ಕದೊಂದು ಫೋಟೊ ಇಟ್ಟುಕೊಂಡು ವಂಶವೃಕ್ಷ ಬರೆಸುತ್ತೇವೆ. ಇನ್ನು ಆರು ಮುಕ್ಕಾಲು ಕೋಟಿ ಜನರನ್ನು ಹೊತ್ತು ನಿಂತ ಈ ನಾಡಿಗೆ ಒಂದು ಚರಿತ್ರೆ ಇರುವುದಿಲ್ಲವೇ? ಅಂಥಾ ಚರಿತ್ರೆಯಲ್ಲಿ ಈ ನಾಡು ಕಟ್ಟಿದ ಅಸಂಖ್ಯಾತರ ಹೆಸರು ದಾಖಲಾಗಿದೆ. ಇಂಥಾ ಕರುನಾಡು 1956ರ ನವೆಂಬರ್ 1 ರಂದು 19 ಜಿಲ್ಲೆಗಳೊಡನೆ ಮೈಸೂರು ರಾಜ್ಯವಾಗಿ ಉದಯಿಸಿತು. ಆನಂತರ 1973 ರಲ್ಲಿ ಕರ್ನಾಟಕವಾಯಿತು.

ಇಂಥ ಕರ್ನಾಟಕಕ್ಕೆ ಇಂದು ರಾಜ್ಯೋತ್ಸವದ ಸಂಭ್ರಮ. ನಮ್ಮ ಕಾಲದಲ್ಲೇ ಏಕೀಕೃತ ಆಂಧ್ರಪ್ರದೇಶವನ್ನು ವಿಭಜಿಸಿ ಸೀಮಾಂಧ್ರ ತೆಲಂಗಾಣವೆಂದು ಅಂಕಿತ ಹಾಕಿದಂತೆ ಮುಂದೊಂದು ದಿನ ಇದನ್ನೂ ವಿಭಜಿಸಬಹುದು. ಏನು ಬೇಕಾದರೂ ಆಗಬಹುದು. ಅದಾಗುವ ಮುನ್ನ ಕನ್ನಡ ಮನಸ್ಸುಗಳು ಒಂದಾಗಬೇಕು. ಅದು ಅಷ್ಟು ಸುಲಭದ ವಿಷಯವಾಗಿ ಕಾಣುತ್ತಿಲ್ಲ. ಕವಿರಾಜ ಮಾರ್ಗ ಬರೆದ ಮಾರ್ಗಕಾರ ತನ್ನ ಕವಿರಾಜಮಾರ್ಗದಲ್ಲಿ ಕನ್ನಡನಾಡು ಕಾವೇರಿಯಿಂದ ಗೋದಾವರಿ ನದಿಯ ವರೆಗೆ ಇತ್ತೆಂದು ದಾಖಲಿಸಿ ಬಿಟ್ಟಿದ್ದಾನೆ.

ಕಾವೇರಿಯಿಂದ ಮಾ
ಗೋದಾವರಿ ವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಲಯ ವಿಲೀನ ವಿಶದ ವಿಷಯ ವಿಶೇಷಂ॥

ಕೊಡಗಿನ ಕಾವೇರಿಯಿಂದ ಆಂಧ್ರಪ್ರದೇಶದಲ್ಲಿ ಹರಿಯುವ ಗೋದಾವರಿ ನದಿಯವರೆಗೂ ಕನ್ನಡನಾಡಿನ ಸೀಮೆ ಇತ್ತು ಎಂಬುದನ್ನು ಕೇಳಿದರೇನೆ ಕಿವಿಗೆ ಸುಖವೆನಿಸುತ್ತದೆ, ಮೈ ಜುಮ್ಮೆನ್ನುತ್ತದೆ. ನಮ್ಮ ರಾಜಪ್ರಭುತ್ವಗಳು ಗೋದಾವರಿಯಿಂದ ತಮ್ಮ ಜಾಗಗಳನ್ನು ಕಳೆದುಕೊಂಡು ತುಂಗಭದ್ರಾ ತೀರದವರೆಗೆ, ಭೀಮಾ ತೀರದವರೆಗೆ ಬಂದು ನಿಂತುಬಿಟ್ಟವು. ಈಗ ತುಂಗಭದ್ರಾ ತೀರದಿಂದ ಆ ಕಡೆಗೆ ಅಷ್ಟು, ಕಾವೇರಿ ಕಣಿವೆಯ ಈ ಕಡೆಗಿಷ್ಟು ಎಂದು ಪಾಲು ಕೇಳಲು ನಿಂತ ಮಂದಿ ಹೆಚ್ಚಾಗಿದ್ದಾರೆ. ಅವರೆಲ್ಲರೂ ನಮ್ಮವರೇ.

ಇಡೀ ದೇಶ ಭಾಷಾವಾರು ಪ್ರಾಂತ್ಯಗಳ ಹೆಸರಿನಲ್ಲಿ ವಿಭಜನೆಗೊಳ್ಳುವ ಮೊದಲು ಏಕೀಕರಣ ಚಳವಳಿ ನಡೆಸಿ ಮೊದಲು ಏಕೀಕರಣಗೊಂಡ ರಾಜ್ಯವಾಗಿ ಹೊರ ಹೊಮ್ಮಿದ ಕೀರ್ತಿ ಆಂಧ್ರಪ್ರದೇಶದ್ದು. ವಿಪರ್ಯಾಸವೆಂದರೆ ಇಡೀ ದೇಶದಲ್ಲಿಯೇ ಇಬ್ಭಾಗವಾಗಿ ಹೋದ ಅಪಕೀರ್ತಿಯೂ ಆ ರಾಜ್ಯಕ್ಕೇ ಸೇರಿತು. ಇಬ್ಭಾಗವಾದ ತರುವಾಯದಲ್ಲೇ ಪ್ರವಾಹ, ನೆರೆ ಮುಂತಾದ ಪ್ರಕೃತಿ ವಿಕೋಪಗಳಿಗೆ ತುತ್ತಾದ ಸೀಮಾಂಧ್ರದ ಕಥೆಯನ್ನು ನಾವು ಕಣ್ಣಾರೆ ಕಂಡಿದ್ದೇವೆ. ಮುಂದೆ ಕರ್ನಾಟಕಕ್ಕೂ ಈ ಮಾದರಿಯ ಕಷ್ಟಗಳು ಬರಕೂಡದು. ಕನ್ನಡ ಬಾವುಟ ಹಾರಿಸುವ ಸಂಭ್ರಮದ ಸಿದ್ಧತೆಯಲ್ಲಿರುವ ಕನ್ನಡಿಗರಿಗೆ ಬೆಳಗಾವಿ ಎರಡನೇ ರಾಜಧಾನಿಯಾಗಿ ಕನ್ನಡದ ಕಸುವನ್ನು ಬಿತ್ತಬೇಕಾಗಿದೆ.

ಇವತ್ತು ಬೆಂಗಳೂರು ನಮ್ಮ ಬೆಂಗಳೂರಾಗಿ ಉಳಿದೇ ಇಲ್ಲ. ಅದು ವಲಸಿಗರ ತವರು. ದೇಶದ ಎಲ್ಲ ರಾಜ್ಯದ ಜನ ಅಲ್ಲಿ ನೆಲೆಸಿದ್ದಾರೆ. ಬೆಂಗಳೂರಿನಲ್ಲಿ ವಾಸವಿರುವವರ ಬಾಯಲ್ಲಿ ಒಂದಕ್ಷರವೂ ತಪ್ಪಿಲ್ಲದಂತೆ ಒಂದು ಊರಿನ ಹೆಸರು ಹೇಳಿಸಿಬಿಟ್ಟರೆ ಸಾಕು, ಕನ್ನಡತಾಯಿ ಧನ್ಯೆ. ಅಷ್ಟರ ಮಟ್ಟಿಗೆ ಕನ್ನಡದ ಮೇಲೆ ಅನ್ಯಭಾಷೆಗಳ ಪ್ರಭಾವಗಳಾಗಿವೆ. ಸರಿಯಾಗಿ ಇನ್ನೂ ನಮಗೆ ಗಡಿಪ್ರದೇಶಗಳನ್ನೇ ಗಟ್ಟಿಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಕಾಸರಗೋಡಿನ ಕನ್ನಡಿಗನಿಗೆ ಅವನೆಲ್ಲಿದ್ದಾನೆನ್ನುವುದೇ ಗೊತ್ತಿಲ್ಲ? ಅದು ಕೇರಳದವರಿಗೂ ಬೇಡ, ನಮಗೂ ಬೇಡ, ಅಲ್ಲಿರುವ ಕನ್ನಡ ಶಾಲೆಯ ಸಮಸ್ಯೆಯೇ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು ಎನ್ನುವ ಹೆಸರಲ್ಲಿ ಸದ್ದು ಮಾಡುತ್ತಿದೆ. ಮಾಲೂರು, ಕೋಲಾರ ಕರ್ನಾಟಕವೇ ಆದರೂ ಜನ ಅಲ್ಲಿ ಮಾತಾಡುವುದೆಲ್ಲಾ ತೆಲುಗು, ಬಳ್ಳಾರಿ ತೆಲುಗು, ಸತ್ತೀಗಾಲ ಗೋಪಿನಾಥಂ ಬನ್ನಾರಿ ಗಡಿಗಳಲ್ಲಿ ತಮಿಳು, ಅದವಾನಿ, ಸೊಲ್ಲಾಪುರಗಳಲ್ಲಿ ಮರಾಠಿ, ಕಾಸರಗೋಡಿನ ಆಸುಪಾಸುಗಳಲ್ಲೆಲ್ಲಾ ಮಲಯಾಳಂ, ಹೀಗೆ ಗಡಿನಾಡುಗಳಲ್ಲಿರುವ ಅಕ್ಕಪಕ್ಕದ ರಾಜ್ಯಗಳ ರಾಜ್ಯ ಭಾಷೆಗಳು ಕನ್ನಡಿಗರ ಮೇಲೆ ಪ್ರಭಾವ ಬೀರುವುದಾದರೆ ಗಡಿನಾಡಿನ ಕನ್ನಡಿಗರು ತಮ್ಮ ಭಾಷೆಯನ್ನು ಗಡಿಯಲ್ಲೇ ಇರುವ ಕನ್ನಡೇತರರಿಗೆ ಕಲಿಸಲು ಏಕೆ ಸಾಧ್ಯವಾಗುತ್ತಿಲ್ಲ?


ನಿಮಗೆ ಗೊತ್ತಾ? ಪರಭಾಷಿಕರು ಯಾರಾದರೂ ರಸ್ತೆಯನ್ನೋ ವಿಳಾಸವನ್ನೋ ಕೇಳಿದರೆ ನಮಗೆ ಅವರ ಭಾಷೆ ಬರದಿದ್ದರೂ ನಾವಿರುವ ನಮ್ಮ ಊರುಗಳಲ್ಲೇ ನಾವು ಹರಕು ಮುರುಕು ತಮಿಳಿನಲ್ಲೋ ತೆಲುಗಿನಲ್ಲೋ ಉತ್ತರಿಸಲು ಹೆಣಗಾಡುತ್ತಿರುತ್ತೇವೆ. ಇದು ನಮ್ಮ ಔದಾರ್ಯವೆಂದು ಬಹಳಷ್ಟು ಜನ ಮಾತಾಡುತ್ತಾರೆ. ಇದನ್ನು ಏನಂತ ಕರೆಯುವುದು ಎನ್ನುವುದು ಮಾತ್ರ ನನಗೆ ಗೊತ್ತಾಗುತ್ತಿಲ್ಲ. ಇತ್ತೀಚೆಗಂತು ಗಡಿಭಾಗದ ಜನರನ್ನು ಸೆಳೆಯಲೆಂದು ಅಲ್ಲಿನ ಸರ್ಕಾರಗಳು ತಮ್ಮ ರಾಜ್ಯವ್ಯಾಪ್ತಿಯ ಹಳ್ಳಿಗಳಿಗೆ ಒಳ್ಳೇ ರಸ್ತೆ, ಒಳ್ಳೇ ಶಾಲೆ, ಅನುಕೂಲಗಳನ್ನು ಕೊಟ್ಟು ನಮ್ಮವರನ್ನು ಅವರತ್ತ ಹೋಗುವಂತೆ ಆಸೆ ಹುಟ್ಟಿಸುತ್ತಿವೆ. ಹಾಗಾಗಿ ಗಡಿ ಪ್ರದೇಶಗಳ ಅಭಿವೃದ್ಧಿ ನಮ್ಮ ಮೊದಲ ಆದ್ಯತೆಯಾಗಬೇಕು. ಇತ್ತ ಪಕ್ಕದ ಕೊಡಗಿನಲ್ಲಿ ಕೊಡಗನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಬೇಕು ಎನ್ನುವ ಕೂಗೆದ್ದಿದೆ. ಅತ್ತ ಬೆಳಗಾವಿಯ ಯಳ್ಳೂರಿನಲ್ಲಿ ಬಹಳ ಹಿಂದೆಯೇ ಮಹಾರಾಷ್ಟ್ರ ರಾಜ್ಯ' ಎಂಬ ಫಲಕ ನೆಟ್ಟು ಬೆಳಗಾವಿ ನಮ್ಮದೇ ಎಂಬ ಲಡಾಯಿ'ಶುರುವಾಗಿ ಎಷ್ಟೋ ವರ್ಷಗಳಾಗಿವೆ. ಈ ಹಿಂದೆ ಬೆಂಗಳೂರನ್ನು ಕೇಂದ್ರಾಡಳಿತ ಪ್ರದೇಶ ಮಾಡಿ ಎಂಬ ಕೂಗು ಶುರುವಾಗಿತ್ತು. ಬೆಳಗಾವಿ ನಮ್ಮದೇ ಎಂಬ ಮರಾಠಿಗರ ಉಮ್ಮೇದಿಯ ಬಗ್ಗೆ ಮರಾಠಿ ಪತ್ರಿಕೆಗಳು ಪುಟಗಟ್ಟಲೇ ಬರೆದೂ ಬರೆದೂ ವ್ಯಾಪಾರ ಮಾಡಿದ್ದೂ ಆಯಿತು. ಸಂಭಾಜಿ ಪಾಟೀಲ್ ಥರದವರು ಭಾಷಾ ವಿಷಯವನ್ನೇ ಜೀವಂತವಾಗಿರಿಸಿಕೊಂಡು ರಾಜಕಾರಣ ಮಾಡುತ್ತಾರೆ, ವಿಧಾನಸಭೆಗೆ ಆರಿಸಿ ಬರುತ್ತಾರೆ.

ಈಗಾಗಲೇ ಅಖಂಡ ಕರ್ನಾಟಕವನ್ನು ಒಡೆಯುವ ಕೂಗು ಮಾರಿಗೆ ತಕ್ಕ ಉತ್ತರದ ಉಪಶಮನ ನಡೆದಿದೆ. ಬೆಳಗಾವಿಯಲ್ಲಿ ಮರಾಠಿ ಧ್ವಜನೆಟ್ಟು ಭಾಷೆಯ ಬೇಲಿಯಲ್ಲಿ ಬೇಳೆಬೇಯಿಸಿಕೊಳ್ಳ ಹೊರಟವರಿಗೆ ಬೆಳಗಾವಿಗೆ ತೆರಳಿಯೇ ಪ್ರತಿಭಟಿಸಲಾಗಿದೆ. ಕನ್ನಡಿಗರಿಗೆ ಸಂಪೂರ್ಣ ಉದ್ಯೋಗದ ಒತ್ತಾಯವಿದ್ದ ಮಹಿಷಿ ವರದಿ ಸಂಪೂರ್ಣ ಜಾರಿಯಾಗಲಿಲ್ಲ. ಗಡಿನಾಡ ಕನ್ನಡಿಗರ ಸ್ಥಿತಿ ಶೋಚನೀಯವಾಗಿದೆ. ಗಡಿನಾಡ ಕನ್ನಡಿಗರು ವಾಸಿಸುವ ಹಳ್ಳಿಗಳಿಗೆ, ಗ್ರಾಮಗಳಿಗೆ, ಹತ್ತಿರವಿರುವ ನೆರೆಯ ರಾಜ್ಯದ ಸರ್ಕಾರಗಳು ಕನ್ನಡಿಗರು ವಾಸಿಸುತ್ತಿರುವ ಭೂಪ್ರದೇಶ ಗಳಿಗೆ ಒಳ್ಳೆಯ ನೀರು, ರಸ್ತೆ, ಚರಂಡಿ, ವ್ಯವಸ್ಥೆಗಳನ್ನು ಕಲ್ಪಿಸುವ ಮೂಲಕ ಕನ್ನಡಿಗರನ್ನು ಆಕರ್ಷಿಸುತ್ತಿವೆ. ತಮ್ಮತ್ತ ಕೈಬೀಸಿ ಕರೆಯುತ್ತಿವೆ. ಬೇಕಿದ್ದರೆ ಕಾಸರಗೋಡು ಮತ್ತು ಕೇರಳಗಳನ್ನು ಬೆಸೆಯುವ, ಆಂಧ್ರಪ್ರದೇಶ ಮತ್ತು ಕೋಲಾರದ ಕಡೆಯ ಹಳ್ಳಿಗಳ ಸಂಪರ್ಕಗಳನ್ನು ಬೆಸೆಯುವ ರಸ್ತೆಗಳು ಮತ್ತು ಫ್ಲೈಓವರ್‌ಗಳನ್ನು ಗಮನಿಸಿ, ರಸ್ತೆಯಲ್ಲೆ ಕುಳಿತು ಊಟ ಮಾಡಬಹುದು. ಹಾಗಿವೆ ರಸ್ತೆಗಳು, ಸಂಪರ್ಕಗಳ ಅನುಕೂಲಗಳು! ಅದೇ ಕರ್ನಾಟಕ ತಲುಪಿದ ಕೂಡಲೇ ಈ ಅನುಕೂಲಗಳು ಮಾಯವಾಗಿ ಬಿಡುತ್ತವೆ ನೆರೆ ರಾಜ್ಯಗಳ ಈ ಅನುಕೂಲ ಸಿಂಧು ರಾಜಕಾರಣವನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

ಕನ್ನಡ ಮಾಧ್ಯಮದ ವಿಚಾರದಲ್ಲಿ ಸುಪ್ರೀಂ ಕೋರ್ಟಿನ ತೀರ್ಪು ವ್ಯತಿರಿಕ್ತವಾದ ಕೂಡಲೇ ನಾವು ಧೃತಿಗೆಡಬೇಕಾಗಿಲ್ಲ. ಇದು ಕರುನಾಡು. ಇಲ್ಲೊಂದು ಕನ್ನಡ ಸರ್ಕಾರವಿದೆ. ಅದು ಮನಸ್ಸು ಮಾಡಿದರೆ ಭಾರತದ ಅಖಂಡತೆಯನ್ನು ಗೌರವಿಸುತ್ತಲೇ ಕನ್ನಡದ ಹಾಡು ಕಟ್ಟಬಹುದು. ಸುಪ್ರೀಂ ಕೋರ್ಟಿನ ನಿರ್ದೇಶನಕ್ಕೆ ಹೊರತಾಗಿ ಇರುವ ಏಕೈಕ ಮಾರ್ಗವೆಂದರೆ ಸಂವಿಧಾನದ 29(2)(ಎಫ್) ಪರಿಚ್ಛೇಧದ ಪ್ರಕಾರ ಶಿಕ್ಷಣ ಹಕ್ಕು ಕಾಯಿದೆಯ 19(7)ಕ್ಕೆ ತಿದ್ದುಪಡಿ ತರುವುದೊಂದೇ ಮಾರ್ಗ ಎಂಬುದು ಕಾನೂನು ಪಂಡಿತರ ವಾದ. ಸರ್ಕಾರ ಈಗಾಗಲೇ ಸಂಪುಟ ಸಭೆಯಲ್ಲಿ ಇದನ್ನು ಅನುಮೋದಿಸಿರುವ ಕಾರಣ ಪ್ರಭುತ್ವ ಮತ್ತು ಕನ್ನಡ ಸಂಸ್ಕೃತಿಗಳು ಒಟ್ಟಾಗಿ ನಡೆಯುವ ಸೂಚನೆಯಿದೆ. ಆದರೆ ದಾರಿಯ ಮಧ್ಯದಲ್ಲೆಲ್ಲಿಯೂ ಅಡೆತಡೆಗಳಾಗದಂತೆ ನಿಗಾ ವಹಿಸಬೇಕಾದ ಭಾಷಾ ಎಚ್ಚರವೊಂದು ಜಾಗೃತವಾಗಬೇಕು. ಇದು ಆಗ್ರಹ ಪೂರ್ವಕ ಒತ್ತಾಯ ವೆಂದರೂ ಚಿಂತೆಯಿಲ್ಲ. ಇದು ಕನ್ನಡದ ಕೆಲಸ. ಈ ಬಾರಿಯ ವಿಧಾನ ಸಭೆಯ ಚಳಿಗಾಲದ ಅಧಿವೇಶನದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸಿದ್ಧಪಡಿಸಿ ಸಲ್ಲಿಸಿರುವ ಕನ್ನಡ ಭಾಷಾ ಮಸೂದೆಯನ್ನು ಅಂಗೀಕರಿಸಿ ಅನುಷ್ಠಾನಗೊಳಿಸಿದರೆ ಸರ್ಕಾರ ಕನ್ನಡಮ್ಮನ ತೇರಿಗೆ ಕಳಶ ವಿಟ್ಟಂತೆ. ಕರುನಾಡಿಗೆ ನಮ್ಮ ಮನೆಯ, ಕೆಲಸ ಅದಕ್ಕಾಗಿ ಎಲ್ಲರೂ ಕೈ ಜೋಡಿಸೋಣ.

ಇವತ್ತಿಗೂ ವಿಶ್ವದ ತಂತ್ರಜ್ಞಾನದಲ್ಲಿ ಮುಂದಿರುವ ಜಪಾನಿಯರಿಗೆ ತಮ್ಮ ಮಾತೃಭಾಷೆ ಜಾಪ್ನೀಸ್ ಬಿಟ್ಟರೆ ಬೇರೆ ಭಾಷೆ ಬರುವುದಿಲ್ಲ. ಅಲ್ಲಿ ಹುಟ್ಟುವ ಪ್ರತಿಯೊಂದು ಮಗುವು ತನ್ನ ಮಾತೃ ಭಾಷೆಯಲ್ಲೇ ಶಿಕ್ಷಣ ಪಡೆಯುತ್ತದೆ. ಒಂದು ವೇಳೆ ಜಪಾನಿಯರ ಆಟೋಮೊಬೈಲ್ ತಂತ್ರಜ್ಞಾನ ನಿಮಗೆ ಬೇಕಿದ್ದರೆ ಜಪಾನಿ ಭಾಷೆ ಗೊತ್ತಿರುವ ದುಭಾಷಿಗಳನ್ನು ಕರೆಸಿ ನೀವು ಅನುವಾದ ಮಾಡಿಸಿಕೊಳ್ಳಬೇಕು! ಹಾಗಂತ ಅವರಿಗೇನು ಜಗತ್ತಿನ ಬಾಗಿಲು ತೆರೆಯಲಿಲ್ಲವೇ? ನಮ್ಮ ಹಾಗೆ ಡೆನ್ಮಾರ್ಕಿನ ಡ್ಯಾನಿಷ್, ಸ್ಪೇನಿನ ಸ್ಪಾನೀಷ್, ಸ್ವಿಡ್ಜರ್‌ಲ್ಯಾಂಡಿನ ಸ್ವೀಡಿಷ್, ಫ್ರಾನ್ಸಿನ ಫ್ರೆಂಚ್ ಹೀಗೆ ಇನ್ನು ಹತ್ತಾರು ದೇಶಗಳು ವಿಶ್ವಭಾಷೆ ಇಂಗ್ಲೀಷಿನ ಮುಂದೆ ಪೈಪೋಟಿ ಎದುರಿಸಲಾಗದೆ ಸೊರಗಿವೆ. ಕನ್ನಡಕುಲ ಕೂಡ ನಮ್ಮ ಪ್ರಾಚೀನ ಪರಂಪರೆ, ಭಾಷೆ, ಭವ್ಯತೆಗಳನ್ನೇ ಕೀರ್ತಿಸುತ್ತಾ ಕಾಲಕಳೆಯುವುದನ್ನು ನಿಲ್ಲಿಸಬೇಕಾಗಿದೆ. ಕರ್ನಾಟಕದ ಏಕೀಕರಣದಂಥಾ ಕಾಲದಲ್ಲಿ ಹುಟ್ಟಿದ ಹುಮ್ಮಸ್ಸು ಮತ್ತೊಮ್ಮೆ ಮೈದಳೆಯಬೇಕಾಗಿದೆ. ಕಾಲಕ್ಕೆ ತಕ್ಕಂತೆ ಜೀವನ ವಿಧಾನಗಳನ್ನು ಹೇಗೆ ನಾವು ಬದಲಾಯಿಸಿಕೊಂಡೆವೋ ಹಾಗೆಯೇ ಭಾಷೆಗೆ ಒದಗಿದ ಆಪತ್ಕಾಲದ ಆತಂಕಗಳನ್ನು ಕೂಡ ಅದರದ್ದೇ ಮಾದರಿಯಲ್ಲಿ ಎದುರಿಸಿ ನಿಲ್ಲಬೇಕಾಗಿದೆ. ಅದಕ್ಕಾಗಿ ಸಾಂಸ್ಕೃತಿಕ ಸಾಮಿಪ್ಯಗಳೇ ನಮಗೆ ದಾರಿದೀಪ. ಅವುಗಳನ್ನು ಆಶ್ರಯಿಸಬೇಕಾಗಿದೆ. ನಮ್ಮ ದೇಸಿಕಲೆಗಳಾದ ವೀರಗಾಸೆ, ಡೊಳ್ಳುಕುಣಿತ, ಯಕ್ಷಗಾನ, ಕೀಲುಕುದುರೆ, ಪೂಜಾಕುಣಿತಗಳು ಕಾರ್ಪೊರೇಟ್ ವಲಯದ ಕಲಾಪ್ರಕಾರಗಳ ಆಧುನಿಕತೆಯ ಆಕರ್ಷಣೆಗಳ ನಡುವೆ ಸೆಣೆಸಿ ಉಳಿಯಬೇಕಾಗಿದೆ. ಈ ವೈಬ್ರೇಷನ್ನಿನಿಂದ ಆಚೆ ಬರದೇ ಹೋದರೆ ಈ ಎಲ್ಲಾ ದೇಸೀಕಲೆಗಳ ಜಾಗದಲ್ಲಿ ಪಾಪು ರ‍್ಯಾಪುಗಳು ವಿಜೃಂಭಿಸುತ್ತವೆ. ಬ್ರೇಕ್ ಡ್ಯಾನ್ಸ್, ಷೇಕ್ ಡ್ಯಾನ್ಸ್‌ಗಳು ಜಾಗ ಮಾಡಿಕೊಳ್ಳುತ್ತವೆ. ಅದಕ್ಕಾಗಿ ಕನ್ನಡ ಮನಸುಗಳು ಜಾಗೃತವಾಗಬೇಕಾಗಿದೆ. ಅಂಥ ಜಾಗೃತಿಗಾಗಿ ಸಾಹಿತ್ಯ ಸಮ್ಮೇಳನಗಳು, ಜನಪದಜಾತ್ರೆಗಳು, ಪುಸ್ತಕ ಸಂತೆಗಳು, ವಿಚಾರ ಸಂಕಿರಣಗಳು, ಕವಿಗೋಷ್ಠಿಗಳು, ಚರ್ಚೆ ಸಂವಾದಗಳು, ಮೆರವಣಿಗೆ ಬರವಣಿಗೆಗಳು ಬೇಕಾಗುತ್ತವೆ.

ಇಷ್ಟಾಗಿಯೂ ಈ ನೆಲಕ್ಕೆ ಇಲ್ಲಿನ ಜಲಕ್ಕೆ, ಈ ಕನ್ನಡಕ್ಕೆ, ಕಳೆದ ಎರಡು ಸಾವಿರ ವರ್ಷಗಳಲ್ಲಿ ಹಲವಾರು ಗಂಡಾಂತರಗಳು ಬಂದಿವೆ. ಅವುಗಳನ್ನು ಅರಗಿಸಿಕೊಳ್ಳುವ ಶಕ್ತಿ ಈ ಭಾಷೆಗಿದೆ. ಕೇವಲ ಸಂಭ್ರಮಿಸುವುದಕ್ಕಾಗಿಯಷ್ಟೇ ಭಾಷೆ ಇರುವುದಿಲ್ಲ. ತನ್ನ ಭಾವೋದ್ವೇಗಗಳನ್ನೆಲ್ಲಾ ಇಳಿದ ಮೇಲೆ ಬಾಹುಬಲಿಯಂತೆ ಅಚಲವಾಗಿ ನಿಲ್ಲುವ ಶಕ್ತಿ ಅದಕ್ಕಿರುತ್ತದೆ. ಏನಂತೀರಿ?



ಬಾರಿಸು ಕನ್ನಡ ಡಿಂಡಿಮವ...

ನಾವಿರುವ ನೆಲ ಕನ್ನಡ. ಆಡುವ ಭಾಷೆ ಕನ್ನಡ. ತನು ಮನ ನುಡಿ ಎಲ್ಲವೂ ಕನ್ನಡ. ವರುಷದ ಮುನ್ನೂರ ಅರವತ್ತೈದು ದಿನವೂ, ಪ್ರತಿಕ್ಷಣವೂ ಕನ್ನಡದ ಸೊಗಡೆ ಅಡಕವಾಗಿರುತ್ತದೆ. ಕರುನಾಡಿನ ಪ್ರತಿ ಕುಡಿಯಲ್ಲಿಯೂ, ಆದರೂ ನವೆಂಬರ್ ತಿಂಗಳು ಬಂತೆಂದರೆ ನಮ್ಮೆಲ್ಲರಲ್ಲೂ ಮತ್ತಷ್ಟು ಹೊಸ ಹುರುಪು. ಜನ್ಮದಿನದ ಆಚರಣೆ ಸಂಭ್ರಮಿಸುವಂತೆ 'ಕನ್ನಡದ ಹಬ್ಬ'ವನ್ನು ಸಡಗರಿಸಿ ಸಂಭ್ರಮಿಸಿ ಎಲ್ಲೆಡೆ 'ಬಾರಿಸು ಕನ್ನಡ ಡಿಂಡಿಮವ' ಎಂಬ ಘೋಷವಾಕ್ಯವನ್ನು ಎತ್ತಿ ಹಿಡಿಯುತ್ತೇವೆ.

ಈ ವರುಷ ನಾವು ಭಾರತ ಸ್ವಾತಂತ್ರ್ಯ ಕಂಡ 'ಅಮೃತ ಮಹೋತ್ಸವ'ದ ಸಂಭ್ರಮದ ಜೊತೆಯಲ್ಲೇ 66 ವರುಷ ಪೂರೈಸಿದ 'ಕರುನಾಡ' ಹಬ್ಬವನ್ನೂ ಆಚರಿಸುತ್ತಿದ್ದೇವೆ.

ನವೆಂಬರ್ ಒಂದು ಎಂಬುದು ಕರುನಾಡ ಮಂದಿಗೆ ಶ್ಲಾಘನೀಯ ದಿನ. 'ಮೈಸೂರು ಪ್ರಾಂತ್ಯ' ಎಂಬ ಹೆಸರಿನ ಮೂಲಕ ಕರೆಯಲ್ಪಡುತ್ತಿದ್ದ ಹಾಗೂ ವಿಭಾಗಗಳಾಗಿ ಚದುರಿದ್ದ ನಾಡನ್ನು 1956 ರ ನವೆಂಬರ್ 1ರಂದು "ಕರ್ನಾಟಕ" ಎಂದು ಮರುನಾಮಕರಣ ಮಾಡಲಾಯಿತು. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಅಂದಿನ ಮೈಸೂರು ಮಹಾರಾಜರಾಗಿದ್ದ ಒಡೆಯರ್‌ರವರು ತಮ್ಮ ರಾಜ್ಯವನ್ನು ಭಾರತ ದೇಶದೊಂದಿಗೆ ವಿಲೀನ ಮಾಡಲು ಒಪ್ಪಿದರು. ಹೀಗಾಗಿ 1950ರಲ್ಲಿ ಮೈಸೂರು ಭಾರತದ ಒಂದು ರಾಜ್ಯವಾಯಿತು.

'ಕರ್ನಾಟಕ'ದ ಹುಟ್ಟಿಗೆ ಕಾರಣರಾದವರಲ್ಲಿ ಕನ್ನಡ ಕುಲಪುರೋಹಿತರೆಂದು ಹೆಸರಾದ ಆಲೂರು ವೆಂಕಟರಾಯರು ಮೊದಲಿಗರಾಗುತ್ತಾರೆ. 1905 ರಲ್ಲೇ ಅವರು 'ಕರ್ನಾಟಕ ಏಕೀಕರಣ' ಚಳುವಳಿಯನ್ನು ಪ್ರಾರಂಭಿಸಿದರು. ತದನಂತರ ಭಾರತಕ್ಕೆ ಸ್ವಾತಂತ್ರ್ಯ ದೊರೆತು ಗಣರಾಜ್ಯವಾದ ಬಳಿಕ ಭಾಷೆಗಳ ಆಧಾರದ ಮೇಲೆ 1956 ರ ನವೆಂಬರ್ 1 ರಂದು ರಾಜ್ಯಗಳನ್ನು ವಿಂಗಡಿಸಿದರು. ಅದರಂತೆ ಮದ್ರಾಸ್, ಮುಂಬಯಿ, ಹಾಗೂ ಹೈದರಾಬಾದ್ ಪ್ರಾಂತ್ಯದ ಕನ್ನಡ ಮಾತನಾಡುವ ಪ್ರದೇಶಗಳೆಲ್ಲವೂ ವಿಲೀನಗೊಂಡು 'ಮೈಸೂರು ರಾಜ್ಯ'ದ ಉದಯವಾಯಿತು. ನಂತರ ಮೈಸೂರು ರಾಜ್ಯವನ್ನು ಉತ್ತರ ಕರ್ನಾಟಕ, ಹಳೆಯ ಮೈಸೂರು ಹಾಗೂ ಮಲೆನಾಡು ಎಂದು ಮೂರು ಭಾಗಗಳಾಗಿ ವಿಂಗಡಿಸಲಾಯಿತು. ಮುಂದುವರೆದು ಬಳಿಕ 1973 ರಲ್ಲಿ 'ಕರ್ನಾಟಕ' ಎಂದು ಮರುನಾಮಕರಣವಾಯಿತು.

ಭೌಗೋಳಿಕವಾಗಿ ಭಾರತದ 6ನೇ ಅತಿದೊಡ್ಡ ರಾಜ್ಯ: ಕದಂಬರು, ಹೊಯ್ಸಳರು, ಚೋಳರು, ನಿಜಾಮರು ಹಾಗೂ ಒಡೆಯರ್ ರಾಜರುಗಳು ಆಳಿದ ಭೂಮಿ ನಮ್ಮ ಕರ್ನಾಟಕ. ಪಶ್ಚಿಮ ಘಟ್ಟಗಳಿಂದ ಸಮೃದ್ಧವಾಗಿರುವ ಕರ್ನಾಟಕ ರಾಜ್ಯವು ಭೌಗೋಳಿಕವಾಗಿ ಭಾರತದ ಆರನೇ ಅತಿ ದೊಡ್ಡ ರಾಜ್ಯವಾಗಿದೆ, ಹಾಗೆಯೇ ಜನಸಂಖ್ಯೆಯಲ್ಲಿ ಎಂಟನೇ ಸ್ಥಾನವನ್ನು ಪಡೆದಿದೆ. ಕೊಡಗು, ಚಿಕ್ಕಮಗಳೂರು, ಉತ್ತರ ಕನ್ನಡ, ಆಗುಂಬೆ ಹೀಗೆ ಹಲವಾರು ಪ್ರವಾಸಿ ತಾಣಗಳ ತವರೂರು ನಮ್ಮ ಕರುನಾಡು. ಇನ್ನು ಮೈಸೂರು ನಗರದ ಬಗ್ಗೆ ವಿಶ್ವವೇ ಮಾತನಾಡುವಂತಿದೆ. ನೂರಾರು ವರುಷಗಳ ಇತಿಹಾಸ ಹೊಂದಿರುವ ಸಾಂಸ್ಕೃತಿಕ ವೈಭವಕ್ಕೆ 'ಮೈಸೂರು' ಜೀವಂತ ಸಾಕ್ಷಿಯಾಗಿದೆ.

ವಿಶೇಷತೆಯ ಬಾವುಟ ನಮ್ಮದು: ಕರ್ನಾಟಕ ರಾಜ್ಯವು ತನ್ನದೇ ಆದ ಹಳದಿ–ಕೆಂಪು ವರ್ಣದ ಸಾಂಸ್ಕೃತಿಕ ಬಾವುಟವನ್ನು ಹೊಂದಿದೆ. ಈ ಧ್ವಜವನ್ನು ಸಮತಲ ಭಾಗಗಳಾಗಿ ವಿಂಗಡಿಸಲಾಗಿದೆ. ಧ್ವಜದ ಹಳದಿ ಬಣ್ಣವು ಅರಿಶಿನ ಹಾಗೂ ಕೆಂಪು ಬಣ್ಣವು ಕುಂಕುಮವಾಗಿದ್ದು ಮಂಗಳದ ಸಂಕೇತವಾಗಿದೆ. ಕನ್ನಡದ ಧ್ವಜ ಯಾವುದೇ ಅಧಿಕೃತ ಸ್ಥಾನಮಾನ ಹೊಂದಿಲ್ಲ. 1965 ರಲ್ಲಿ ಕನ್ನಡ ಹೋರಾಟಗಾರರಾದ ಎಂ. ರಾಮಮೂರ್ತಿ ಎಂಬುವರು ನಮ್ಮೀ ಬಾವುಟದ ನಿರ್ಮಾತೃವಾಗಿದ್ದು, ಕೋಟ್ಯಾಂತರ ಕನ್ನಡಿಗರ ಅಸ್ಮಿತೆಯ ಪ್ರತೀಕವಾಗಿದೆ ಈ ಬಾವುಟ.

"ಕನ್ನಡವೆಂದರೆ ಬರಿ ನುಡಿಯಲ್ಲ ಹಿರಿದಿದೆ ಅದರರ್ಥ, ಜಲವೆಂದರೆ ಕೇವಲ ನೀರಲ್ಲ ಅದು ಪಾವನ ತೀರ್ಥ" ಎಂತಹ ಅದ್ಭುತ ಸಾಲುಗಳಲ್ಲವೇ. ಕವಿವರ್ಯರ ಈ ಸಾಲು ನಮ್ಮ ಕರ್ನಾಟಕದ ಕನ್ನಡ ನುಡಿಯ ಹಿರಿಮೆಯನ್ನು ಎತ್ತಿ ಹಿಡಿಯುತ್ತದೆ. ಕನ್ನಡ ಭಾಷೆಯೇ ಸೊಗಸು. ಅದರ ಸೊಗಡು ಎಲ್ಲೆಡೆ ಪಸರಿದೆ. ಇಂದಿನ ಪೀಳಿಗೆಯ ಮುಂದಿನ ಭವಿಷ್ಯಕ್ಕಾಗಿ ನಾವುಗಳು ಕನ್ನಡದ ಪರಂಪರೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿಯನ್ನು ಹೊರಲೇಬೇಕು. ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ತಾಯಿ 'ಭುವನೇಶ್ವರಿಗೆ' ಕಲಾ ಉಪಾಸನೆ ನಿರಂತರವಾಗಿ ನಡೆಯುವಂತೆ ಮಾಡಲೇಬೇಕು. ಭಾರತಮಾತೆ ತನ್ನ ದಾಸ್ಯ ಸಂಕೋಲೆಯಿಂದ ಬಿಡುಗಡೆ ಕಳಚಿ ಸ್ವಾತಂತ್ರ್ಯದ ಸಂಭ್ರಮ ಆವರಿಸಿ ಇಂದಿಗೆ ಎಪ್ಪತ್ತೈದು ವಸಂತಗಳು ಕಳೆದಿವೆ. ನಾವೀಗ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮದಲ್ಲಿದ್ದೇವೆ. ಈ ಸಂಭ್ರಮದ ಸೆಲೆ ಸಾವಿರವಾಗಲು ಹಲವು ಕಾರ್ಯಕ್ರಮಗಳು ಭಾರತದಾದ್ಯಂತ ನಡೆಯುತ್ತಲೇ ಇದೆ. ನಮ್ಮ ಈ ವರುಷದ ಕನ್ನಡದ ಹಬ್ಬವನ್ನು ತಾಯಿ ಭಾರತಿಗೆ ಸಮರ್ಪಿಸೋಣ.

ತಾಯಿ ಭಾರತಿ ವಿದೇಶಿಯರ ಅಟ್ಟಹಾಸದಲ್ಲಿ ಬಂಧಿಯಾಗಿದ್ದ ಸಮಯದಲ್ಲಿ ಕರುನಾಡ ಮಡಿಲು ಮೌನದ ಸೆರೆಯೊಡೆದು ಅವಳನ್ನು ದಾಸ್ಯದ ಸಂಕೋಲೆಯಿಂದ ಬಿಡಿಸಲು ಮುಂದಾಯಿತು. ಸ್ವಾತಂತ್ರ್ಯದ ಬೆಳಕು ಎಲ್ಲೆಡೆ ಪ್ರಜ್ವಲಿಸಲು ಹೋರಾಟದ ಎಣ್ಣೆಯನ್ನೂ, ಸತ್ಯಾಗ್ರಹದ ಹಣತೆಯನ್ನೂ ಅಸ್ತ್ರವನ್ನಾಗಿಸಿಕೊಂಡಿತು. ಬ್ರಿಟೀಷರೆಂಬ ರಾವಣನಿಗೆ ಬೆಂಕಿಯಿಟ್ಟು ದೇಶದೆಲ್ಲೆಡೆ ಸ್ವಾತಂತ್ರ್ಯದ ಜ್ಯೋತಿ ಬೆಳಗಲು ಸಹಕಾರಿಯಾಯಿತು. ಸ್ವಾತಂತ್ರ್ಯ ಸಂಭ್ರಮದಲ್ಲಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ ಮಡಿದವರ ಸಾಲಿನಲ್ಲಿ ಅನೇಕ ಕನ್ನಡಿಗರು ಚಿರಸ್ಥಾಯಿಯಾಗಿದ್ದಾರೆ. ಪ್ರಮುಖ ಹೆಸರನ್ನು ಹೊರತುಪಡಿಸಿ ಎಲೆಮರೆಯ ಕಾಯಿಯಂತೆ ಭಾರತಮಾತೆಗಾಗಿ ತಮ್ಮ ಪ್ರಾಣ ಪಕ್ಷಿಯನ್ನು ಅರ್ಪಿಸಿದವರಿದ್ದಾರೆ. ಅಂತಹವರ ಉದಾಹರಣೆಗಳು ಸಾಕಷ್ಟಿವೆ. ಅದರಲ್ಲಿ ಚೆನ್ನಗಿರಿಯ ದೋಂಡಿಯಾವಾಘ್ ಸಹ ಒಬ್ಬರು. ಹೈದರಾಲಿ ಹಾಗೂ ಟಿಪ್ಪುವಿನ ಕಾಲದಲ್ಲಿ ಅಶ್ವಾರೋಹಿಯಾಗಿ ದುಡಿದ ಈತ ನಂತರ ತನ್ನದೇ ಸೈನ್ಯದ ತುಕಡಿಯನ್ನು ಕಟ್ಟಿಕೊಂಡು ಪ್ರಾಬಲ್ಯವನ್ನು ಮೆರೆದವನು. ಬ್ರಿಟೀಷರಿಗೆ ಪ್ರತಿ ಬಾರಿಯೂ ಚಳ್ಳೆಹಣ್ಣು ತಿನ್ನಿಸಿ ಅವರ ಸೈನ್ಯವನ್ನು ಸೋಲಿಸುತ್ತಿದ್ದ ಪರಾಕ್ರಮಿಯೇ ದೋಂಡಿಯಾವಾಘ್. ನಮ್ಮ ಅಕ್ಕಪಕ್ಕದ ರಾಜ್ಯದವರಿಂದಲೂ ಸ್ನೇಹಸಂಪಾದಿಸಿದ್ದ ಈತ ಸುಮಾರು ಎಂಭತ್ತು ಸಾವಿರಕ್ಕಿಂತಲೂ ಹೆಚ್ಚು ಬಲಶಾಲಿ ಸೈನ್ಯ ಪಡೆಯನ್ನು ಹೊಂದಿದ್ದ ಎಂಬುದು ಇತಿಹಾಸ.

ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯದ ಕಿಚ್ಚು ಹಚ್ಚಿದ ಮತ್ತೊಬ್ಬ ವೀರಕನ್ನಡಿಗ 'ಮುಂಡರಗಿಯ ಭೀಮರಾಯ'. ಸಾಮಾನ್ಯ ಜನತೆಯನ್ನು ಶೋಷಿಸುತ್ತಿದ್ದ ಬ್ರಿಟೀಷರನ್ನು ತನ್ನ ಸ್ವಾಭಿಮಾನದ ಮೂಲಕ ಸಂಘಟನಾ ಶಕ್ತಿಯಿಂದ ಬಗ್ಗುಬಡಿದ ಪ್ರಚಂಡ ಪರಾಕ್ರಮಿ. ಯಾವುದೇ ರಾಜಮನೆತನಕ್ಕೂ ಸೇರದ, ದೇಸಾಯಿ ವಂಶದವನೂ ಅಲ್ಲದ ಸಾಮಾನ್ಯ ಜನಪ್ರತಿನಿಧಿ ಈ ಭೀಮರಾಯ. ಮೊದಲನೇ ಸಿಪಾಯಿದಂಗೆಯಲ್ಲಿ ತನ್ನ ಸಂಘಟನಾ ಚತುರತೆಯಿಂದ ಮನೆಮಾತಾದ ಕನ್ನಡದ ಕುವರ. 1858ರಲ್ಲಿ ಬ್ರಿಟೀಷರು ಇವನಿಗೆ ಶರಣಾಗಲು ತಾಕೀತು ಮಾಡಿದಾಗ ಅದಕ್ಕೆ ಒಪ್ಪದೇ ಬ್ರಿಟೀಷರ ಗುಂಡಿಗೆ ಎದೆಯೊಡ್ಡಿ ಬಲಿಯಾದ ಮಹಾನಾಯಕ. ಕಪ್ಪಳದ ಜನಪದ ಹಾಡುಗಳಲ್ಲಿ, ಲಾವಣಿ ಗೀತೆಗಳಲ್ಲಿ ಇಂದಿಗೂ ಈ ಭೀಮರಾಯನ ಸ್ವಾಭಿಮಾನದ ಕತೆಗಳು ಹಾಡಾಗಿ ಮನೆಮಾತಾಗಿವೆ.

ಇಂತಿಪ್ಪ ನಮ್ಮ ಕರುನಾಡ ಬಗ್ಗೆ ಎಷ್ಟು ಮಾತನಾಡಿದರೂ ಕಡಿಮೆಯೇ. ಎಲ್ಲರ ಹೃದಯದಲ್ಲೂ ತಾಯಿ ಭುವನೇಶ್ವರಿ ರಾರಾಜಿಸಿ ವಿಶ್ವದೆಲ್ಲೆಡೆ ಅವಳ ಕೀರ್ತಿ ಪತಾಕೆ ಹರಡುತ್ತಿರುವ ಸಂಭ್ರಮದ ದಿನಗಳನ್ನು ನಾವಿಂದು ನೋಡುತ್ತಿದ್ದೇವೆ. ಐಟಿ ಬಿಟಿ ಕಂಪೆನಿಗಳಲ್ಲಿ 'ಕನ್ನಡ' ಮನೆ ಮಾಡಿದೆ. ಕರುನಾಡ ಹಬ್ಬವನ್ನು ತಳಿರು ತೋರಣಗಳಿಂದ ಅಲಂಕರಿಸಿ ಕನ್ನಡವನ್ನು ಅಲಂಗಿಸಿಕೊಂಡು ಆಚರಿಸುವ ಕಾಯಕವನ್ನು ಇಂದು ಹಲವಾರು 'ಕಾರ್ಪೊರೇಟ್ ಕಂಪೆನಿಗಳು' ಮಾಡುತ್ತಿವೆ. ಮೈಕ್ರೊಸಾಫ್ಟ್, ಅಸೆಂಚರ್, ವಿಪ್ರೊ ಹೀಗೆ ಇನ್ನೂ ಅನೇಕ ಕಡೆಗಳಲ್ಲಿ 'ಕನ್ನಡದ ಹಬ್ಬ'ವನ್ನು ಕಣ್ತುಂಬಿಕೊಳ್ಳಬಹುದು. 'ನೋಕಿಯಾ ನಾಡಹಬ್ಬ' ಎಂದೇ ನೋಕಿಯಾ ನೆಟ್‌ವರ್ಕ್ ಕಂಪೆನಿಯವರು ಪ್ರತಿವರುಷ ಸಂಭ್ರಮದಿಂದ ಕನ್ನಡದ ಹಬ್ಬವನ್ನು ಆಚರಿಸುತ್ತಾರೆ. ಈ ಎಲ್ಲಾ ಬೆಳವಣಿಗೆಗಳು ನಮ್ಮ ಕನ್ನಡಕ್ಕೆ ವಿಶ್ವಮಾನ್ಯ ತಂದುಕೊಟ್ಟಿದೆ ಎಂದೇ ಹೇಳಬಹುದು.

ಕೋಟಿ ಕಂಠ ಗಾಯನದ ಸಮರ್ಪಣೆ: ಕಳೆದ ಎರಡು ವರುಷಗಳಿಂದ 'ಕೊರೊನಾ' ಮಹಾಮಾರಿಯ ಸಂಕಷ್ಟದಲ್ಲಿದ್ದ ಜನತೆ ಈ ಬಾರಿ ಎಲ್ಲ ಹಬ್ಬಗಳನ್ನೂ ಸಂಭ್ರಮಗಳಿಂದ ಆಚರಿಸುತ್ತಿದ್ದಾರೆ. ಹಾಗೆಯೇ ನಮ್ಮ 'ನಾಡಹಬ್ಬ'ದ ಮೆರುಗನ್ನು ಹೆಚ್ಚಿಸಲು 'ಕೋಟಿಕಂಠಗಾಯನ' ಕಾರ್ಯಕ್ರಮವನ್ನು ನಮ್ಮ ಸರ್ಕಾರ ಆಯೋಜಿಸಿತ್ತು. ನಾಡಗೀತೆ 'ಜಯಭಾರತ ಜನನಿಯ ತನುಜಾತೆ', 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು', 'ಹಚ್ಚೇವು ಕನ್ನಡದ ದೀಪ' 'ವಿಶ್ವವಿನೂತನ' 'ಹುಟ್ಟಿದರೆ ಕನ್ನಡ ನಾಡಿನಲ್ಲಿ' ಹಾಗೂ 'ಬಾರಿಸು ಕನ್ನಡ ಡಿಂಡಿಮ'ವ ಎಂಬ ಕವಿಶ್ರೇಷ್ಠರ ಪದ್ಯಗಳನ್ನು 'ನನ್ನ ನಾಡು ನನ್ನ ಹಾಡು' ಎಂಬ ಶೀರ್ಷಿಕೆಯಡಿಯಲ್ಲಿ ಕೋಟ್ಯಂತರ ಕನ್ನಡಿಗರ ಕಂಠಸಿರಿಯಲ್ಲಿ ಅಕ್ಟೋಬರ್ 28 ರಂದೇ ಎಲ್ಲೆಡೆ ಮೊಳಗಿಸಿ ತಾಯಿ ಭುವನೇಶ್ವರಿಗೆ ಸಂಗೀತದ ಸಮರ್ಪಣೆಯನ್ನು ಅರ್ಪಿಸಲಾಗಿದೆ.

ಅಖಂಡ ಭಾರತದ ಆರಾಧನೆಯೊಂದಿಗೆ ತಾಯಿ ಭುವನೇಶ್ವರಿ ಮಾತೆಗೆ ಅಷ್ಟೋತ್ತರ ಸಲ್ಲಿಸುವ ಸುದಿನವೇ ನವೆಂಬರ್ 1. ತಾಯಿ ಕರುನಾಡ ಸರಸ್ವತಿಗೆ ಹಾಡು ನೃತ್ಯ ನಾಟಕಗಳನ್ನು ಅರ್ಪಿಸುತ್ತಾ ನಾವೆಲ್ಲಾ ಅವಳ ನುಡಿನಮನದ ಉಪಾಸನೆಯನ್ನು ಮಾಡೋಣ. ಭಾರತ ಮಾತೆಯ ನಲ್ಮೆಯ ಕುವರಿಯಾದ ಕನ್ನಡತಿಯ ನೆಲ ಜಲ ಭಾಷೆ ವೀರಪರಂಪರೆಯ ಗುಣಗಾನಗಳನ್ನು ಕೇಳೋಣ. ಬನ್ನಿ... ಎಲ್ಲರೂ ಒಟ್ಟಾಗಿ ತಾಯಿ ಭಾರತಿಗೆ ಕನ್ನಡದ ಆರತಿಯನ್ನು ಬೆಳಗೋಣ.

■ ಗಾಯತ್ರಿ ಸುಂದರೇಶ್
ಮೊ.9964790442

ಎಂದೆಂದಿಗೂ ನೀ ಕನ್ನಡವಾಗಿರು...



■ ವಸಂತಕುಮಾರ್ ಮೈಸೂರು ಮಠ,
ಮೈಸೂರು

ನಾವು ನವೆಂಬರ್ ಕನ್ನಡಿಗರಾಗಿ ವಿಜೃಂಭಿಸುತ್ತಿದ್ದೇವೆಯೇ? ಭಾರತದ ಅತ್ಯಂತ ಪ್ರಾಚೀನ ಭಾಷೆ ಕನ್ನಡವನ್ನು ರಕ್ಷಿಸುವಲ್ಲಿ ಕನ್ನಡಿಗರು ವಿಫಲರಾಗಿದ್ದಾರೆಯೇ? ಇಂದಿನ ಯುವ ಜನಾಂಗ ಅನ್ಯ ಭಾಷೆಗಳ ದಾಸರಾಗಿದ್ದಾರೆಯೇ? ಹೌದು, ಅನ್ನಿಸುತ್ತಿದೆ ಏಕೋ ಇಂದು. ಕಾರಣಗಳಿವೆ; ಗಾದೆ ಮಾತು – ಇಟ್ಕೊಂಡೋಳು ಇರೋ ತನಕ, ಕಟ್ಕೊಂಡೋಳು ಕಡೇ ತನಕ ! ಆದರೆ ಈ ಗಾದೆ ಮಾತು ತಿರುಗು ಮುರುಗಾಗಿದೆ–ಇಟ್ಕೊಂಡೋಳು ಕಡೆ ತನಕ, ಕಟ್ಕೊಂಡೋಳು ಇರೋ ತನಕ? ಎಂಥಾ ವಿಪರ್ಯಾಸ? ಮಮ್ಮಿ, ಡ್ಯಾಡಿ, ಮಿಸ್ ಕಾಲು, ಸಿಗ್ನಲ್ಲು, ಯಾರ್, ಮುಂತಾದ ಅನ್ಯ ಭಾಷಾ ಪದಗಳು ಕನ್ನಡಿಗರ ನಾಲಿಗೆಯ ಮೇಲೆ ಹರಿದಾಡುತ್ತಿರುವಾಗ ಕನ್ನಡ ಭಾಷೆಯು ಉದ್ಧಾರವಾಗುವುದೇ? ಹುಟ್ಟಿನಿಂದಲೇ ಕನ್ನಡಿಗಳಾದ ಕನ್ನಡಿತಿಯನ್ನು ಕನ್ನಡಿಗರಾದ ನಾವು ಕಟ್ಟಿಕೊಂಡಮೇಲೆ ಆಜನ್ಮ ಪರ್ಯಂತ ಅವಳನ್ನು ಆರಾಧಿಸುವ ಬದಲು, ನಾಲ್ಕು ಸಾಲು ಆಂಗ್ಲ ಭಾಷೆ ಒದರುವ ಯುವತಿಯ ಸಂಗ ದೊರೆತ ನಂತರ, ಅವಳ ತುಂಡು ಲಂಗಕ್ಕೆ ಮರುಳಾಗಿ ಅವಳನ್ನು ತಬ್ಬಿಕೊಂಡು, ಆಲಂಗಿಸಿ, ಮುತ್ತಿಟ್ಟು, ಅವಳನ್ನ 24 ಘಂಟೆ ತಲೆಯ ಮೇಲೇ ಇಟ್ಕೊಂಡು ಮೆರೆಸುವುದು ಯಾವ ನ್ಯಾಯ? ಅವಳು ಮರುಳು ಮಾಡಿರುವ ಕನ್ನಡಿಗರು ಅಚ್ಚ ಕನ್ನಡವನ್ನು ತಮ್ಮ ಜೀವನದ ಭಾಷೆ ಎನ್ನುವುದನ್ನು ಅರಿಯದೆ, "ಇಂಗನ್ನಡ" (ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಲು ಮೊದಲು ಮಾಡಿ, ಮಧ್ಯೆ ಮಧ್ಯೆ ಕನ್ನಡ ಪದಗಳನ್ನು ತುರುಕುವ) ಅಥವಾ "ಕಂಗ್ಲೀಷ್" (ಕನ್ನಡದಲ್ಲಿ ಮಾತನಾಡಲು ಮೊದಲು ಮಾಡಿ ಇಂಗ್ಲಿಷ್ ಪದಗಳನ್ನು ಮಧ್ಯೆ ತುರುಕುವ) ಪದ್ಧತಿಗಳನ್ನು ಅನುಸರಿಸಿದರೆ, ಕನ್ನಡ ಭಾಷೆಯು ಬದುಕಿದ್ದರೂ ಸತ್ತಂತೇ ಅಲ್ಲವೇ? ಕನ್ನಡದ ಈ ತರಹದ ದುರಂತ ನಗರ ಪ್ರದೇಶಗಳಲ್ಲಿ ವ್ಯಾಪಕವಾಗಿ ಕಾಣಬರುತ್ತದೆ. ದೂರವಾಣಿ ವಾಹಕ ಬಂದ ಮೇಲಂತೂ ಗ್ರಾಮಾಂತರ ಪ್ರದೇಶಗಳಲ್ಲಿ ಆಂಗ್ಲ ಭಾಷೆ ಪತ್ಯ ಮಾಡದವರೂ ಸಹ ಕೆಲವು ಆಂಗ್ಲ ಪದಗಳನ್ನು ಉದಾ: ಮೊಬೈಲ್, ನೆಟ್, ಸಿಗ್ನಲ್, ಫೋನ್, ಮೆಸೇಜ್, ಟವರ್, ಮುಂತಾದುವುಗಳನ್ನು ಸಾರಾಸಗಟಾಗಿ ಉಪಯೋಗಿ ಸುತ್ತಿರುವುದನ್ನು ಕಾಣಬಹುದು. ಬಹಳಷ್ಟು ಕನ್ನಡಿಗರು ಸಮಯ ಸಿಕ್ಕಾಗಲೆಲ್ಲ, ಸರ್ವಭಾಷಾ ಪರಿಣಿತರಾಗಲು ಪ್ರಯತ್ನ ಪಡುತ್ತಾರೆ!. ಅನ್ಯ ಭಾಷೆಗಳನ್ನು ಕಲಿತುಕೊಳ್ಳುವ ಹುಮ್ಮಸ್ಸಿನಲ್ಲಿ ಮನೆಯೊಳಗೇ, ಮಾತನಾಡುವಾಗ, ತಮ್ಮ ಮಾತೃಭಾಷೆಯನ್ನು ಮರೆತು ಆಂಗ್ಲ ಪದಗಳನ್ನು ಸೇರಿಸಿ ಕಲಬೆರಕೆ ಕನ್ನಡವನ್ನು ದಾರಾಳವಾಗಿ ಉಪಯೋಗಿಸುತ್ತಿರುವುದು ಕನ್ನಡಿತಿಯ ದುರದೃಷ್ಟ, ಎಂದು ಅನಿಸುತಿದೆ ಇಂದು.

ಅಚ್ಚ ಕನ್ನಡ ಮಾಧ್ಯಮ ಇದೆಯೇ? ಇಷ್ಟೇ ಎಲ್ಲಾ; ನಮ್ಮ ಕರುನಾಡಿನ ದೈನಂದಿಕಗಳು "ಕನ್ನಡ ಪತ್ರಿಕೆಗಳು" ಎಂದು ನೋಂದಾಯಿಸಿಕೊಂಡು, ತಮ್ಮ ಮುದ್ರಣದಲ್ಲಿ ಆಂಗ್ಲ ಪದಗಳನ್ನು ಹಾಸು ಹೊಕ್ಕಾಗಿ ಉಪಯೋಗಿಸಿಕೊಂಡು ನನ್ನ ಪತ್ರಿಕೆ ಮುಂದು, ಅನ್ಯ ಪತ್ರಿಕೆಗಳು ಹಿಂದು ಎಂದು ಹೆಣಗಾಡುತ್ತಿರುವ ಪತ್ರಿಕೋದ್ಯಮಕ್ಕೆ ಏನು ಅನ್ನೋಣ? ಅಂತೆಯೇ, ಕನ್ನಡ ಮಾಧ್ಯಮ ಶಾಲೆ ಎಂದು ಪರವಾನಗಿ ಪಡೆದುಕೊಂಡು ಭಂಡ ಧೈರ್ಯದಿಂದ ಆಂಗ್ಲ ಶೈಲಿಯ ಮಾಧ್ಯಮದಲ್ಲಿ, ಹಣ ಗಳಿಸಲು, ಶಿಕ್ಷಣ ಪದ್ಧತಿ ಅಳವಡಿಸಿಕೊಂಡಿರುವುದು ಯಾವ ನ್ಯಾಯ?

ಬೇರೆಲ್ಲ ಬೇಕು ಕನ್ನಡ ಭಾಷೆ ಬೇಡವೇ? ಜೊತೆಗೆ, ಅನ್ಯ ರಾಜ್ಯಗಳಿಂದ ಕರ್ನಾಟಕಕ್ಕೇ ಲಗ್ಗೆ ಇಟ್ಟಿರುವ ಲಕ್ಷೋಪಲಕ್ಷ ಅನ್ಯ ಭಾಷೀಯ ಜನರು, ನಾವೆಲ್ಲಾ ಭಾರತೀಯರು ಎಂದು ಸಾರಿಕೊಂಡು, ಗಲ್ಲಿ ಗಲ್ಲಿಗಳಲ್ಲಿಯೂ ಬೇರು ಬಿಟ್ಟು, ಕನ್ನಡಿಗರನ್ನೇ ಪಕ್ಕಕ್ಕೆ ತಳ್ಳಿ (ಇಂದು ಇರುವ ಬೆಂಗಳೂರು ನಮ್ಮ ಬೆಂಗ್ಳೂರಲ್ಲಾ, ಯಾರದೋ/ ಯಾರ್ಯಾರದ್ದೋ ಬೆಂಗಳೂರು – ಒಂದು ಸಮೀಕ್ಷೆ ಪ್ರಕಾರ, ಶೇಕಡಾ 32 ಭಾಗ ಕನ್ನಡಿಗರು ಮಾತ್ರ ಬೆಂಗಳೂರಿನಲ್ಲಿದ್ದಾರೆ?), ಕನ್ನಡಿಗರಿಗೆ ಸೇರಬೇಕಾದ ಜಲ, ನೆಲ, ಮೂಲಭೂತ ಸೌಕರ್ಯಗಳನ್ನು ಧಾರಾಳವಾಗಿ ದೋಚಿಕೊಂಡು ಜೀವಿಸುತ್ತಿದ್ದರೂ ಕನ್ನಡ ಭಾಷೆಯನ್ನು ಮಾತನಾಡುವುದನ್ನು, ಕಲಿಯಲು ನಿರಾಕರಿಸಿ ತಂತಮ್ಮ ಮಾತೃಭಾಷೆಗಳನ್ನು ಕನ್ನಡಿಗರ ಮೇಲೆ ಹೇರುತ್ತಿರುವುದು ಯಾವ ನ್ಯಾಯ? ಕನ್ನಡಿಗರು ಸಹೃದಯಿಗಳು, ಸ್ನೇಹ ಜೀವಿಗಳು, ಸದ್ಭಾವನೆಗಳ ಆಗರ, ಪಾರಂಪರಿಕ ಸಂಸ್ಕೃತಿಯುಳ್ಳವರು ಎನ್ನುವುದು ಜಗಜ್ಜಾಹೀರಾಗಿದೆ. ಅವುಗಳನ್ನು ಅರಿತು, ಅನ್ಯ ರಾಜ್ಯಗಳ ಜನರು ಕನ್ನಡದ ಕಲೆ, ಸೊಗಡು ಮುಂತಾದವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಾಳಿ ಬದುಕಿದರೇ ಒಳಿತು ಅಲ್ಲವೇ?

ಭಾಷಣಗಳು ಅಚ್ಚ ಕನ್ನಡದಲ್ಲಿರಲಿ, ಇಲ್ಲದಿದ್ದರೆ...? ಮತ್ತೊಂದು ನವೆಂಬರ್ ತಿಂಗಳು ಬಂದಿದೆ, ಕರ್ನಾಟಕ ರಾಜ್ಯೋತ್ಸವವನ್ನು ತಂದಿದೆ, ಈ ಬಾರಿ ದಸರಾ ಹಬ್ಬದಂತೆ ರಾಜ್ಯೋತ್ಸವವನ್ನೂ ವಿಜೃಂಭಣೆಯಿಂದ ಆಚರಿಸುವ ಮುನ್ಸೂಚನೆಗಳು ಬಂದಿವೆ. ಸಂತೋಷ, ಸ್ವಾಗತಿಸೋಣ ಏಕೆಂದರೆ, ಹಿಂದಿನ ಎರಡು ರಾಜ್ಯೋತ್ಸವಗಳೂ ಕೋವಿಡ್ ಮಹಾಮಾರಿಗೆ ಬಲಿಯಾಗಿದ್ದುವು. ಆದರೆ ಒಂದು ಬಿನ್ನಹ – ಕನ್ನಡಿಗರೆಲ್ಲರೂ ನವೆಂಬರ್ 1 ರಂದು ಬೆಳಗ್ಗೆ, ಕನ್ನಡದ ಬಾವುಟವನ್ನು ತಮ್ಮ ತಮ್ಮ ಮನೆಗಳ ಮೇಲೆ ಹಾರಿಸಬೇಕು. ಅಂತೆಯೇ, ರಾಜ್ಯೋತ್ಸವ ಸಮಾರಂಭಗಳಿಗೆ ಆಹ್ವಾನಿಸಲ್ಪಡುವ ಗಣ್ಯ ವ್ಯಕ್ತಿಗಳು, ರಾಜಕಾರಣಿಗಳು, ಸಾಹಿತಿಗಳು, ಬುದ್ಧಿಜೀವಿಗಳು, ಮುಂತಾದವರಿಗೆ ಮೊದಲೇ, ಹೀಗೆ ಹೇಳಿರಿ – "ತಮ್ಮ ಭಾಷಣಗಳು ಅಚ್ಚ ಕನ್ನಡದಲ್ಲಿರಲಿ, ಅನ್ಯ ಭಾಷಾ ಮಿಶ್ರಿತವಾದ ಪದಗಳನ್ನು ಉಪಯೋಗಿಸಬೇಡಿ, ಬರೆದುಕೊಂಡು ಬಂದು ಓದಿದರೂ ಪರವಾಗಿಲ್ಲ. ಆದರೆ ಕನ್ನಡದಲ್ಲಿ ಮಾತ್ರ ಸಂಕ್ಷಿಪ್ತವಾಗಿ ಸ್ವಾರಸ್ಯವಾಗಿ ಸಭಿಕರಿಗೆ ಅರಿಕೆಯಾಗುವಂತೆ ಮಾತನಾಡಿ, ಏಕೆಂದರೆ ಅಲ್ಲಿ ನೆರೆದವರೆಲ್ಲರೂ ಕನ್ನಡದ ಕಂದಮ್ಮಗಳೇ ಎನ್ನುವುದನ್ನು ಮರೆಯಬೇಡಿ." "ಹೀಗೆ ಕನ್ನಡದ ಹಿರಿಮೆಯನ್ನು ಮತ್ತು ಗರಿಮೆಯನ್ನು ಸಾರಲು ಆಗದಿದ್ದರೆ, ದಯವಿಟ್ಟು ಸಮಾರಂಭಗಳಿಗೆ ಬರಲೇಬೇಡಿ! ಎನ್ನೋಣವೇ?"


ಕೆ.ಆರ್.ನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ರವಿಶಂಕರ್ ಗೆಲುವು ಖಚಿತ

ಜನಾಶೀರ್ವಾದ ಯಾತ್ರೆಗೆ ಚಾಲನೆ ನೀಡಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ವಿಶ್ವಾಸ

ಭೇರ್ಯ, ಅ.31– ಜನಸ್ಪಂದನಾ ಕಾರ್ಯಕ್ರಮದ ಮೂಲಕ ನಾನು ಹಳ್ಳಿ ಹಳ್ಳಿಗೆ ಭೇಟಿ ನೀಡಿ, ಮಾಜಿ ಸಚಿವ ಬಿ.ರಾಚಯ್ಯನವರ ಕುಟುಂಬಕ್ಕೆ 30 ವರ್ಷಗಳಿಂದ ಅಧಿಕಾರ ನೀಡಿದ್ದೀರಿ. ನನಗೊಂದು ಅವಕಾಶ ಕೊಡಿ ಎಂದು ಮನವಿ ಮಾಡಿದ್ದೆ. ಅದರಂತೆ ಮಾಜಿ ಸಚಿವರ ಪುತ್ರನ ವಿರುದ್ಧ ಒಂದು ಮತಗಳಿಂದ ಗೆಲುವು ಸಾಧಿಸಿದೆ. ಅದೇ ರೀತಿ ಕಳೆದ ಚುನಾವಣೆಯಲ್ಲಿ ಅಲ್ಪ ಮತಗಳಿಂದ ಸೋತಿರುವ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಅವರು ಕೆ.ಆರ್.ನಗರ ಕ್ಷೇತ್ರದಲ್ಲಿ ಜನಾಶೀರ್ವಾದ ಯಾತ್ರೆ ಕೈಗೊಂಡಿದ್ದು, ಈ ಬಾರಿ ಗೆಲುವು ಸಾಧಿಸಲಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವ ನಾರಾಯಣ್ ವಿಶ್ವಾಸ ವ್ಯಕ್ತಪಡಿಸಿದರು.

ಇಲ್ಲಿಗೆ ಸಮೀಪದ ಅರಕೆರೆ ಗ್ರಾಮದ ಶ್ರೀಬಸವೇಶ್ವರ ದೇವಸ್ಥಾನದಲ್ಲಿ ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಕೈಗೊಂಡಿರುವ ಜನಾಶೀರ್ವಾದ ಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.

5 ವರ್ಷ ಯಶಸ್ವಿಯಾಗಿ ಆಡಳಿತ ನಡೆಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಡವರು, ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಕೋಟ್ಯಾಂತರ ರೂ. ಅನುದಾನ ನೀಡಿದ್ದು, ರಾಜ್ಯದ ಜನತೆ ನೆಮ್ಮದಿಯಾಗಿದ್ದರು. ಆದರೆ ಬಿಜೆಪಿ ಮತ್ತು ಜೆಡಿಎಸ್ ಸರ್ಕಾರದ ಆಡಳಿತದಲ್ಲಿ ರಾಜ್ಯದ ಜನತೆಗೆ ಯಾವುದೇ ಅನುಕೂಲವಾಗಿಲ್ಲ ಎಂದು ಜರಿದರು.



ಕಾಂಗ್ರೆಸ್ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಭಾರತ್ ಜೋಡೋ ಯಾತ್ರೆ ಬಗ್ಗೆ ವಿಪಕ್ಷಗಳು ವ್ಯಂಗ್ಯ ಮಾಡಿದವು. ಆದರೆ ರಾಜ್ಯದ ಜನತೆ ರಾಹುಲ್ ಗಾಂಧಿ ಯವರ ಆದರ್ಶ ಕೊಂಡಾಡುತ್ತಿದ್ದಾರೆ ಎಂದು ನುಡಿದರು.

ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಹಾಗೂ ಕೆಪಿಸಿಸಿ ಸದಸ್ಯ ದೊಡ್ಡಸ್ವಾಮಿಗೌಡರು ಜನಾಶೀರ್ವಾದ ಯಾತ್ರೆ ಮೂಲಕ ಕ್ಷೇತ್ರದ ಹಳ್ಳಿ ಹಳ್ಳಿಗಳಿಗೆ ಭೇಟಿ ನೀಡಿ ಮತದಾರರ ಆಶೀರ್ವಾದ ಪಡೆಯಲಿದ್ದಾರೆ. ಮುಂಬರುವ ನಾಲ್ಕೈದು ತಿಂಗಳಲ್ಲಿ ವಿಧಾನಸಭಾ ಚುನಾವಣೆ ಯಾವಾಗ ಬೇಕಾದರೂ ನಡೆಯಬಹುದು. ಹೀಗಾಗಿ ಗ್ರಾಮಗಳಿಗೆ ಭೇಟಿ ನೀಡಿ ಸಮಸ್ಯೆ ಆಲಿಸಲಿದ್ದಾರೆ ಎಂದರು.

ಇದಕ್ಕೂ ಮುನ್ನಾ ಕಾರ್ತಿಕ ಸೋಮವಾರದ ಅಂಗವಾಗಿ ಅರಕೆರೆ ಗ್ರಾಮದ ಶ್ರೀಬಸವೇಶ್ವರ ದೇವಾಲಯದಲ್ಲಿ ಸಿ.ಪಿ.ರಮೇಶ್ ವಿಶೇಷ ಪೂಜೆ ಹಮ್ಮಿಕೊಂಡಿದ್ದರು. ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಉಸ್ತುವಾರಿ ಡಾ.ರವೀಂದ್ರ, ಸದಸ್ಯ ದೊಡ್ಡಸ್ವಾಮಿಗೌಡ ಹಾಗೂ ಡಿ.ರವಿಶಂಕರ್ ಪತ್ನಿ ಸುನೀತಾ ಇದ್ದರು. ಕಾಂಗ್ರೆಸ್ ಜನಾಶೀರ್ವಾದ ಯಾತ್ರೆ ಅರಕೆರೆ, ಉದಯಗಿರಿ, ಗುಳುವಿನ ಅತ್ತಿಗುಪ್ಪೆ, ಕಾವಲ್ ಹೊಸೂರು, ಚಿಕ್ಕ ಭೇರ್ಯ ನಂತರ ಮುಂಜನಹಳ್ಳಿ ಗ್ರಾಮದಲ್ಲಿ ವಾಸ್ತವ್ಯ ಹೂಡಿತು.

> “ಕಳೆದ 20 ವರ್ಷಗಳಿಂದ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಯಾರೂ ಶಾಸಕರಾಗಿಲ್ಲ. ಕಳೆದ ಚುನಾವಣೆಯಲ್ಲಿ ಅಲ್ಪ ಮತಗಳಿಂದ ಸೋತಿದ್ದೇವೆ. ಈ ಬಾರಿ ಅಧಿಕ ಮತಗಳಿಂದ ನಮ್ಮ ಅಭ್ಯರ್ಥಿ ಡಿ.ರವಿಶಂಕರ್ ಗೆಲುವು ಸಾಧಿಸಲಿದ್ದಾರೆ.
> – ಸಿ.ಪಿ.ರಮೇಶ್ ಕುಮಾರ್, ಕೆಪಿಸಿಸಿ ಸದಸ್ಯ.

ಯಾತ್ರೆಯಲ್ಲಿ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಉಸ್ತುವಾರಿ ಡಾ.ರವೀಂದ್ರ, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಹೆಚ್.ಟಿ.ಮಂಜಪ್ಪ ಚಂದ್ರಶೇಖರ್, ಮಲ್ಲಿಕಾರವಿ, ಮಾಜಿ ಸದಸ್ಯೆ ಶೋಭಾ, ತಾ.ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಪುರಸಭಾಧ್ಯಕ್ಷ ಪ್ರಕಾಶ್, ಉಪಾಧ್ಯಕ್ಷೆ ಸೌಮ್ಯ, ಮಾಜಿ ಅಧ್ಯಕ್ಷ ಕೆ.ಜಿ.ಸುಬ್ರಹ್ಮಣ್ಯ, ಸ್ಥಾಯಿ ಸಮಿತಿ ಅಧ್ಯಕ್ಷ ಶಂಕರ್, ಸದಸ್ಯರಾದ ನಟರಾಜ್, ಶಿವುನಾಯಕ್, ಅಶ್ವಿನಿ, ಸಿದ್ದಿಕ್, ಜಾವೀದ್, ವಸಂತಮ್ಮ, ಜಿಪಂ ಮಾಜಿ ಸದಸ್ಯ ರಾಜಯ್ಯ, ಗಾಪಂ ಸದಸ್ಯ ನಾಗರಾಜ್, ತಾ.ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ್, ಎಪಿಎಂಸಿ ಮಾಜಿ ಅಧ್ಯಕ್ಷ ನಟರಾಜ್, ಕಾಂಗ್ರೆಸ್ ಮುಖಂಡರಾದ ಮಹೇಶ್, ಗುಣಪಾಲ್ ಜೈನ್, ಬಲರಾಮ್, ಮಂಜು, ಸೇವಾದಳದ ಜಿಲ್ಲಾ ಪ್ರ.ಕಾರ್ಯದರ್ಶಿ ಸಾ.ಮಾ.ಯೋಗೇಶ್, ಕಾಂಗ್ರೆಸ್ ಮುಖಂಡರಾದ ಶ್ರೀನಿವಾಸ್, ಮಹದೇವನಾಯಕ, ಯುವ ಮುಖಂಡರಾದ ಬಿ.ಟಿ.ಮೋಹನ್, ಕಾಂತರಾಜ್, ಭೇರ್ಯ ಗ್ರಾಪಂ ಸದಸ್ಯರಾದ ಹರ್ಷವರ್ಧಿನಿ, ಜಯಲಕ್ಷ್ಮಿ, ಮುಂಜನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರೇಗೌಡ, ಜಯರಾಮೇಗೌಡ, ಸದಸ್ಯರಾದ ಯತಿರಾಜ್, ಮಹದೇವನಾಯಕ, ಪ್ರಭಾನಾಯಕ, ಪಾಪನಾಯಕ, ಸೀನಾ, ಕುಮಾರ್, ಬಸಪ್ಪ ಮಹದೇವ, ಜಿ.ಕೆ.ಮಹದೇವ್, ಅರುಣ್, ಭೈರನಾಯಕ, ಮಂಜು ಸೇರಿದಂತೆ ಇತರರಿದ್ದರು.

ಇಂದು ಮಾಜಿ ಶಾಸಕ ಚಿಕ್ಕಮಾದು ಪುಣ್ಯಸ್ಮರಣೆ

ಹೆಚ್.ಡಿ.ಕೋಟೆ, ಅ.31– ಮಾಜಿ ಶಾಸಕ ದಿ.ಎಸ್.ಚಿಕ್ಕಮಾದು ಅವರ 5ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ನ.1ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ಬಾಪೂಜಿ ಸರ್ಕಲ್‌ನಲ್ಲಿ ನಡೆಯಲಿದೆ ಎಂದು ಚಿಕ್ಕಮಾದು ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ನಾಗರಾಜು ಹಾಗೂ ತಾಲೂಕು ಅಧ್ಯಕ್ಷ ರಾಜನಾಯಕ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಚಿಕ್ಕಮಾದು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಗುವುದು. ಬಳಿಕ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ. ನಂತರ ತಾಲೂಕಿನ ಶಾಂತಿಪುರದಲ್ಲಿರುವ ಚಿತ್ತಧಾಮದ ಮಾನಸಿಕ ಅಸ್ವಸ್ಥರಿಗೆ ಊಟದ ವ್ಯವಸ್ಥೆ ಮಾಡಲಾಗಿದ್ದು, ತಟ್ಟೆ-ಲೋಟ ವಿತರಿಸಲಾಗುವುದು. ಈ ವೇಳೆ ಶಾಸಕ ಅನಿಲ್ ಚಿಕ್ಕಮಾದು, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಸೇರಿದಂತೆ ಪಕ್ಷಾತೀತವಾಗಿ ಜನಪ್ರತಿನಿಧಿಗಳು ಉಪಸ್ಥಿತರಿರುವರು ಎಂದು ತಿಳಿಸಿದ್ದಾರೆ.

ನೆರೆ ಸಂತ್ರಸ್ತರ ಅಹೋರಾತ್ರಿ ಧರಣಿ 5ನೇ ದಿನಕ್ಕೆ

ಸರಗೂರು, ಅ.31– ಪಟ್ಟಣದ ತಾಲೂಕು ಕಚೇರಿ ಎದುರು ನಡೆಯುತ್ತಿರುವ ನೆರೆ ಸಂತ್ರಸ್ತರ ಅಹೋರಾತ್ರಿ ಧರಣಿ 5ನೇ ದಿನಕ್ಕೆ ಕಾಲಿಟ್ಟಿದೆ.

ಧರಣಿಯಲ್ಲಿ ಭಾಗವಹಿಸಿ ಮಾತನಾಡಿದ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಬೆಟ್ಟಯ್ಯ, ಪಟ್ಟಣದಲ್ಲಿ ನೆರೆ ಸಂತ್ರಸ್ತರು ಧರಣಿ ನಡೆಸುತ್ತಿದ್ದರೂ, ಅಧಿಕಾರಿಗಳು ಅವರ ನೆರವಿಗೆ ಬಂದಿಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿ ದಸಂಸ ದಿಂದ ನೆರೆ ಸಂತ್ರಸ್ತರ ಜೊತೆಗೂಡಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕಲಾಗುವುದು. ಅಲ್ಲದೇ ರಸ್ತೆತಡೆ, ಉಪವಾಸ ಸತ್ಯಾಗ್ರಹ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪಪಂ 4ನೇ ವಾರ್ಡ್ ಸದಸ್ಯ ಎಸ್.ಎಲ್.ರಾಜಣ್ಣ ಮಾತನಾಡಿ, ಅಹೋರಾತ್ರಿ ಧರಣಿ ನಡೆಸುತ್ತಿರುವ ಸಂತ್ರಸ್ತರ ಧರಣಿ ಹತ್ತಿಕ್ಕಲು ಕಾಣದ ಕೈಗಳು ಕೆಲಸ ಮಾಡುತ್ತಿವೆ. ಸಂತ್ರಸ್ತರ ನೆರವಿಗೆ ಬಾರದ ಅಧಿಕಾರಿಗಳ ವಿರುದ್ಧ ಪಟ್ಟಣದ ವಿವಿಧ ಸಂಘಟನೆಗಳು ಧರಣಿಗೆ ಸಜ್ಜಾಗಿವೆ. ಹೀಗಾಗಿ ಅಧಿಕಾರಿಗಳು ನೆರೆ ಸಂತ್ರಸ್ತರ ನೆರವಿಗೆ ಬರುವಂತೆ ಇದೇ ವೇಳೆ ಮನವಿ ಮಾಡಿದರು.



ಪ್ರತಿಭಟನೆಯಲ್ಲಿ ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಸಂವಿಧಾನ ಸಂರಕ್ಷಣಾ ಸಮಿತಿ ಅಧ್ಯಕ್ಷ ಬಸವರಾಜು, ಕಾರ್ಯದರ್ಶಿ ಬೆಟ್ಟಸ್ವಾಮಿ, ಮಲ್ಲೇಶ್, ಬಸವಣ್ಣ, ಆದಿಜಾಂಬವ ಮುಖಂಡ ಸಿ.ತಿಮ್ಮಯ್ಯ, ಚಿನ್ನಣ್ಣ, ನಿಂಗರಾಜು, ಲಕ್ಷ್ಮಣ, ಸಿದ್ದರಾಜು, ಶ್ರೀನಿವಾಸ್, ಪ್ರತಾಪ್, ಸಿದ್ದರಾಜು, ಮಣಿ, ನಾಗರಾಜು, ನಾಗರಾಜು, ಪುಟ್ಟು, ವೆಂಕಟರಾಮು, ರೇವಣ್ಣ, ಶಂಕರ್, ವಿವಿಧ ಪಕ್ಷದ ಮುಖಂಡರು, ನೆರೆ ಸಂತ್ರಸ್ತ ಮಹಿಳೆಯರು ಇದ್ದರು.

ಚಿರತೆ ಕಳೇಬರ ಪತ್ತೆ



ಹಂಪಾಪುರ, ಅ.31– ಗ್ರಾಮದ ಎಲ್ಲೆಗೆ ಸೇರಿದ ಕೆಂಪೇಗೌಡರ ಜಮೀನಿನಲ್ಲಿ ಚಿರತೆ ಕಳೇಬರ ಪತ್ತೆಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳಾದ ಮಧು, ಸುನೀತಾ, ಚಂದನ್ ಪಿ.ವಿನೋದ್‌ರಾಜ್, ಪ್ರಸಾದ್ ಪರಿಶೀಲನೆ ನಡೆಸಿ, ಹೆಚ್.ಡಿ.ಕೋಟೆ ಪಶು ವೈದ್ಯಾಧಿಕಾರಿ ಪ್ರಸನ್ನ ಅವರಿಂದ ಮರಣೋತ್ತರ ಪರೀಕ್ಷೆ ನಡೆಸಿದರು. ಚಿರತೆ ಕಳೆದ ಮೂರು ದಿನಗಳ ಹಿಂದೆ ಮೃತಪಟ್ಟಿರಬಹುದು ಎಂದು ಅಂದಾಜಿಸಿದ್ದಾರೆ.

ಕೃಷಿಯೊಂದಿಗೆ ರೇಷ್ಮೆ ಇಲಾಖೆ ವಿಲೀನ ಬೇಡ: ಮನವಿ



ತಿ.ನರಸೀಪುರ, ಅ.31– ಕೃಷಿ ಇಲಾಖೆ ಜೊತೆ ರೇಷ್ಮೆ ಇಲಾಖೆ ವಿಲೀನಗೊಳಿಸುವುದು ಬೇಡ ಎಂದು ರೇಷ್ಮೆ ಬೆಳೆಗಾರರು ವಿಪಕ್ಷ ನಾಯಕ ಸಿದ್ದರಾಮಯ್ಯಗೆ ಮನವಿ ಮಾಡಿದ್ದಾರೆ.

ಪಿಎಲ್‌ಡಿ ಬ್ಯಾಂಕ್ ರಾಜ್ಯ ನಿರ್ದೇಶಕ ಮಹದೇವಣ್ಣ ನೇತೃತ್ವದಲ್ಲಿ ರೇಷ್ಮೆ ಬೆಳೆಗಾರರ ನಿಯೋಗ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಕೃಷಿ ಇಲಾಖೆಯಲ್ಲಿ ರೈತರಿಗೆ ಸಕಾಲದಲ್ಲಿ ಸವಲತ್ತು ಸಿಗುವುದು ಕಷ್ಟವಾಗುತ್ತಿದೆ. ಇನ್ನು ರೇಷ್ಮೆ ಇಲಾಖೆಯನ್ನು ವಿಲೀನಗೊಳಿಸಿದರೆ ರೇಷ್ಮೆ ಬೆಳೆಗಾರರರು ಕೂಡ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ. ಇಲಾಖೆ ಪ್ರತ್ಯೇಕವಾಗಿದ್ದರೆ ಸಕಾಲಕ್ಕೆ ಸೌಲಭ್ಯ ಪಡೆಯಲು ಸಾಧ್ಯವಾಗುತ್ತದೆ. ವಿಲೀನಗೊಂಡು ಇಲಾಖೆ ದೊಡ್ಡದಾದರೆ ರೈತರಿಗೆ ಸಮಸ್ಯೆಯಾಗುವ ಸಾಧ್ಯತೆ ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ವಿಲೀನಗೊಳಿಸದಂತೆ ಸರ್ಕಾರದ ಮೇಲೆ ಒತ್ತಡ ಹೇರುವಂತೆ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ, ವಿಲೀನದ ಸಾಧಕ ಬಾಧಕಗಳ ಬಗ್ಗೆ ಸದನದಲ್ಲಿ ಚರ್ಚೆ ಮಾಡುವುದಾಗಿ ಹಾಗೂ ರೈತರ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುದಾಗಿ ಭರವಸೆ ನೀಡಿದರು.

ಬ್ಲಾಕ್ ಅಧ್ಯಕ್ಷ ಮುದ್ದೇಗೌಡ, ಹೊಸಕೋಟೆ ಗ್ರಾಪಂ ಅಧ್ಯಕ್ಷ ಆನಂದ್, ರೇಷ್ಮೆ ಬೆಳೆಗಾರರಾದ ಕೆ.ಎಸ್.ಮಹೇಶ್, ಮಹದೇವಸ್ವಾಮಿ, ಗಿರೀಶ್, ಶಿವಮೂರ್ತಿ, ಗಂಗಾಧರ್, ಭೈರಾ, ಸುರೇಶ್ ಪ್ರಭು ಮತ್ತಿತರರಿದ್ದರು.

ಕಸಾಪ ಪದಾಧಿಕಾರಿಗಳ ಪದಗ್ರಹಣ, ಪ್ರತಿಭಾ ಪುರಸ್ಕಾರ



ಹುಣಸೂರು, ಅ.31– ನಗರದ ಅಂಬೇಡ್ಕರ್ ಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಪದಾಧಿಕಾರಿಗಳ ಪದಗ್ರಹಣ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಹೆಚ್.ಪಿ.ಮಂಜುನಾಥ್, ಕನ್ನಡ ಚಿತ್ರಗೀತೆ ಹಾಡುವುದರಿಂದ ಕನ್ನಡದ ಬೆಳವಣಿಗೆ ಅಸಾಧ್ಯ. ಶಾಲಾ ಹಂತದಲ್ಲಿ ವ್ಯಾಕರಣ, ಪ್ರಬಂಧ, ಗಾದೆಗಳು ಮತ್ತು ನಾಡು-ನುಡಿ, ಸಂಸ್ಕೃತಿ, ಸಾಹಿತ್ಯವನ್ನು ಪ್ರೋತ್ಸಾಹಿಸುವ ಕಾರ್ಯಕ್ರಮ ಆಯೋಜಿಸುವುದರಿಂದ ಕನ್ನಡ ಭಾಷೆ ಶ್ರೀಮಂತಗೊಳಿಸಲು ಸಾಧ್ಯ ಎಂದರು.

ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ವೈ.ಡಿ.ರಾಜಣ್ಣ ಮಾತನಾಡಿ, ಪ್ರತಿಯೊಬ್ಬರೂ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬಳಸುವ ಮೂಲಕ ಬೆಳೆಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕಸಾಪ ಪದಾಧಿಕಾರಿಗಳಿಗೆ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಕನ್ನಡ ಧ್ವಜ ನೀಡಿದರು. ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಕನ್ನಡ ಭಾಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ನಗರ ಸಭಾಧ್ಯಕ್ಷೆ ಗೀತಾ, ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷೆ ಶ್ವೇತಾ, ಕಸಾಪ ಮಾಜಿ ಅಧ್ಯಕ್ಷರಾದ ಎಂ.ಚಂದ್ರಶೇಖರ್, ಮಾನಸ, ಬಿಇಓ ರೇವಣ್ಣ, ಕ್ಷೇತ್ರ ಸಮನ್ವಯಾಧಿಕಾರಿ ಕೆ.ಸಂತೋಷ್ ಕುಮಾರ್, ಕ.ರಾ.ಸ.ನೌ. ಸಂಘದ ಅಧ್ಯಕ್ಷ ಗೋವಿಂದೇಗೌಡ, ತಾಲೂಕು ಕಸಾಪ ಮಾಜಿ ಅಧ್ಯಕ್ಷರಾದ ನಂಜಮ್ಮ, ಎಸ್.ಜಯರಾಮ್, ಎಸ್.ಉಮಾಪತಿ, ವಿ.ಪಿ.ಸಾಯಿನಾಥ್, ಶ್ರೀ.ಸೋಮಶೇಖರ್ ಸೇರಿದಂತೆ ಇನ್ನಿತರರಿದ್ದರು.

ವಿದ್ಯಾರ್ಥಿಗಳಿಂದ ಪ್ರತಿಜ್ಞಾವಿಧಿ ಸ್ವೀಕಾರ



ಹನಗೋಡು, ಅ.31– ಇಲ್ಲಿಗೆ ಸಮೀಪದ ನೇರಳಕುಪ್ಪೆ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ರಾಷ್ಟ್ರೀಯ ಐಕ್ಯತಾ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಶಾಲಾವರಣದಲ್ಲಿ ವಿದ್ಯಾರ್ಥಿಗಳಿಗೆ ಮುಖ್ಯ ಶಿಕ್ಷಕ ಕುಮಾರಸ್ವಾಮಿ ಪ್ರತಿಜ್ಞಾವಿಧಿ ಬೋಧನೆ ಮಾಡಿ, ಐಕ್ಯತಾ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭಾರತದ ಉಕ್ಕಿನ ಮನುಷ್ಯ ಎಂದೇ ಖ್ಯಾತಿ ಪಡೆದಿರುವ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ 147ನೇ ಜಯಂತಿಯನ್ನು ಇಂದು ದೇಶಾದ್ಯಂತ ಆಚರಿಸಲಾಗುತ್ತಿದೆ. ಬ್ರಿಟಿಷರನ್ನು ಭಾರತದಿಂದ ಓಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ನಾಯಕರ ಸಾಲಿನಲ್ಲಿ ಸರ್ದಾರ್ ವಲ್ಲಭಬಾಯಿ ಪಟೇಲ್ ಅಗ್ರಗಣ್ಯರು. 1928ರ ಬಾರ್ದೋಲಿ ಸತ್ಯಾಗ್ರಹದಲ್ಲಿ ವಲ್ಲಭಬಾಯಿ ಪಟೇಲರು ತೋರಿದ ಅಸಾಧಾರಣ ಧೈರ್ಯ ಮತ್ತು ಚಾಕಚಕ್ಯತೆಗೆ ಮಾರುಹೋದ ಮಹಿಳೆಯರು, ಅವರಿಗೆ ಸರ್ದಾರ್ ಎಂಬ ಬಿರುದನ್ನು ನೀಡಿದ್ದರು. ಅಖಂಡ ಭಾರತದ ಒಗ್ಗೂಡುವಿಕೆಗೆ ಶ್ರಮಿಸಿದ ಮಹಾನ್ ವ್ಯಕ್ತಿ ಎಂದು ಬಣ್ಣಿಸಿದರು.

ಕೆಂಪೇಗೌಡರ ಪ್ರತಿಮೆ ಜೊತೆಗೆ ಮ್ಯೂಸಿಯಂ ಸ್ಥಾಪನೆ

ತಿ.ನರಸೀಪುರ, ಅ.31– ಬೆಂಗಳೂರಿನಲ್ಲಿ ನ.11ರಂದು ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಪ್ರಧಾನಿ ಮೋದಿ ಅನಾವರಣಗೊಳಿಸಲಿದ್ದು, ಜೊತೆಗೆ ಕೆಂಪೇಗೌಡರ ಮಾಹಿತಿ, ಇತಿಹಾಸ ಸಾರುವ ಮ್ಯೂಸಿಯಂ ಕೂಡ ಸ್ಥಾಪನೆಯಾಗಲಿದೆ ಎಂದು ಮಾಜಿ ಶಾಸಕ ಡಾ.ಭಾರತೀಶಂಕರ್ ತಿಳಿಸಿದರು.

ಬನ್ನೂರು ಹೋಬಳಿಯ ವಿವಿಧ ಗ್ರಾಮಗಳಲ್ಲಿ ನಾಡಪ್ರಭು ಕೆಂಪೇಗೌಡರ ರಥಯಾತ್ರೆ ಸ್ವಾಗತಿಸಿ, ಬೀಳ್ಕೊಡುಗೆ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು ತಮ್ಮ ದೂರದೃಷ್ಟಿಯಿಂದ ಬೆಂಗಳೂರಲ್ಲಿ ಪೇಟೆಗಳನ್ನು ಕಟ್ಟಿ, ಕೆರೆ ಕಟ್ಟೆಗಳನ್ನು ಅಭಿವೃದ್ಧಿಪಡಿಸಿ ನಾಡಪ್ರಭುಗಳಾಗಿ ಆಡಳಿತ ನಡೆಸಿದವರು. ಅವರ ಅಮೂಲ್ಯ ಸೇವೆ ಇಂದು ಬೆಂಗಳೂರನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಮಾಡಿದೆ ಎಂದರು.



ಪ್ರತಿ ಗ್ರಾಮಗಳಿಂದಲೂ ಸ್ವಲ್ಪ ಪ್ರಮಾಣದ ಮಣ್ಣನ್ನು ತೆಗೆದುಕೊಂಡು ಹೋಗಲಾಗುತ್ತಿದೆ. ಇದನ್ನು ಕೆಂಪೇಗೌಡರ ಮ್ಯೂಸಿಯಂ ಆವರಣದಲ್ಲಿ ಉದ್ಯಾನವನ ನಿರ್ಮಾಣ ಮಾಡಲು ಬಳಸಲಾಗುವುದು ಎಂದರು.

ಮಲಿಯೂರು, ಹೆಗ್ಗೂರು, ಅಂಕನಹಳ್ಳಿ, ಯಾಚೇನಹಳ್ಳಿ, ತುರುಗನೂರು, ಬೀಡನಹಳ್ಳಿ, ಹನುಮನಾಳು, ಬಿ.ಸಿ.ಹಳ್ಳಿ, ಕೊಡಗಳ್ಳಿ ಗ್ರಾಪಂಗಳಲ್ಲಿ ರಥಕ್ಕೆ ಪೂಜೆ ಸಲ್ಲಿಸಲಾಯಿತು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜು, ಯಾಚೇನಹಳ್ಳಿ ಗ್ರಾಪಂ ಅಧ್ಯಕ್ಷೆ ಸರೋಜಮ್ಮ, ಸದಸ್ಯ ಶೇಖರ್, ಡೈರಿ ಅಧ್ಯಕ್ಷ ವೈ.ಎಸ್.ಮಲ್ಲೇಶ್, ಅಂಕನ ಹಳ್ಳಿ ಗ್ರಾಪಂ ಸದಸ್ಯ ಮಹದೇವಯ್ಯ, ಕುಪ್ಪಟ್ಟಯ್ಯ, ಎಂ.ವಿ. ಸುಬ್ರಹ್ಮಣ್ಯ, ಸಿಇಓ ಕ್ಯಾತೇಗೌಡ, ಡಾ.ಮಲ್ಲಿಕಾರ್ಜುನ್, ವೈ.ಎಂ. ಚಂದ್ರು, ಪುಟ್ಟಪ್ಪ, ದೇವರಾಜು, ನಾರಾಯಣ ಸ್ವಾಮಿ, ಸಂತೋಷ್ ಕುಮಾರ್, ಹನುಮ ನಾಳು ಗ್ರಾಪಂ ಸದಸ್ಯ ದೀಪು, ನಂಜಿ, ರಾಮ ಚಂದ್ರ, ಕೊಡಗಳ್ಳಿ ಗ್ರಾಪಂ ಅಧ್ಯಕ್ಷ ಧನಂಜಯ್, ಕೆ.ಪಿ.ಶಿವಕುಮಾರ್, ಕೆಜಿ.ಚಿಕ್ಕಜವರಪ್ಪ, ಸದಸ್ಯ ಎಂ.ಎಂ. ರಮೇಶ್, ಸ್ವಾಮಿ, ರಾಜುಗೌಡ ಇತರರಿದ್ದರು.

ಡಿಆರ್‌ಸಿ ಸಿನಿಮಾಸ್

DRC CINEMAS

ದೂ : 4240422/4241800

- ಸ್ಕ್ರೀನ್ 1 **ಗಂಧದಗುಡಿ (ಕ)**: ಬೆ.6.20ಕ್ಕೆ, ಬೆ.8.20ಕ್ಕೆ, ರಾ.10.10ಕ್ಕೆ, **ಕಾಂತಾರ (ಕ)**: ಬೆ10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ.
- ಸ್ಕ್ರೀನ್ 2 **ಗಂಧದಗುಡಿ (ಕ)**: ಬೆ.6.20ಕ್ಕೆ, ಬೆ.8.25ಕ್ಕೆ, **ಹೆಡ್ ಬುಷ್(ಕ)**: 10.40ಕ್ಕೆ, ಮ.1.25ಕ್ಕೆ, **ಕಾಂತಾರ (ಕ)**: ಸಂ.4.10ಕ್ಕೆ, 9.50ಕ್ಕೆ, **ರಾಮ್ ಸೇತು (ಹಿಂ)**: ರಾ.7ಕ್ಕೆ.
- ಸ್ಕ್ರೀನ್ 3 **ಗಂಧದಗುಡಿ (ಕ)**: ಬೆ.6.20ಕ್ಕೆ, ಬೆ.8.35ಕ್ಕೆ, ಮ.1.20ಕ್ಕೆ, ಮ.3.25ಕ್ಕೆ, ಸಂ.5.30ಕ್ಕೆ, ರಾ.7.35ಕ್ಕೆ, **ಬ್ಲ್ಯಾಕ್ ಆಡಮ್ (ಇಂ)**: ಬೆ.10.45ಕ್ಕೆ, **ಕಾಂತಾರ (ಕ)**: ರಾ.9.55ಕ್ಕೆ.
- ಸ್ಕ್ರೀನ್ 4 **ಗಂಧದಗುಡಿ (ಕ)**: ಬೆ.6.20ಕ್ಕೆ, ಬೆ.8.20ಕ್ಕೆ, ಬೆ.10.15ಕ್ಕೆ, ಮ.12.15ಕ್ಕೆ, ಮ.2.15ಕ್ಕೆ, ಸಂ.4.15ಕ್ಕೆ, ಸಂ.6.15ಕ್ಕೆ, ರಾ.8.15ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

- ಸ್ಕ್ರೀನ್ 1 **ರಾಮ್‌ಸೇತು (ಹಿಂ)**: ಬೆ.9.20ಕ್ಕೆ, **ಕಾಂತಾರ (ಕ)**: ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 2 **ಗಂಧದಗುಡಿ (ಕ)**: ಬೆ.9ಕ್ಕೆ, ಬೆ.11.05ಕ್ಕೆ, ಮ.1.10ಕ್ಕೆ, ಮ.3.20ಕ್ಕೆ, ರಾ.8.20ಕ್ಕೆ, ರಾ.10.30ಕ್ಕೆ, **ಹೆಡ್ ಬುಷ್ (ಕ)**: ಸಂ.5.30ಕ್ಕೆ.
- ಸ್ಕ್ರೀನ್ 3 **ಕಾಂತಾರ (ಕ)**: ಬೆ.10ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ, **ಥ್ಯಾಂಕ್ ಗಾಡ್ (ಹಿಂ)**: ಮ.1.10ಕ್ಕೆ.
- ಸ್ಕ್ರೀನ್ 4 **ಕಾಂತಾರ (ಕ)**: ಬೆ.10.45ಕ್ಕೆ, **ಹೆಡ್ ಬುಷ್ (ಕ)**: ಮ.1.45ಕ್ಕೆ, **ರಾಮ್ ಸೇತು (ಹಿಂ)**: ಸಂ.4.35ಕ್ಕೆ, ರಾ.10.10ಕ್ಕೆ, **ಥ್ಯಾಂಕ್ ಗಾಡ್ (ಹಿಂ)**: ರಾ.7.35ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

- ಸ್ಕ್ರೀನ್ 1 **ಭೂ ನಾಟಕ ಮಂಡಳಿ(ಕ)**: ಬೆ.10.20ಕ್ಕೆ, **ಸರ್ದಾರ್ (ತ)**: ಮ.12.40ಕ್ಕೆ, **ಪ್ರಿನ್ಸ್ (ತ)**: ಮ.3.50ಕ್ಕೆ, ಸಂ. 6.40ಕ್ಕೆ **ಮಾನ್ಸ್ಟರ್ (ಮ)**: ರಾ.9.30ಕ್ಕೆ
- ಸ್ಕ್ರೀನ್ 2 **ಕಾಂತಾರ (ಕ)**: ಬೆ.10.15ಕ್ಕೆ, **ಸಂ. 4ಕ್ಕೆ, ಹೆಡ್ ಬುಷ್ (ಕ)**: ಮ.1.10ಕ್ಕೆ, ಸಂ.7ಕ್ಕೆ, ರಾ.9.45ಕ್ಕೆ.
- ಸ್ಕ್ರೀನ್ 3 **ಹೆಡ್ ಬುಷ್ (ಕ)**: ಬೆ.10ಕ್ಕೆ, ಮ.3.55ಕ್ಕೆ, **ಕಾಂತಾರ (ಕ)**: ಮ.1ಕ್ಕೆ, ಸ.6.40ಕ್ಕೆ, 9.45ಕ್ಕೆ
- ಸ್ಕ್ರೀನ್ 4 **ಕಥಾನಾಯಕ (ಕ)**: ಬೆ.10.15ಕ್ಕೆ, **ಪ್ರಿನ್ಸ್ (ತ)**: ಮ.1ಕ್ಕೆ, **ಸರ್ದಾರ್ (ತ)**: ಮ. 3.55ಕ್ಕೆ, **ಮಾನ್ಸ್ಟರ್ (ಮ)**: ಸಂ.7.05ಕ್ಕೆ, **ಸರ್ದಾರ್ (ತ)**: ರಾ. 9.45ಕ್ಕೆ

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, **ದಿ ಬ್ಲ್ಯಾಕ್ ಆಡಮ್ (ಇ)**: ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, **ಪ್ರಿನ್ಸ್ (ತ)**: ಮ.12.40ಕ್ಕೆ, ರಾ.7.10ಕ್ಕೆ **ಸರ್ದಾರ್ (ತ)**: ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗಂಧದಗುಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸರ್ದಾರ್ (ತ)	4 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	5 ಪ್ರದರ್ಶನಗಳು
ಲಿಡೋ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಮ್ ಸೇತು (ಹಿಂ)	4 ಪ್ರದರ್ಶನಗಳು
ಪ್ರಭಾ	
ತೋತಾಪುರಿ (ಕ)	4 ಪ್ರದರ್ಶನಗಳು

ಬೆಟ್ಟಹಳ್ಳಿ ಮಾರಮ್ಮ ದೇವಾಲಯದ ವಾರ್ಷಿಕೋತ್ಸವ

ತಿ.ನರಸೀಪುರ, ಅ.31– ತಾಲೂಕಿನ ಟಿ.ಬೆಟ್ಟಹಳ್ಳಿ ಮಾರಮ್ಮ ದೇವಸ್ಥಾನದ 14ನೇ ವಾರ್ಷಿಕೋತ್ಸವ ಇಂದು ಆರಂಭಗೊಂಡಿತು.

ಸೋಮವಾರ ಸಂಜೆ ಯಾಗಶಾಲೆ ಪ್ರವೇಶ ಮತ್ತು ಬಲಿ, ಮಹಾಗಣಪತಿ ಪೂಜೆ, ಪುಣ್ಯಾಹ, ವಾಸ್ತು ರಾಕ್ಷೋಘ್ನ ಹೋಮ, ಮೃತ್ಯುಂಜಯ ಸಹಿತ ನವಗ್ರಹ ಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆದವು.

ನಾಳೆ (ನ.1) ಬೆಳಗ್ಗೆ 6 ಗಂಟೆಗೆ ಪ್ರಧಾನ ಕಳಸ ಆರಾಧನೆ, ಹೋಮ, ಪೂರ್ಣಾಹುತಿ ನೆರವೇರಲಿದ್ದು, ಬೆಳಗ್ಗೆ 9.46 ನಂತರ ವಾರ್ಷಿಕ ಕುಂಬಾಭಿಷೇಕ, ರಾಜೋಪಚಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದ್ದು, ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಟಿ. ಬೆಟ್ಟಹಳ್ಳಿ ಮಾರಮ್ಮ ಪರೋಪಕಾರಿ ವಿಶ್ವಸ್ಥ ಸಮಿತಿ ತಿಳಿಸಿದೆ.

ಬೆಳಗ್ಗೆ 11.30 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ತಲಕಾಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಎಸ್.ವಿ. ಮುರಳೀಧರ ಹಾಗೂ ಡಾ. ಎಂ.ಬಿ. ಶಿವರಾಮು ಪಾಲ್ಗೊಳ್ಳಲಿದ್ದಾರೆ.



ಇತ್ತೀಚೆಗೆ ಹಾಸನದಲ್ಲಿ ನಡೆದ ವಿಭಾಗೀಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಹೆಚ್.ಡಿ. ಕೋಟೆ ತಾಲೂಕಿನ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆ ಬಾಲಕಿಯರು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ವೇಳೆ ಹಾಸನ ಜಿಲ್ಲಾ ದೈಹಿಕ ಶಿಕ್ಷಕ ವೆಂಕಟೇಶ್, ಶಾಲೆ ದೈಹಿಕ ಶಿಕ್ಷಕ ರಮೇಶ್, ಶಿಕ್ಷಕರಾದ ಫಜಲ್, ರಘು, ಮೇರಿ, ವಿದ್ಯಾರ್ಥಿಗಳಿದ್ದರು.

ತಿಮ್ಮದಾಸ ನಾಯಕ ನಿಧನ



ಸರಗೂರು, ಅ.31– ಪಟ್ಟಣದ 1ನೇ ವಾರ್ಡ್ ನಿವಾಸಿ, ಹಿರಿಯ ಕಲಾವಿದ ತಿಮ್ಮದಾಸ ನಾಯಕ (77) ಸೋಮವಾರ ಸಂಜೆ ನಿಧನರಾದರು. ಮೃತರು ಪುತ್ರ ಕೆನರಾ ಬ್ಯಾಂಕ್ ವ್ಯವಸ್ಥಾಪಕ ರವಿಕುಮಾರ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಪಟ್ಟಣದ ನಾಯಕರ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲ ತಿಳಿಸಿದೆ.

ಸಿದ್ದಣ್ಣ



ನಂಜನಗೂಡು, ಅ.31– ನಗರದ ಚಾಮಲಾಪುರ ಬೀದಿ ನಿವಾಸಿ ಸಿದ್ದಣ್ಣ(72) ಭಾನುವಾರ ಸಂಜೆ ನಿಧನರಾದರು. ಮೃತರು ಪತ್ನಿ, ಪತ್ರಕರ್ತ ಎಸ್.ಮಹದೇವು ಸೇರಿದಂತೆ ಮೂವರು ಪುತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಲಿಂಗಭಟ್ಟರ ಗುಡಿಯ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನನ್ನ ಅಧಿಕಾರಾವಧಿಯಲ್ಲಿ 324 ದೇವಾಲಯ ಜೀರ್ಣೋದ್ಧಾರ

ಅರ್ಚಕರ ಸಭೆಯಲ್ಲಿ ಶಾಸಕ ಸಾ.ರಾ.ಮಹೇಶ್

ಕೆ.ಆರ್.ನಗರ, ಅ.31– ನನ್ನ ಅಧಿಕಾರಾವಧಿಯಲ್ಲಿ ಕೆ.ಆರ್.ನಗರ, ಸಾಲಿಗ್ರಾಮ ತಾಲೂಕಿನ 324 ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಲಾಗಿದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಶಿವಾನುಭವ ಕಲ್ಯಾಣ ಮಂಟಪದಲ್ಲಿ ನಡೆದ ಅರ್ಚಕರ ಸಂಘದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಯಾವುದೇ ತಾಲೂಕಿನಲ್ಲೂ ನಡೆಯದಷ್ಟು ದೇವಾಲಯಗಳ ಅಭಿವೃದ್ಧಿ ಈ ಎರಡೂ ತಾಲೂಕುಗಳಲ್ಲಿ ನಡೆದಿದೆ ಎಂದರು.

ಚುಂಚನಕಟ್ಟೆ ಶ್ರೀರಾಮ ದೇವಸ್ಥಾನಕ್ಕೆ 12 ಕೋಟಿ, ಅರ್ಕೇಶ್ವರ ದೇವಸ್ಥಾನಕ್ಕೆ 10 ಕೋಟಿ, ಸಾಲಿಗ್ರಾಮದ ಯೋಗಾನರಸಿಂಹ, ಭಾಸ್ಕರಸ್ವಾಮಿ, ಈಶ್ವರ ದೇವಾಲಯಗಳಿಗೆ 2 ಕೋಟಿ, ಮೇಲೂರು, ಮಿರ್ಲೆ, ತಿಪ್ಪೂರು, ಭೇರ್ಯ, ಚಂದಗಾಲು ಸೇರಿದಂತೆ 2 ತಾಲೂಕಿನ ಎಲ್ಲಾ ಪುರಾತನ ದೇವಾಲಯಗಳನ್ನು ಅಭಿವೃದ್ಧಿಪಡಿಸಲಾಗಿದೆ. ಉಳಿದ ದೇವಾಲಯಗಳ ಪಟ್ಟಿ ನೀಡುವಂತೆ ತಾಲೂಕು ಆಡಳಿತಕ್ಕೆ ತಿಳಿಸಿದ್ದು, ಮುಂದಿನ ದಿನಗಳಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಅರ್ಚಕರು ದೇವರನ್ನು ಭಕ್ತಿಯಿಂದ ಪೂಜಿಸಿದರೆ ತಾಲೂಕಿನ ಜನ ಸಮೃದ್ಧಿಯಾಗಿರುತ್ತಾರೆ. ಹೀಗಾಗಿ ದೇವರ ಜೊತೆ ನೀವಿದ್ದರೆ ನಿಮ್ಮೊಂದಿಗೆ ನಾವಿರುತ್ತೇವೆ ಎಂದರು. ದೇವರನ್ನು ನಂಬುವವರು ನಂಬುತ್ತಾರೆ. ನಂಬದವರು ನಂಬುವುದಿಲ್ಲ. ಆದರೆ ನಾನು ದೇವರನ್ನು ನಂಬುತ್ತೇನೆ. ತಾಲೂಕಿನಲ್ಲಿ ಅಲ್ಪ ಸ್ವಲ್ಪ ಸತ್ಯ, ಪ್ರಾಮಾಣಿಕತೆ ಇದ್ದರೆ ಅದು ಅರ್ಚಕರಿಂದ ಮಾತ್ರ ದೇವಾಲಯದ ಪೂಜೆಯಿಂದ ಜೀವನ ಸಾಗಿಸುವುದು ಕಷ್ಟ ಎಂಬುದು ನನಗೂ ತಿಳಿದಿದೆ. ಆದರೆ ವ್ಯವಸ್ಥೆ ಜೊತೆ ಹೊಂದಿಕೊಂಡು ಹೋಗಬೇಕಾಗುತ್ತದೆ. ಈ ವೃತ್ತಿಯ ಜೊತೆಗೆ ಮತ್ತೊಂದು ವೃತ್ತಿ ಮಾಡಿಕೊಳ್ಳುವಂತೆ ತಿಳಿಸಿದರು.



ಅರ್ಚಕರ ಸಂಘದ ಬೇಡಿಕೆ ಆಲಿಸಿದ ಶಾಸಕರು, ಈಗಾಗಲೇ 6 ಸಂಘ ಸಂಸ್ಥೆಗಳಿಗೆ ನಿವೇಶನ ನೀಡಲು ತೀರ್ಮಾನಿಸಲಾಗಿದೆ. ಮುಂದಿನ ದಿನಗಳಲ್ಲಿ ನಿಮ್ಮ ಸಂಘಕ್ಕೂ ನಿವೇಶನ ನೀಡಲಾಗುವುದು. ಯಾವುದೇ ಕಾರಣಕ್ಕೂ ಬೇರೊಂದು ಸಂಘ ಮಾಡಬೇಡಿ ಎಂದ ಅವರು, ಸಂಘದಲ್ಲಿ ಭಿನ್ನಾಭಿಪ್ರಾಯ ಮಾಡಿಕೊಳ್ಳಬೇಡಿ. ಹಿಂದೆ ನೀಡುತ್ತಿದ್ದಂತೆ ಮುಂದೆಯೂ ನಾನಿರುವ ತನಕ ಸಹಾಯ ಮಾಡುತ್ತೇನೆ. ನಿಮ್ಮ ಸಂಘದಿಂದ ಮೃತರ ಕುಟುಂಬಕ್ಕೆ ನೀಡುತ್ತಿರುವ 5 ಸಾವಿರದ ಜೊತೆ ನಾನೂ 5 ಸಾವಿರ ರೂ. ನೀಡುತ್ತೇನೆ ಎಂದರು.

> ಅರ್ಚಕರು ನೆಮ್ಮದಿಯಿಂದ ಜೀವನ ಸಾಗಿಸಲು ಸಹಾಯ ಮಾಡುವ ಶಾಸಕರಿದ್ದರೆ ಅದು ನಮ್ಮ ಶಾಸಕರಾದ ಸಾ.ರಾ.ಮಹೇಶ್. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ನೂರಕ್ಕೆ ನೂರರಷ್ಟು ಮತ ನೀಡಿ ಅವರನ್ನು ಗೆಲ್ಲಿಸುತ್ತೇವೆ.
> – ಶೇಷಾಚಲಂ, ಪ್ರಧಾನ ಕಾರ್ಯದರ್ಶಿ, ಅರ್ಚಕರ ಸಂಘ.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಎಂ.ಎಸ್.ಯದುಗಿರೀಶ್, ಪುರಸಭೆ ಮಾಜಿ ಅಧ್ಯಕ್ಷ ರಾಜ ಶ್ರೀಕಾಂತ್, ಸದಸ್ಯ ತೋಂಟದಾರ್ಯ, ಮುಖಂಡ ಡೈರಿ ಪ್ರಕಾಶ್, ಸಂಘದ ಅಧ್ಯಕ್ಷ ಎ.ವಿ.ವೆಂಕಟೇಶ್ ಕುಮಾರ್, ಕಾರ್ಯದರ್ಶಿ ಶೇಷಾಚಲಂ, ಖಜಾಂಚಿ ಸೀತಾರಾಂ, ನಿರ್ದೇಶಕರಾದ ರೇವಣ್ಣ, ಸೋಮಣ್ಣ, ಚನ್ನವೀರಯ್ಯ, ಶಿವರುದ್ರಪ್ಪ, ಪ್ರಭು, ಬಸವರಾಜ್, ಸುರೇಶ್, ಸೇರಿದಂತೆ ಇನ್ನಿತರರಿದ್ದರು.

ವಿವಿಧ ವಿಚಾರಗಳ ಸಂಬಂಧ ನಾನಾ ಸಂಘಟನೆಗಳಿಂದ ಪ್ರತಿಭಟನೆ



ಒಬಿಸಿ ಸಂಶೋಧನಾ ವಿದ್ಯಾರ್ಥಿಗಳ ಪ್ರತಿಭಟನೆ



ಕ್ರಾಫರ್ಡ್ ಭವನದ ಮುಂದೆ ಎಬಿವಿಪಿ ಕಾರ್ಯಕರ್ತರ ಪ್ರತಿಭಟನೆ

ಮೈಸೂರು,ಅ.31(ಎಸ್‌ಪಿಎನ್)–ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ, ಎಬಿವಿಪಿ ಪದಾಧಿಕಾರಿಗಳು ನಗರದ ಪ್ರತ್ಯೇಕ ಸ್ಥಳದಲ್ಲಿ ಸೋಮವಾರ ಪ್ರತಿಭಟಿಸಿ ಮನವಿ ಸಲ್ಲಿಸಿದರೆ, ಎಸ್‌ಡಿಪಿಐ ಕಾರ್ಯಕರ್ತರು ಮೈಸೂರು ನಗರ ಪಾಲಿಕೆ ಆಯುಕ್ತರ ಕಚೇರಿಗೆ ಭೇಟಿ ನೀಡಿ, ಮನವಿ ಸಲ್ಲಿಸಿದ್ದಾರೆ.

ಶಿಷ್ಯವೇತನ ಹೆಚ್ಚಳಕ್ಕೆ ಆಗ್ರಹ: ಮೈಸೂರು ವಿವಿ ಕ್ರಾಫರ್ಡ್ ಮುಂಭಾಗ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆಯ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ, ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು 12 ಸಾವಿರ ರೂ.ನಂತೆ 3 ವರ್ಷ ಶಿಷ್ಯವೇತನ ನೀಡಲಾಗುತ್ತಿದೆ. ಆದರೆ, ಈ ವೇತನದಿಂದ ಯಾವುದೇ ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಎಲ್ಲಾ ವರ್ಗದ ಸಂಶೋಧನಾ ವಿದ್ಯಾರ್ಥಿಗಳಿಗೂ ತಾರತಮ್ಯವಿಲ್ಲದೆ ಸರಿ ಸಮಾನ ಶಿಷ್ಯವೇತನ ನೀಡಬೇಕು. ಕೂಡಲೇ ನ.5ರಂದು ಮೈಸೂರು ವಿವಿ ಸಿಂಡಿಕೇಟ್ ಸಭೆಯಲ್ಲಿ ಈ ಸಂಬಂಧ ತೀರ್ಮಾನ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಪರೀಕ್ಷೆ ದಿನಾಂಕ ಮುಂದೂಡಿಕೆ: ಮೈಸೂರು ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ಕೆಲ ದಿನಗಳ ಕಾಲ ಮುಂದೂಡುವಂತೆ ಒತ್ತಾಯಿಸಿ ಎಬಿವಿಪಿ ಕಾರ್ಯಕರ್ತರು ಸೋಮವಾರ ಮೈಸೂರು ವಿವಿ ಮುಂಭಾಗ ಪ್ರತಿಭಟನೆ ನಡೆಸಿದರು.

ನ.3ರಿಂದಲೇ ಸ್ನಾತಕೋತ್ತರ ಪದವಿ ಪರೀಕ್ಷೆಗಳು ಆರಂಭವಾಗಲಿವೆ. ಆದರೆ, ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ತಯಾರಾಗಲು ಸಾಕಷ್ಟು ಸಮಯ ಸಿಗದ ಹಿನ್ನಲೆಯಲ್ಲಿ ಪರೀಕ್ಷೆಗಳನ್ನು ಮುಂದೂಡುವಂತೆ ಪ್ರತಿಭಟನೆ ಮೂಲಕ ಆಗ್ರಹಿಸಿದರು. ಇದಕ್ಕೂ ಮುನ್ನ ಎಬಿವಿಪಿ ಕಾರ್ಯಕರ್ತರು ಎಬಿವಿಪಿ ಕಚೇರಿಯಿಂದ ಜಾಥಾ ಹೊರಟು, ಮಾನಸಗಂಗೋತ್ರಿ ಹಾಗೂ ಮೈಸೂರು ವಿವಿ ಮುಂಭಾಗ ಪ್ರತಿಭಟನೆ ನಡೆಸಿ, ಕುಲಸಚಿವ(ಪರೀಕ್ಷಾಂಗ)ರಿಗೆ ಮನವಿ ಸಲ್ಲಿಸಿದರು. ಈ ವೇಳೆ ಎಬಿವಿಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಶ್ರೇಯಸ್, ನಮಿತಾ, ಜಿಲ್ಲಾ ಸಂಚಾಲಕ ಶಿವು, ನಗರ ಕಾರ್ಯದರ್ಶಿ ಪ್ರಜ್ವಲ್, ನಗರ ಕಾರ್ಯಕಾರಿಣಿ ಸದಸ್ಯ ಆಕಾಶ ಇನ್ನಿತರ ಕಾರ್ಯಕರ್ತರು ಉಪಸ್ಥಿತರಿದ್ದರು.

ನೀರಿನ ಸಂಪರ್ಕ ಕಲ್ಪಿಸಿ: ಮೈಸೂರಿನ ಭಾರತ್ ನಗರ ಮತ್ತು ತನ್ವೀರ್ ಸೇಟ್ ಬಡಾವಣೆಯಲ್ಲಿ ನೀರಿನ ಸಂಪರ್ಕವನ್ನು ಯಾವುದೇ ಮುನ್ಸೂಚನೆ ನೀಡದೆ ಪಾಲಿಕೆ ಅಧಿಕಾರಿಗಳು ಕಡಿತಗೊಳಿಸುತ್ತಿದ್ದು, ಇದರಿಂದ ಇಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ನೀರಿನ ಸಂಪರ್ಕ ಕಡಿತಗೊಳಿಸದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವಂತೆ ಮೈಸೂರು ನಗರ ಪಾಲಿಕೆ ಆಯುಕ್ತರಿಗೆ, ಎಸ್‌ಡಿಪಿಐ ಕಾರ್ಯಕರ್ತರು ಮನವಿ ಸಲ್ಲಿಸಿದ್ದಾರೆ.

ಇಂದಿನಿಂದ ಎರಡು ದಿನ ಕನ್ನೇಗೌಡನ ಕೊಪ್ಪಲಿನ ಶ್ರೀಮಾರಮ್ಮ ದೇವಾಲಯದ 15ನೇ ವಾರ್ಷಿಕ ಕುಂಭಾಭಿಷೇಕ

ಮೈಸೂರು, ಅ.31– ಮೈಸೂರಿನ ಕನ್ನೇಗೌಡನ ಕೊಪ್ಪಲಿನ ಶ್ರೀಮಾರಮ್ಮ ದೇವಾಲಯದ 15ನೇ ವಾರ್ಷಿಕ ಕುಂಭಾಭಿಷೇಕ ಮಹೋತ್ಸವ ನ.1 ಹಾಗೂ 2ರಂದು ನಡೆಯಲಿದೆ ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ. ನ.1ರಂದು ಗೋಧೂಳಿ ಲಗ್ನದಲ್ಲಿ ಅನುಜ್ಞೆ, ಅಗ್ರತೀರ್ಥ ಸಂಗ್ರಹ ಸಮೇತ ಯಾಗಶಾಳೆ ಪ್ರವೇಶ, ಪ್ರವೇಶ ಬಲಿ, ಗಣಪತಿ ಪೂಜಾಪೂರ್ವಕ ಪುಣ್ಯಾಹ, ಪಂಚಗವ್ಯ ಸಾಧನ, ಪ್ರೋಕ್ಷಣೆ, ವಾಸ್ತು ಪೂಜೆ, ಗಣ ಹೋಮ, ನವಗ್ರಹ ಮೃತ್ಯುಂಜಯ ಪೂಜೆ ಹೋಮ, ಪೂರ್ಣಾಹುತಿ ನಡೆಯಲಿದೆ.

ನ.2ರಂದು ಪ್ರಾತಃ ಪುಣ್ಯಾಹ, ಪ್ರಧಾನ ಕಳಸ ಸ್ಥಾಪನೆ, ಪೂಜೆ ಹಾಗೂ ದುರ್ಗಾಹೋಮ, ಸಪ್ತಮಾತೃಕಾ ಹೋಮ, ಪೂರ್ಣಾಹುತಿ, ಕಳಾಹೋಮ, 10.39ರಿಂದ 11.30ರವರೆಗೆ ಕುಂಭಾಭಿಷೇಕ, ಅಲಂಕಾರ, ಮಹಾನೇವೈದ್ಯ ನಡೆಯಲಿದೆ. ಅಲ್ಲದೇ ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ ಹಾಗೂ ತೀರ್ಥ ಪ್ರಸಾದ ವಿನಿಯೋಗ, ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಬೆಂಗಳೂರಿನ ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಚಂದ್ರಶೇಖರ ಸ್ವಾಮೀಜಿ ಅವರ ಸಮ್ಮುಖದಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮನಾಥಸ್ವಾಮೀಜಿ ಅವರು ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಜಿ.ಟಿ.ದೇವೇಗೌಡ, ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ಸಿ.ಎಸ್.ಮಂಜೇಗೌಡ, ಮಾಜಿ ಶಾಸಕ ವಾಸು, ಮೇಯರ್ ಶಿವಕುಮಾರ್, ಮಹಾನಗರ ಪಾಲಿಕೆ 42ನೇ ವಾರ್ಡ್ ಸದಸ್ಯ ಶಿವಕುಮಾರ್, 49ನೇ ವಾರ್ಡ್ ಸದಸ್ಯೆ ಸೌಮ್ಯ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕುಂಭಾಭಿಷೇಕ ಮಹೋತ್ಸವದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕನ್ನೇಗೌಡನ ಕೊಪ್ಪಲು, ಜಯನಗರ, ಚಿನ್ನಗಿರಿಕೊಪ್ಪಲು ಗರಡಿ ಗ್ರಾಮದ ಯಜಮಾನರು, ಯುವಕರು, ಎಲ್ಲಾ ಸಂಘ ಸಂಸ್ಥೆಗಳ ಅಧ್ಯಕ್ಷರು, ಸದಸ್ಯರು ಮನವಿ ಮಾಡಿದ್ದಾರೆ.

ನಂದಿನಿ ಹಾಲಿನ ದರ ಶೀಘ್ರ ಲೀ.ಗೆ 3 ರೂ. ಹೆಚ್ಚಳ!

ಬೆಳಗಾವಿ: ಶೀಘ್ರವೇ ನಂದಿನಿ ಹಾಲಿನ ದರ ಪರಿಷ್ಕರಣೆ ಮಾಡಿ ಪ್ರತಿ ಲೀಟರ್ ಹಾಲಿಗೆ 3 ರೂ. ಹೆಚ್ಚಳ ಮಾಡಲಾಗುವುದು ಎಂದು ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಹೇಳಿದರು. ಕಿತ್ತೂರಿನ ಹೂಲಿಕಟ್ಟಿ ಕ್ರಾಸ್‌ನಲ್ಲಿ 10 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಹೂಲಿಕಟ್ಟಿ ಶಿಥಲೀಕರಣ ಕೇಂದ್ರದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ನಂದಿನಿ ಹಾಲಿನ ದರ ಪರಿಷ್ಕರಣೆ ಹಣ ಸಂಪೂರ್ಣವಾಗಿ ರೈತರಿಗೆ ಸಂದಾಯವಾಗಲಿದೆ. ರಾಜ್ಯದ 16 ಜಿಲ್ಲಾ ಹಾಲು ಒಕ್ಕೂಟಗಳು ಕೆಎಂಎಫ್‌ಗೆ ಹಾಲಿನ ದರ ಪರಿಷ್ಕರಿಸುವಂತೆ ಪ್ರಸ್ತಾವ ಸಲ್ಲಿಸಿವೆ ರೈತರ ಹಿತದೃಷ್ಟಿಯಿಂದ ಹಾಲಿನ ದರ ಏರಿಕೆ ಮಾಡುವುದು ಅನಿವಾರ್ಯ. ಈ ಸಂಬಂಧ ಈಗಾಗಲೇ ಸಾಮಾನ್ಯ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಟಿ.ಕೆ. ಲೇಔಟ್, 4ನೇ ಹಂತ, 9ನೇ ಕ್ರಾಸ್, 6ನೇ ಮೇನ್, ಮನೆ ನಂ. 333 ರಲ್ಲಿ ವಾಸವಾಗಿರುವ ಜೆ. ಉಮೇಶ್ ರವರ ಧರ್ಮಪತ್ನಿಯಾದ ಶ್ರೀಮತಿ ಸವಿತ ಎಂ.ವಿ. ರವರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಅದರ ಮಾಲೀಕರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ನುಗ್ಗಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಕುಳ್ಳೇಗೌಡರವರ ಮಗನಾದ ಶ್ರೀ ಕೆ. ಸಿದ್ದೇಗೌಡ ರವರೊಂದಿಗೆ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಒಪ್ಪಿ ಸದರಿ ಯವರೊಂದಿಗೆ ಕ್ರಯದ ಕರಾರನ್ನು ಮಾಡಿಕೊಳ್ಳುವವರಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿ ದಂತೆ ಬೇರೆ ಯಾರಿಗಾದರೂ ಹಕ್ಕು, ಹಿತಾಸಕ್ತಿ, ಸ್ವಾಧೀನ, ನ್ಯಾಯಾಲಯದಲ್ಲಿ ದಾವೆ ಇದ್ದ ಸಂಬಂಧ ವಗೈರೆಗಳು ಇದ್ದಲ್ಲಿ, ಈ ತಿಳುವಳಿಕೆ ಪ್ರಕಟಣೆಗೊಂಡ 07 ದಿನಗಳೊಳಗಾಗಿ ನಮ್ಮ ಕಛೇರಿಗೆ ತಕರಾರನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಯಾವುದೇ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿ ದಾರರು ಷೆಡ್ಯೂಲ್ ಸ್ವತ್ತಿನ ಕ್ರಯದ ಕರಾರು ಪತ್ರವನ್ನು ನೋಂದಣಿ ಮಾಡಿಸಿಕೊಳ್ಳಲು ಸಿದ್ಧ ರಿರುತ್ತಾರೆಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೀರ್ಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 97/2 ಎ ರಲ್ಲಿ ವಿಂಗಡಿಸಿರುವ ಖಾತಾ ಜಂಜರ್ ನಂ. 69ರ 01ನೇ ನಂಬರ್ ಸ್ವತ್ತಿನ ವಿಸ್ತೀರ್ಣ 30x40 ಅಡಿಯುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ:

ಪೂರ್ವಕ್ಕೆ: 20 ಅಡಿ ರಸ್ತೆ ; ಪಶ್ಚಿಮಕ್ಕೆ: ದೇವರ ಮನೆ ಜಮೀನು ; ಉತ್ತರಕ್ಕೆ: ನಾಗರಾಜು ರವರ ನಿವೇಶನ ; ದಕ್ಷಿಣಕ್ಕೆ: ಜಗದೀಶ್ ರವರ ನಿವೇಶನ.

ಈ ಮಧ್ಯೆ ಇರುವ ವಿಸ್ತೀರ್ಣ ಪೂರ್ವಪಶ್ಚಿಮ 30 ಅಡಿ, ಉತ್ತರ ದಕ್ಷಿಣ 40 ಅಡಿಗಳುಳ್ಳ ಖಾಲಿ ನಿವೇಶನ ನಮ್ಮ ಕಕ್ಷಿದಾರರ ಕ್ರಯದ ಕರಾರು ಮಾಡಿಕೊಳ್ಳಲು ಇಚ್ಛಿಸಿರುವ ಸ್ವತ್ತಾಗಿರುತ್ತದೆ. ಸದರಿ ಸ್ವತ್ತು ಪಟ್ಟಣ ಪಂಚಾಯ್ತಿ ಬೋಗಾಧಿ ಕಾರ್ಯಾಲಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

Sd/- J. Suresh, B.Com., LL.B.,
Advocate, No. 1, 1st Floor,
1st Cross, 2nd Main, Jayanagar,
Mysuru. Mob: 9448322896

ದಿನಾಂಕ: 31–10–2022

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು, ರಾಮಕೃಷ್ಣನಗರ, ಇಂಜಿನಿಯರ್ಸ್ ಕ್ಲಬ್ ಹತ್ತಿರ, ವಿಶ್ವಮಾನವ ಬಿ ಅಡ್ಡ ರಸ್ತೆ, ನಂಬರ್ 1597ರ ನಿವಾಸಿಯಾದ ಸತ್ಯವತಿ ಎಂ.ವಿ. ಕೋಂ. ಸಿ. ಶ್ರೀನಿವಾಸನ್ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು, ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಮರಟೀಕ್ಯಾತನಹಳ್ಳಿ ಗ್ರಾಮದ ಸರ್ವೆ ನಂಬರ್, 6/2 ರಲ್ಲಿನ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ ರವರ ಆದೇಶ ಸಂಖ್ಯೆ 187578, ದಿನಾಂಕ 21-11-2020 ರಂತೆ ವಾಸೋಪಯೋಗಿ ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ ಒಂದು ಎಕರೆ (1.00.00.00) ವಿಸ್ತೀರ್ಣದ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್ : 6/3 ; ಪಶ್ಚಿಮಕ್ಕೆ:– ಸರ್ವೆ ನಂಬರ್: 6/1 ಮತ್ತು ಸರ್ವೆ ನಂಬರ್: 7 ; ಉತ್ತರಕ್ಕೆ:– ಸರ್ವೆ ನಂಬರ್ : 6/8 ; ದಕ್ಷಿಣಕ್ಕೆ:– ಸರ್ವೆ ನಂಬರ್: 6/1, 5, 4.

Sd/- M.N. Prakash Kalappa, KAR-1996-2000
Advocate & Legal Consultant,
#2-3, First Floor, PRI Complex, 67/7A,
New Sayyaji Rao Road, Fort Mohalla,
Mysore-570 004. Mob: 93431-12535

ಮೈಸೂರು: 31–10–2022